ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಕುಸುಮಬಾಲೆ

ದೇವನೂರ ಮಹಾದೇವ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಕುಸುಮಬಾಲೆ

**ದೇವನೂರ ಮಹಾದೇವ**

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು – ೫೬೦ ೦೦೨

**KUSUMABĀLE :** A Kannada Novel by **Devanoora Mahadeva,**
Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : ಥಥಾ + ೧೫೩
ಬೆಲೆ : ರೂ. ೪೫/–

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೬೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

**(ಬಿ.ಎಸ್. ಯಡಿಯೂರಪ್ಪ)**

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

**(ಗೋವಿಂದ ಎಂ. ಕಾರಜೋಳ)**

## ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಕಷ್ಟಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಹೊನ್ನುಡಿ

ನಾಡಿನ ಭಾಷೆ, ಸಂಸ್ಕೃತಿ ಮತ್ತು ಜನಜೀವನದ ಪರಿಮಾಣವನ್ನು ಅಳೆಯುವುದರಲ್ಲಿ ಅಲ್ಲಿನ ಸಾಹಿತ್ಯದ ಕೃತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಸುಮಾರು ಎರಡು ಸಾವಿರದ ಐದನೂರು ವರ್ಷಗಳಿಗೂ ದೀರ್ಘವಾದ ಐತಿಹಾಸಿಕ ಪರಂಪರೆ ಚೆಲುವ ಕನ್ನಡ ನಾಡಿನದು. ಹಾಗೆಯೇ ಅದರ ಸಾಹಿತ್ಯ ಕೂಡ ಪಂಪ, ಕುಮಾರವ್ಯಾಸ, ಶರಣರು, ದಾಸರು ಮೊದಲಾದವರಿಂದ ಸಮೃದ್ಧವಾಗಿ ಬೆಳೆದಿದೆ. ಅದರ ಸಮೃದ್ಧತೆಗೆ ಏಳು ಜ್ಞಾನಪೀಠಗಳ ಗರಿಮೆಯೇ ಸಾಕ್ಷಿ.

ಕರ್ನಾಟಕವು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಈ ಸಂದರ್ಭದಲ್ಲಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ಆಚರಿಸುತ್ತಿರುವುದು ಒಂದು ಐತಿಹಾಸಿಕವೂ ಹಾಗೂ ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ.

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಅಂಗವಾಗಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಹಾಗೂ ಸೃಜನೇತರ ಪ್ರಕಾರದ ೧೦೧ ಕೃತಿಗಳನ್ನು, ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ.

ಈ ವಿಶಿಷ್ಟ ಕೃತಿಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿ ಅಧ್ಯಕ್ಷರಿಗೆ ಹಾಗೂ ಸದಸ್ಯರಿಗೆ ನನ್ನ ವಂದನೆಗಳು. ಈ ಸಾಹಿತ್ಯ ಮಾಲಿಕೆಯನ್ನು ಸಾಹಿತ್ಯಾಭಿಮಾನಿಗಳು ಸ್ವಾಗತಿಸುವ ಮೂಲಕ ಈ ಕೃತಿಗಳ ಸದುಪಯೋಗ ಪಡೆದುಕೊಳ್ಳುತ್ತಾರೆಂದು ಭಾವಿಸಿದ್ದೇನೆ.

**(ಐ.ಎಂ. ವಿಠ್ಠಲಮೂರ್ತಿ)**
ವಿಶೇಷಾಧಿಕಾರಿಗಳು
ವಿಶ್ವ ಕನ್ನಡ ಸಮ್ಮೇಳನ

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

**(ರಮೇಶ್ ಬಿ.ಝುಳಕಿ)**
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕ್ಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿ ರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕ್ಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪೂರ್ವಿಕ

ಮಾದಾರ ಮಲೆ ಮಾದೇಶ್ವರಂಗೆ

ಅರ್ಪಿತ

# ನನ್ನ ಮಾತು

೨೦೧೧ರ ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಕುಸುಮಬಾಲೆಯು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮರುಮುದ್ರಣ ಕಾಣುತ್ತಿದೆ.

ಕನ್ನಡ/ಮಾತೃಭಾಷೆಯು ಪ್ರಾಥಮಿಕ ಶಿಕ್ಷಣ ಮಾಧ್ಯಮವಾಗದೆ ನಡೆಯುವ ಯಾವುದೇ ಕನ್ನಡ ಸಮ್ಮೇಳನವೂ, ಅದರ ಸಂಭ್ರಮವೂ ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವಿನಂತೆ ದುರಂತಮಯವಾಗೇ ನನಗೆ ಕಾಣುತ್ತದೆ.

ಇದರ ನಡುವೆಯೇ ಸಮ್ಮೇಳನಗಳಲ್ಲಿನ ಪುಸ್ತಕ ಮೇಳ ಪುಸ್ತಕ ಪ್ರೀತಿ ಕನ್ನಡಕ್ಕೆ ಒಂದಿಷ್ಟು ಅರ್ಥ ಅಭಿರುಚಿ ತಂದುಕೊಡುತ್ತಿದೆ.

ಈ ಹಿನ್ನಲೆಯಲ್ಲಿ ಕುಸುಮಬಾಲೆಯ ಓದಿನೊಡನೆ ನನ್ನ ಮೇಲಿನ ಮಾತೂ ಕೂಡಿಕೊಳ್ಳಲಿ. ಪ್ರಕಟಿಸಿದ್ದಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕೃತಜ್ಞತೆಗಳು

೧೨.೨.೨೦೧೧ **– ದೇವನೂರ ಮಹಾದೇವ**

ಮೈಸೂರು

## ಲಯಾಕಾರ ವಿನ್ಯಾಸಕರ ನುಡಿ

ನಾನು, ಕಲ್ಯಾಣ ಬಸವಾಸಿ ವಿಜಯನಗರ ಮೇಲುಕೋಟೆ ಶಂಭುಲಿಂಗನ ಬೆಟ್ಟ ಶಿವಮೊಗ್ಗ ಚಿತ್ರದುರ್ಗ ಆಂದ್ರ ತಮಿಳುನಾಡು ಎಂದು ಮುಂತಾಗಿ ದಕ್ಷಿಣ ಭಾರತದ ಕರ್ಮಭೂಮಿಯನ್ನೆಲ್ಲಾ ಪ್ರವಾಸ ಮಾಡಿ ಸುಮಾರು ೬೦ ವರ್ಷಗಳಾದ ಮೇಳೆ ಮೈಸೂರಿಗೆ ಬಂದುದೇ ಕ್ರಿ.ಶ. ೨೦೦೬ರಲ್ಲಿ– ಕುಸುಮಬಾಲೆ ಓದುತ್ತಾ– ನನ್ನ ಆಧ್ಯಾತ್ಮಿಕ ಸಂಚಾರದಲ್ಲಿ ನಾನು ಆಲಿಸಬೇಕೆಂದಿದ್ದ ಈ ಸೂಕ್ಷ್ಮ ಸಂವೇದನೆಯು ಜನರ ವೇದನೆಯನ್ನು ಕಳೆಯಲು ಸಣ್ಣಗೆ ಹಾಡಿದ ಸಂತೈಕೆಯ ಸ್ವರದ ಸಂಜೀವಿನಿ ಧ್ವನಿಯಂತೆ ಕೇಳಿಸಿತು.

ಎಲ್ಲಿಯೂ ವಾಚ್ಯ ಮಾಡದ ಕುಶಾಲು ಚೇಷ್ಟೆ ವಿಡಂಬನೆಗಳಿಂದಲೇ ಸುತ್ತಿದ ಒಂದು ಕರುಣೆಯ ಕತೆಯನ್ನು ಕಾರುಣ್ಯದಿಂದಲೇ ಹೇಳಿದಂತಿರುವ ಈ ಕುಸುಮಬಾಲೆಯ ಪುಟಗಳನ್ನು ಮರಳಿ ಮೊದಲಿನಿಂದ ತಿರುವಿ ಹಾಕುತ್ತಾ– ಕ್ರಿಸ್ತುನು ಸತ್ತ ಮೇಲೆ ಅವನ ಶಿಷ್ಯರು ಬಿಟ್ಟ ನಿಟ್ಟುಸಿರಿನಂತೆಯೆ ಇದಾಗಿದ್ದು–ತನ್ನ ದುಃಖವನ್ನು ರೂಪಾಂತರದಲ್ಲಿ ಕಥೆ ಮಾಡಿ ಹೇಳುತ್ತಲಿರುವಂತೆನಿಸಿತು. ಇದು ಹೊರಗಿನಿಂದ ಹೇಳಿದ ಕೇವಲ ಸಾಹಿತ್ಯವಲ್ಲ. ಒಳಗಿನಿಂದ ಅರಳಿದ ಅನುಭವ ಎಂದೂ ಸಹೃದಯ ಇದನ್ನು ಒಪ್ಪುವುದರಲ್ಲಿ ಅತಿಶಯವೇನೂ ಇಲ್ಲ.

ಮಹಾದೇವ ಅನುಸರಿಸಿರುವ ಕಥನ ರೀತಿಯ ಜಾನಪದೀಯವಾಗಿ ಕಂಡರೂ ಅದು ಸಂಪೂರ್ಣ ಜಾನಪದೀಯವಲ್ಲ. ಪಂಪನು ದೇಸೀ–ಮಾರ್ಗಗಳನ್ನು ಮಿಶ್ರ ರೂಪಮಾಡಿ ಹೊಸ ತಿರುಳ್ಗನ್ನಡವನ್ನು ಕಂಡುಕೊಂಡಂತೆ ಮಹಾದೇವ ಕೂಡ ಜಾನಪದೀಯ ಮತ್ತು ಚಾಲ್ತಿಯ ರೀತಿಗಳನ್ನು ಮಿಶ್ರಮಾಡಿ ಭಾಷೆಯನ್ನು ಹೇಗೋ ಹಾಗೆ ಕಥನ ರೀತಿಯನ್ನೂ ಒಂದೂ ವಿಶಿಷ್ಟ ಮಿಶ್ರಣದಲ್ಲಿ ಪಂಚಲೋಹಪಾಕ ಮಾಡಿದ್ದಾರೆ.

"ಆ ಬೆಳಕು ತನ್ನ ಶಕ್ತಿ ಮೀರಿ ಹಬ್ಬಿಯೂ ಕಣ್ಗಳ ಓಡಿಸಿದಷ್ಟೂ ಇನ್ನೂವಿ ಕಂಡುಬರುತ್ತಿದ್ದ ಆ ಒಂದೂರಷ್ಟಿದ ಹಟ್ಟಿಯ ಒಕ್ಕಡ ಮೂಲೇನಾದರೂ ತಲಪಲು ಅದಕ್ಕಾಗದೆ ಏದುಸಿರಾಗಿ ನಿಂತಿತು"–ಇಂಥ ಅನೇಕ ಸಂದರ್ಭಗಳಲ್ಲಿ ಮಹಾದೇವ ಶೂನ್ಯ ಪದಾರ್ಥಗಳನ್ನು ಸಮಾನ ಕುತೂಹಲದಿಂದ ಗಣನೆಮಾಡುತ್ತಾ ಇಲ್ಲೆಲ್ಲ ಭಾಷೆ–ಅದು ಗ್ರಾಮ್ಯವೇ ಆದರೂ–ಅಲ್ಲಿಯೂ ಯಥಾರೂಪದಲ್ಲಿರದೆ ಕಾವ್ಯದ ಆವೇಶದಲ್ಲಿ ಕಾಮರೂಪಿಯಾಗಿಬಿಡುತ್ತದೆ. 'ಅವನ ತುಟಿ ಮಿಸ್ಗಳು ತಮ್ಮಟ

ಮುಂದ ಹೈಕ್ಳು ಕುಣಿವಂತೆ ಕುಣೀತೊಡಗಿದವು'– ಈ ವರ್ಣನೆಗಳೆಲ್ಲ(ವಾಚಿಕ)– ಆಹಾರ್ಯಕಾ (ಆನುಭಾವಿಕ) ಎಂಬಂತೆ ಬಹಳ ನಾಟಕೀಯವಾಗಿ ಇವೆ. ಹಾಗೆಯೇ ಜ್ಯೋತಮ್ಮನ ಬಾಯಿಯಲ್ಲಿ ಬರುವ "ಈ ಏಡು ನೇತ್ರಗಳಿಂದ ನೋಡಕಾಗಲ್ಲ ಕಣವ್ವ" ಎಂಬಂತ ಮಾತು ಮಾನವ ಗೆಳತಿಯರ ನಡುವಿನ ದೇವತೆಯ ಮಾತಿನಂತಿದೆ.

"ತನ್ನ ಆಸ್ತಿಯಾದ ಅಳುವ ಅಳಲೂ ತ್ರಾಣವಿಲ್ಲದವಳಾಗಿ ಕಿತ್ತು ತೂರಾಡುತ್ತಿದ್ದ ತನ್ನವು ಕೂದಲುಗಳ ತನ್ನೇಡು ಕೈಗಳಿಂದಲೂ ಬಾಚಿಕೊಳ್ಳುತ್ತಾ" ಎಂದು ಮುಂತಾದವೆಲ್ಲಾ ಬಂದೂ ಇದು ಕಾದಂಬರಿಯ ಚಾಲ್ತಿಗದ್ಯವಲ್ಲ; ಸಾಂದ್ರಭಾವದ ಸುಂದರಕಾವ್ಯ.

"ಕಣ್ಣ ಅರತಗದು ಸುತ್ತಲ ಜನ್ವ ನೋಡಿ ಕಣ್ಣು ಮುಚ್ಚಿ ಆಮ್ಯಾಲೆ ಅರಗಣ್ಣು ಬುಟ್ಟು ಮುಚ್ಚಿ ಈ ಪ್ರಕಾರ ಮಾಡುತಲಿತ್ತು"

"ಅವನ ದುಃಖ ಆ ಗುಳ್ಳು ಆವರಿಸಿ ಆ ಗುಳ್ಳಿಂದಲೂ ಎದ್ದು ಆ ಊರ ಆವರಿಸಿಕೊಂಡಿತು ಆ ಊರಿಂದಲೂ ಎದ್ದು ಬಾನು ತುಂಬಿತು"

"ಬಂದವರು ಯಾರ. ಹೋದವರು ಯಾರ. ಯಾರೋ ಬಂದರು. ಬಂದವರು ಯಾರೋ ಆ ಮೂಳ್ವ ಗೋರ್ಕಂಡರು....."

ಇದೆಲ್ಲ ಕನ್ನಡದಲ್ಲಿ ಎಂದೂ ಮೈದೋರದ ಮನೋಹರ ಭಾಷಾ ಸರಸ್ವತಿಯ ಅಪೂರ್ವಸೊಬಗು. ಕುಸುಮಬಾಲೆಯೊಂದು ಲಯಬದ್ಧವಾದ ಪದ್ಯಗಂಧೀ ಕಾವ್ಯ. ಇಲ್ಲಿ ಬಳಸಿರುವ ಭಾಷೆಯ ರೂಪ ಗದ್ಯವೇ ಅಲ್ಲ, ಅದು ಛಂದೋಗಂಧಿಯಾದ ಪದ್ಯ. ಹಾಗೆಂದು ಅದು ಶರಣರ ವಚನದ ಲಯದಲ್ಲೂ ಇಲ್ಲ. ಮಹಾದೇವ ಇಲ್ಲಿ ಕಾವ್ಯಕ್ಕೆ ಬಳಕೆಯಾಗಬಲ್ಲ ಅಭಿನವ ರೀತಿಯ ಪದ್ಯಶೈಲಿಯನ್ನು ರಾಜಸೂಯದ ಕುದುರೆಯನ್ನೆಂತೋ ಅಂತೆ ಬಿಟ್ಟಿದ್ದಾರೆ. ಇದನ್ನು ಬರೆದ ದೇವನೂರ ಮಹಾದೇವರು–ತಮ್ಮ ಈ ಕೃತಿಯುದ್ದಕ್ಕೂ ಪಾತ್ರಗಳು ತಮ್ಮ ರಕ್ತ ಮತ್ತು ಅನುರಕ್ತಿಗೆ ಅನುಗುಣವಾಗಿಯೇ ಪ್ರಕಟವಾಗುವಲ್ಲಿ ತಮ್ಮ ಪ್ರತಿಷ್ಠೆಯನ್ನು ಮುಂದುಮಾಡದೆ– ಆಗಬೇಕಾದ್ದನ್ನು ಆಗಲು ಒಂದು ಗಿಡಮರವನ್ನಂತೆ ಸಲಹಿ–ಬರಬೇಕಾದ್ದು ಅಷ್ಟೇ ಸಲೀಲವಾಗಿ ಸ್ವಾನುಭಾವಕ್ಕೆ ಬರುವಂತೆ ಬರೆಯುವುದೇ ಮಹಾಕಾವ್ಯವೆಂದು ತಿಳಿದವರು.

ತಮ್ಮ ಮಾತುಕತೆಯ ಮೂಲಕ ಕತೆ ಆರಂಭಿಸುವ ಇಲ್ಲಿನ ಜೋತಮ್ಮಗಳು ಸಮಾಜದ ಮುಖವಾಣಿಗಳಾಗುತ್ತದೆ. ಅಧಿದೇವತೆಗಳಂತೆ ಕಾಣುತ್ತವೆ. ಅಕ್ಕಪಕ್ಕದ ಕೇರಿ ಹೆಣ್ಣುಗಳು ಅಧಿದೇವತೆಗಳಾಗಿದ್ದಾರೆ. ಆ ದೇವತೆಗಳು ಕೇರಿ ಹೆಣ್ಣುಗಳಾಗಿ ಮಾತಾಡುತ್ತಿದ್ದಾರೆ– ಇಲ್ಲಿ ಕತೆಗಾರ ಇಲ್ಲ–ಉದ್ಭವಲಿಂಗದಂತಿರುವುದು ಈ ಹುಟ್ಟುಕತೆ.

ಕುಸುಮಬಾಲೆಯ ಕಥೆಯು ಕಾಲಾನುಕ್ರಮದಲ್ಲಿ ಅದು ಮುಖ್ಯವಾದ

ಕಥಾ ವಸ್ತುವಾಗುವುದಾದರೂ ಅದು ಅಲ್ಲಿಂದ ಹಾಗೆಯೇ ಮುಂದುವರಿಯದೆ, ಸಿಂಹಾವಲೋಕನ ಕ್ರಮದಲ್ಲಿ–ಆ ಕುಸುಮಬಾಲೆಯ ತಂದೆ ಸೋಮಪ್ಪನ, ಅವನ ತಂದೆ ಯಾಡನ, ಅವನ ತಾಯಿ ಅಕ್ಕಮಹಾದೇವಮ್ಮನ ಹಾಗೆಯೇ ಕುಸುಮಬಾಲೆಯ ನಲ್ಲ ಚನ್ನನ ಬಂಧು ಬಳಗದ ಕತೆಯನ್ನು ಈ ಕೃತಿ ಪ್ರಾರಂಭವಾಗುವುದು ಅಲ್ಲಿಂದಲೇ ಎಂಬಂತೆ ಬಿತ್ತರಿಸುತ್ತದೆ.

ಕುಸುಮಬಾಲೆಯಲ್ಲಿ ದೇವನೂರ ಮಹಾದೇವರು ಅನಿರ್ಬಂಧಿತ ಪ್ರೇಮ ಸಂಬಂಧವೆಂಬ ದಾಳಿಯ ಮೂಲಕ ಜಾತಿವ್ಯವಸ್ಥೆಯನ್ನು ಗೇಲಿ ಮಾಡುತ್ತಾ, ಮಾನ್ಯತೆ ಇರುವುದು ಬದುಕುವ ಬದುಕಿನಿಂದಾಗಿಯೇ ಹೊರತು, ಹುಟ್ಟಿದ ಜಾತಿಯಿಂದಲ್ಲವೆನ್ನುತ್ತಾ ಜಾತೀಯತೆಯನ್ನು ಆನುಭಾವಿಕವಾಗಿ ಗೇಲಿ ಮಾಡುತ್ತ, ಅಕ್ಕಮಹಾದೇವಮ್ಮನನ್ನಾಗಲಿ ಕುಸುಮಬಾಲೆಯನ್ನಾಗಲೀ ವ್ಯಭಿಚಾರಿಗಳೆಂದೂ ಪರಿಗಣಿಸದೆ ಅವರನ್ನು ಕಾವ್ಯ ನಾಯಿಕೆಯರನ್ನಾಗಿ ಮಾಡಿ ಮಹಾಕಾವ್ಯದ ಕಥಾ ವಿಸ್ತಾರವನ್ನು ಬೆಳಸಿರುವ ಈ ಕಾವ್ಯದ ಶರೀರ ಶಾರೀರ ಎರಡನ್ನೂ ಗಮನಿಸಿದರೆ. ರೂಢಿಗತವಾಗಿ ಇದನ್ನೊಂದು ಕಾದಂಬರಿ ಎಂಬಂತೆ ಕರೆಯುವುದು ಅಜ್ಞಾನ. ವಾಸ್ತವವಾಗಿ ಶಿಷ್ಟ ಪರಿಸರವಿಲ್ಲದೆ ಕೇವಲ ಹಳ್ಳಿಗಾಡಿನವರಾಗಿ ಪ್ರಾಕೃತ ಕನ್ನಡವನ್ನೇ ಮಾತಾಡುತ್ತಿರುವ ಈ ತಾಯಂದಿರನ್ನು ಕುರಿತಂತೆ ಅದೇ ಜಾನಪದ ರೂಪದ ಧಾಟಿಯಲ್ಲೇ ಹರಡಿಕೊಂಡಿರುವ ಈ ಕೃತಿಯನ್ನು ಒಂದು ಅಭಿನವ ಜಾನಪದ ಕಾವ್ಯವೆಂದು ಮಾತ್ರವಲ್ಲ, ಮಹಾಕಾವ್ಯವೆಂದೇ ನಿರ್ಧರಿಸುವುದು ಒಳ್ಳೇಯದು.

ಒಂದು ದೇಶದ ಜನ ಜಾತ್ಯತೀತವಾಗಿ ಕೂಡಿಬಾಳಬೇಕಾದ ಅಗತ್ಯವನ್ನು ನೇತ್ಯಾತ್ಮಕವಾದ ರೀತಿಯಲ್ಲಿ ಆಡುಮಾತಾಗಿ ಬರೆದ ಈ ಕೃತಿಯ ಈ ಎಲ್ಲ ವೀವೇಕ ವಿಚಾರವೂ ಸಮಾಜದ ಹೊರಮೈಯ ಸ್ಥೌಲ್ಯ ಮತ್ತು ವಿವರಗಳಿಂದ ಸ್ಫೋಟಗೊಳ್ಳದೆ, ಪಾತ್ರಗಳ ಆಂತರಿಕ ಸಂವೇದನೆಗಳ ಪ್ರತಿಮಾತ್ಮಕ ಅಭಿವ್ಯಕ್ತಿ ವಿಧಾನದಿಂದ ಅರಳಿ, ಆನುಭಾವಿಕ ಪರಿಮಳ ಸೂಸುತ್ತ, ಅಲ್ಲಿ ಕಥನ ಕ್ರಿಯೆಯೂ ಘಟನಾತ್ಮಕ ಆರ್ಭಟವಿಲ್ಲದೆ, ಆಂತರಿಕವಾಗಿ ನಡೆಯುವ ಚಿಂತನೆಗಳ ವಿಶ್ಲೇಷಣೆಯ ವೈಖರಿಯಿಂದಲೇ ತನ್ನ ಕೃತಕೃತ್ಯತೆಯನ್ನು ಸಾಧಿಸುತ್ತದೆ. ಈ ಒಂದು ಸುಂದರ ವಾಗ್ವೈಭವದ ನಿರೂಪಣೆಯನ್ನು ಹೀಗೆ ಗದ್ಯವೆಂದು–ಪದ್ಯವೆಂದು ವಿಭಾಗಿಸುವ ಉದ್ದೇಶ ಉದ್ದೇಶಪೂರ್ವಕವೆನ್ನಲು ಆಸ್ಪದವಿದೆ. ತಮ್ಮ ವಾಣಿಯನ್ನು ಹಾಗೆ ವಿಭಾಗಿಸಿ ನೋಡುವ ಕೃತಕತೆಯ ಅಗತ್ಯ ದೇವನೂರರಿಗೆ ಬಂದಿಲ್ಲ. ಜಾತರೂಪ ಕಾವ್ಯವನ್ನು ವರಕವಿಯೊಬ್ಬರು ಭಾವಿಸುವುದೇ ಹೀಗೆ. ಒಮ್ಮೊಮ್ಮೆ ಅವನು ತಾನು ಬರೆದ ಕಾವ್ಯವನ್ನು ತನ್ನದಲ್ಲವೆಂದು ನಿರಾಕರಿಸಿಕೊಳ್ಳುವ ತನ್ಮಯ ಸಾಕ್ಷಿಯಾಗಿಬಿಡುತ್ತಾನೆ.

ಆದ್ದರಿಂದಲೇ ಸಾಮಾನ್ಯಾರ್ಥದಲ್ಲಿ ಅದೊಂದು ಕತೆಯೋ ನೀಳ್ಗತೆಯೋ

ಕಡೆಗೆ ಕಾದಂಬರಿಯೋ ಆಗದೆ ಮತ್ತು ಪಾತ್ರಗಳು ವಾಚಾಳಿಯಾಗಿರದೆ ಸ್ವಗತಲಹರಿಯಲ್ಲಿ ವಿರಮಿಸಿ, ಆಂತರಂಗಿಕ ಐಕ್ಯಸ್ಥಿತಿಯನ್ನೇ ಬಿಂಬಿಸುವುದರಿಂದ ಅದು ಒಂದು ನಾಟಕವೂ ಆಗದೆ–ಆಡುವ ಉಸುರಿನಂತೆ ಸಹಜ ಸರಾಗ ಸುಲಭವೇ ಆದ ಆಡುಭಾಷೆಯ ಉತ್ತಮ ಕವಿತೆಗಳು ಮೆರವಣಿಗೆ ಹೊರಟ ಒಂದು ಕಾವ್ಯವೋ ಮಹಾಕಾವ್ಯವೋ ಆಗುತ್ತದೆ.

ಈ ಕಾವ್ಯ ಮೆರವಣಿಗೆಯು, ಅದರ ಮೂಲಕೃತಿಯ ಗದ್ಯರೂಪದಲ್ಲಿ ಮುಸುಕಾಗಿಬಿಟ್ಟಿರುವುದನ್ನು ಗಮನಿಸಿ, ಓರ್ವ ಪರಿಣಿತ ಸವಾರನು ಕುದುರೆಯನ್ನೇರಿದಂತೆ ಈ ಕಾವ್ಯಲಯಕ್ಕನುಗುಣವಾಗಿ ಆಕಾರ ನೀಡುವ ಕೆಲಸವನಷ್ಟೆ ನಾನು ಇಲ್ಲಿ ಮಾಡಿದ್ದೇನೆ.

**ಎಲ್. ಬಸವರಾಜು**

ಮೈಸೂರು ೨೬.೦೭.೨೦೦೭

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಅಧ್ಯಕ್ಷರ ಮಾತು | v |
| ಹೊನ್ನುಡಿ | vi |
| ಎರಡು ನುಡಿ | vii |
| ಪ್ರಕಾಶಕರ ಮಾತು | viii |
| ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ | x |
| ನನ್ನ ಮಾತು | xiii |
| ಲಯಾಕಾರ ವಿನ್ಯಾಸಕರ ನುಡಿ | xiv |
| ಹೀಗೆ... | ೧ |
| ಕಲ್ಲೂ ನೀರೂ ಕರಗುತ್ತಿತ್ತೂ | ೩ |
| ಕುಸುಮಾಳ ತಂದೆ ಸೋಮಪ್ಪರು | ೯ |
| ಮಂಚದ ಕಥಾ ಆಲಿಸುತಲಿದ್ದ ಆ ಜೀವಾತ್ಮನು | ೧೭ |
| ಅಯ್ಯಾ ಅಲ್ಲಿ ಯಾಡನು | ೨೮ |
| ಈ ವ್ಯಾಳದಲ್ಲಿ ಮುಂಬರೋ ಕಿಚ್ಚು | ೪೧ |
| ಅತ್ತಗ ದೊಡ್ಡವನಾದ ಯಾಡನು | ೪೪ |
| ಇತ್ತ, ಕತ್ತಲು ಭೂಮಗ | ೫೦ |
| ಆಗಲೀಗ ಯಾಡನಿಗ ಯಾಕಕನಿ ದುಕ್ಕವು | ೫೬ |
| ಆಮ್ಯಾಲ ಬರಿಬೆಳಗುಗಲ್ಲೋ ಬೆಳುಕಾಗಿ | ೭೩ |
| ಅವರವರುಗ ತಿಳಿದ ರೀತೀಲಿ ನಡೆಯೂತಲಿರುವಾಗ | ೭೭ |
| ಅಲಲಾ ಅಂತ ಗೆಲುಗಾಡುತ್ತಿದ್ದವಲಾ | ೯೦ |
| ಆ ಗಾರಸಿದ್ದಾವಗ ಬಿದ್ದ ಏಟುಗಳನ್ನು ಬೀಜ್ವಮಾಡಿ ನೆಟ್ಟು | ೯೮ |
| ಅದಾಗಿ ಇದಾಗಿ ಈರಿ ಹೈದನ ಜೀವವು | ೧೦೪ |
| ಸುತ್ತಾಲೂ ಅಕ್ಕರೆಯು ಅರಳೂತ | ೧೧೬ |
| ಆಗಿ, ಹೊತ್ತು ಮೂಡುವ ಮೊದಲಾಗಿ | ೧೨೯ |

ಇತ್ತಗ ಚನ್ನನ ಅಪ್ಪನ ಕಣ್ಣಗಳಲಿ ೧೩೭
ದಲಿತ ಸಂಘದ ಓಡಾಟ ಕೂಡಿದ ಅಮಾಸಗ ೧೪೧
ಅದು ಕುಸುಮಾಳು ಇದ್ದಲ್ಲಿಗೂ ಬಂತು ೧೪೪
ಅಂತಿರುವಾಗ ಕುಸುಮಾಳು ೧೪೭
ಉಪಸಂಹಾರ ೧೫೨

# ಹೀಗೆ...

ಅಕ್ಕಮಹಾದೇವಮ್ಮನು ಗಂಡನ ತಿಥಿಯಾದ ಮಾರನೆಗೇ ತನ್ನ ತೌರಿಗೆ ಹೋದವಳು ಆರುವರುಷದ ಬಳಿಕ, ಅಪ್ಪ ಸತ್ತ ಹನ್ನೇಡು ತಿಂಗಳಿಗೆ ಹಟ್ಟಿ ಜೀತಗಾರನಿಗೆ ಹುಟ್ಟಿದವನೆಂಬ ಅಪವಾದದ ತನ್ನ ಕುಡಿ ಯಾಡನೊಡನೆ ಗಂಡನ ಮನೆಗೆ ಪಾಲಿಗಾಗಿ ಬರುವಳು. ಆಗ ಬಾವ ಬಸಪ್ಪಸೋಮಿ, ಮೈದುನ ಸಿದ್ದೂರರು ಕುಪಿತರಾಗಿ ಅವಳನ್ನು ಗೋಮಾಳದಲ್ಲಿ ಬಿಸುಡುವರು. ಬಿಸುಟಲ್ಲೇ ನೆಲೆಯಾದ ಅಕ್ಕಮಹಾದೇವಮ್ಮನ ಸುತ್ತ ಒಂದು ಜೋಪಡಿ ಎದ್ದು ಮುಂದೆ ಯಾಡ ಬೆಳೆದಂತೆ ಅವನ ಸಾಮರ್ಥ್ಯವೂ ಸೇರಿ ಆ ಜೋಪಡಿಯು ನಿಧಾನವಾಗಿ ಒಂದು ದೊಡ್ಡ ಮನೆಯಾಗಿ ಆ ದೊಡ್ಡಮನೆಗೆ ಕಾಲಾನುಕ್ರಮದಲ್ಲಿ ಬಸಪ್ಪಸೋಮಿ ಸಿದ್ದೂರರ ಹಟ್ಟಿಯೇ ದನದ ಕೊಟ್ಟಿಗೆ ಆಗುವುದು.
ಈ ಯಾಡೇಗೌಡನ ಮಗ ಸೋಮಪ್ಪ ಊರಿಗೆ ದೊಡ್ಡವರು. ಈ ಊರಿಗೆ ದೊಡ್ಡವರ ಮಗಳು ಕುಸುಮಬಾಲೆ. ಕುಸುಮ ಮತ್ತು ಹೊಲಾರ ಚನ್ನರ ನಡುವಿನ ಗುಪ್ತ ಸಂಬಂಧವು ಕುಸುಮಳಿಗಾದ ಮಗುವಿನಿಂದಾಗಿ ಬಯಲಾಗಿ ಅರಿವಾಗದೋಪಾದಿಯಲ್ಲಿ ಚೆನ್ನನ ಕೊಲೆಯಾಗುವುದು.

ಇತ್ತ ಇಡೀ ಊರಿಗೆ ಊರೇ ಕಿಚ್ಚು ಹಾಯಿಸೋ ಹಬ್ಬಕ್ಕೆ ಸಿದ್ಧವಾಗುತ್ತಿದ್ದರೆ, ಚನ್ನನ ಬಳಗಕ್ಕೆ ಸೇರಿದ ಕೆಂಪಿಗೆ ಹುಟ್ಟಿದ
ಕಂದನನ್ನು ಬದುಕಿಸಲು ತಾಯಿ ತೂರಮ್ಮ ವಿಧಿಯೊಡನೆ ಸೆಣಸುತ್ತ, ಅಲ್ಲೇ ತೂರಮ್ಮನ ಅಕ್ಕನ ಮಗಳು ಈರಿಯು ತನ್ನ ಸವೆಯುತ್ತಿದ್ದ ಕಂದನನ್ನು ಉಳಿಸಿಕೊಳ್ಳಲು ವಿಫಲಳಾಗಿ ಹಾಗೂ ಚೆನ್ನನ ಕೊಲೆ ಅರಿಯದ ಬಳಗವು ಕಾಯುವುದು ಚೆನ್ನನ ಬರುವಿಗಾಗಿ.

ಎತ್ತಣ ಮಾಮರ ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯ?!
ಬೆಟ್ಟದ ನೆಲ್ಲಿಯಕಾಯಿ ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ
ಸಂಬಂಧವಯ್ಯ?!
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯ?!

–ಅಲ್ಲಮ

* * * *

X

## ೧ ಕಲ್ಲೂ ನೀರೂ ಕರಗುತ್ತಿತ್ತೂ

ಕಲ್ಲೂ ನೀರೂ ಕರಗುತ್ತಿತ್ತೂ
ಆಗ
ಕ್ರಿಯಾ ಮುಗಿಸಿದ ಜೋತಮ್ಮದೀರು
ಕಸ್ಟ ಸುಕ ಮಾತಾಡಿಕೊಳ್ಳಲು
ಆ ಗವ್ವಗತ್ತಲ ಊರಮುಂದಲು
ರೂಢಿಗತದಂತೆ ಕೂಡಿದರು.
ಅವರು ಮಾತಾಡ್ಲಿ ಅಂತ ಇವರೂ
ಇವರು ಮಾತಾಡ್ಲಿ ಅಂತ ಅವರೂ–ಹೀಗಿದ್ದರು.

ಆಗ ಅಲ್ಲಿಗೊಬ್ಬಳು ಹೊಸ ಜೋತಮ್ಮನು
ಇಸ್ಕೂಲಮನೆ ದಿಕ್ಕಿಂದ ಬಂದವಳು
ಬಸ್ಸಿನವರು ದಾನವಾಗಿ ಕಟ್ಟಿಸಿದ್ದ ಜಗುಲಿಕಲ್ಲಮ್ಯಾಲ
ಉಸ್ಸೋ ಎಂದು ಕೂತು ನಿಟ್ಟುಸುರಾದಳು.
ಆಗಲು, ಊರ್ಗ ದೊಡ್ಡೋರ ಹಟ್ಟಿ ಜೋತಮ್ಮನು
“ಯಾವೂರ ತಾಯಿ ನಿಂದು?” ಎಂದಳು.

“ಅಯ್ಯೋ ನಂಗೂ ಯಾವೂರು ಯಾವ್‌ಕೇರಿ ಅಕ್ಕಯ್ಯ?
ನಾನೊಬ್ಳು ಪಾಪಿ ಪರ್ದೇಸಿ,
ಇದ್ದರೆ ಈ ಊರೂ, ಎದ್ದರೆ ಮುಂದ್ಲೂರು.
ಈಗ ಊರ್ಗ ಬಂದಿರೊ
ದೊಂಬ್ರ ಕಡೆಯೋಳು...”

“ಅವ್ವವ್ವಾ! ನಿನ್ ಮಾತ್ಲೆ ಏನ್ ಬಿನ್ನಾಣ ಇಸ್ಟೊಂದು!
ಇನ್ನು ನಿನ್ನೊಳಗ ಇನ್ನೆಸ್ಟೊ!
ಕೇಳ್ತಾ ಇರೋದೇ ಒಂದು ಐಭೋಗ

ಎಷ್ಟೇ ಆದ್ರೂ ನೀನು ಊರೂರು ತಿರ್ಗವಳು
ಇಂದ್ಗ ಹನ್ನೆಡು ವರ್ಸದ ಮಳಬೆಳದಲ್ಲಿ ಬಂದಿದ್ಯಲ್ಲ
ಅಫ್ಗಿಯಾ?"

"ಅಫ್ಗಿಯಾಕಣ್ರೀ ಅಕ್ಕಯ್ಯ!
ಇನ್ನೂ ನನ್ ನೆಪ್ಪು ತಮ್ಗ ಚಿಗುರಾಗಿದೆಯಲ್ಲಾ!
ಇದಲ್ವಾ ನನ್ ಪುಣ್ಯ!"
ಎಂಬುದಾಗಿ ಹೊಸ ಜೋತಮ್ಮ ಚೋಜುಗದಲ್ಲಿರಲು–ಉಳುದ
ಜೋತಮ್ಮದಿರು
ಹೊಸಬಳ ಮುಟ್ಟ ತಟ್ಟ ಮಾತಾಡುಸ್ತ
ಅಲ್ಲಿ ಗಲುಗುಗದ್ದಲ ಎದ್ದೇಳಿತು.

ಆಗ ಊರ್ಗ ದೊಡ್ಡೋರ ಹಟ್ಟೀ ಜೋತಮ್ಮನು–
'ಅದ್ಯಾನ ಅಸ್ಟು ಮಾತಾಡೀರೀ ಕೇಳ್ರಮ್ಮಿ ಯಮ್ಮಗಳ,
ಇವತ್ತು
ನಮ್ಮಟ್ಟಿ ಕುಸುಮ್ನ ಗಂಡ ಬಂದಿದ್ದ.
ಬಂದವ,  ಕೂಸ್ನೂ ಹೆಡ್ತೀನೂ ಚಣೊತ್ತು
ನೊಡ್ದನೋ ನೋಡ್ನೇ ಇಲ್ವೋ?
ನಿಲ್ದೆ ಹೊಂಟೇಬುಡಾದ ಪುಣ್ಣಾತ್ಮ ...!"

"ಅಯ್ಯಯ್ಯೊ ಎಲ್ಲಾದ್ರು ಉಂಟವ್ವಾ!
ಆ ಥರ್ವಾಗಿ ಯಾಕಾರೂ ಮಾಡ್ದನವ್ವ?"

"ನಾ ಯಾನ್ ಹೇಳಲವ್ವ ತಾಯಿ?
ಕೂಸ ನೋಡ್ತ, ಕೆಂಪ್ಗಿರೋ ಅವ್ನ ಮೊಕವು
ಕಪ್ಪಾಗೋಯ್ತು!
ಕುಸುಮೀನ ಯಾನ ಅನ್ಲಿಲ್ಲಾ... ಎತ್ತ ಅನ್ಲಿಲ್ಲ...
ಸಟುಗ ಕಣ್ಣೆತ್ತೂ ನೋಡ್ನಿಲ್ಲಾ!
ಕಡ್ದು ಹೊಂಟೋಯ್ತಿದ್ದ..."

"ಅಯ್ಯಯ್ಯೋ ಎಲ್ಲಾದ್ರು ಉಂಟವ್ವಾ?
ಆ ಥರ್ವಾಗಿ ಯಾಕಾರೂ ಮಾಡ್ದನವ್ವಾ..?"

"ಅದ್ಕ ನಾನಾದ್ರು ಯಾನ್ನ ತಾನೇ ಹೇಳಲವ್ವ ತಾಯಿ?"

"ಅಕ್ಕೈ ನಾ ಹೇಳ್ತೀನಿ ತಾಳಿ ಅದ..." ಎಂದು
ಸೊಪ್ಪುಸೊದ ಯಾಪಾರಸ್ಥೆ ತೊರಾರ ಹಟ್ಟೀ ಜೋತಮ್ಮ
ನುಡಿಯಲು, ಸಿಡುಕಾಗಿ ದೊಡ್ಡೋರ ಹಟ್ಟೀ ಜೋತಮ್ಮ
"ಅಯ್... ನೀ ಎಲ್ಲಾಕು ಬಾಯಾಕಂದು ಬವ್ವ!
ಆ ಹಟ್ಟಿ ತಳಪಾಯ್ದ ದಿನವೇ ಹುಟ್ಟಿರೋ ನಂಗಿಯ
ಗೊತ್ತಿಲ್ವಂತ....ಇನ್ನು ಯಾನ್ನ ನೀ ಹೇಳದೂ?" ಎಂದಳು.

ಈ ಸಿಡುಕಿಗೆ ಸೊಪ್ಪು ಹಾಕದ ಹೊಲಾರ ಮಾರಿಗುಡಿ ಜೋತಮ್ಮನು–
"ಅದ್ಯಾಕ ಅವ್ವ ಬಾಯ್ ಮುಚ್ಚಿಸಿರಿ
ನೀವು? ಏನೇನ್ ಕಂಡಿದ್ದಳೋ ಅವಳು !
ಹೇಳ್ಲಿ ಬುಡಿ,
ಅದ್ನೂ ಕೇಳವು ...." ಅಂದಳು.
ಆಗ ದೊಡ್ಡೋರ ಹಟ್ಟೀ ಜೋತಮ್ಮ
ಮೊಕ್ವ ಬಿಕ್ಕಂಡು
ತಾತ್ಸಾರವ ಉಸುರಾಡ್ತ ಅಂದಳು–
"ವ್ಹೂ ಹೇಳವ್ವ,
ಅದೇನ್ ನಿಂಗ ಕಂಡಿದ್ದದೋ
ಅದ್ನೂ ಕೇಳವು..."

ಆಗ ಒಂದ್ಸಲ ಸುತ್ತಾಲೂ ನೋಡಿ
ತೊರಾರ ಹಟ್ಟೀ ಜೋತಮ್ಮನು–
"ಅದಿಯಾ ಅತ್ಗವ್ಮೋರ..
ನಿಂ ಕುಸುಮುವಿ
ಆ ಹೊಲಾರ ಚನ್ನನೂವಿ ಕೂಡೋ ತಳವು

ನಮ್ ಜೋಪಡಿ ತಾನೀಯ
ಕೆಂಪಾಗಿರೊ ಗಂಡ ಹೆಂಡತೀಗ ಹುಟ್ಟಿರೋ ಕೂಸು
ಚನ್ನನ ಥರ್‍ವಾಗಿ ಕಪ್ಪಾಗಿ ಅದು ಹುಟ್ಟೀ...
ಅದನೀಗ ಕುಸುಮಳ ಗಂಡ ಅರುತ್ಗಂಡು..
ಅಂತೇನಾರು..."
ಅಂತ ಅಂದು ಮುಗಿಯುವುದರೊಳಗ
ಹಾರೂರ ಮನೆಯ ಜೋತಮ್ಮ–
"ಐ... ಎಲ್ರೂ ಮಾಡೋ ಯಥಾರ್ಥನೆ ಹೇಳ್ತಳ.
ಏನ್ ವಿಚಾರ್‍ವ ಅದು!"
ಎಂದು ದೊಡ್ಡೋರ ಹಟ್ಟಿ ಜೋತಮ್ಮನ ದಿಕ್ಕಿಗ ತಿರುಗಿ
ಅಂದಳು– "ಅವ್ವ ಮಾತು ಅಂಗಿರ್‍ಲಿಕಣಾ
ಕೂಸುಬಾಣ್ತಿ ಚೆನ್ನಾಗಿದ್ದಾರ?
ಅದ್ನಾರು ಕೇಳವು
ಹೇಳ್ರಿ ಅಕ್ಕಯ್ಯಾ..."

"ಕೂಸ್ಯಾನ ಆರೋಗ್ಗವಾಗಿ
ಚಂದಗಾಣಾಗಿ ಆಡ್ಕಂದದ.
ಆದ್ರ...
ತಾಯೀ,
ಅಯ್ಯೋ ಆ ನಮ್ಮ ಕುಸುಮ್ನಂತು
ಈ ಏಡ್ ನೇತ್ರಗಳಿಂದ ನೋಡಕ್ಕಾಗಲ್ಲ ಕನವ್ವ.
ಆ ಎಳೆ ನಗೂನುವಿ
ಈ ಎಳೆ ಚೆಲೂವ್ನುವಿ ಸೇರ್‍ಸಿ
ಬಟ್ಟಿ ಇಳ್ಸಿ ಮಾಡ್ದಂಗಿದ್ದವಳೂ...
ಸಿವಸಿವಾ
ಅವಳು ನಕ್ಕರೋ
ಅವಳ ಹಲ್ಲಿನ ಮ್ಯಾಗಲ ಆ ಒಂಚುಟ್ಟಿ ಸಿಂಗಲ್ಲಿನಲ್ಲೆ
ಈ ಲೋಕದ ಚಲೂನೆಲ್ಲ ಆ ಭಗವಂತ್ನು ಇಟ್ಟೂ...
ಆ ರತಿ ಅಂಬವಳ್ಳಿಯಾ

ಅದ್ನೀಗ ಹೆಂಗಾರೂ ಮಾಡಿ ಕಿತ್ಕಂಡು
ತನ್ನ ಹಲ್ಲ್‌ನ ಮ್ಯಾಕ್ಕ ಇಟ್ಟಗಬೇಕೂ ಅನ್ಸಂಗ ಇದ್ದವಳೂ!
ಈಗ
ಆ ನನ್ನ ಕಂದನೊಳ್ಗ
ಬಸ್ಕಂಡ್ರ ಒಂದು ಚಟಾಕು ರಗ್ತ
ಇದ್ದುದೋ... ಇಲ್ವೊ... ಅನ್ನಂಗವ್ಳೆ..."

ಈ ವಾಕ್ಷಕ ಯಾವ ಜೋತಮ್ಮದೀರ ಬಾಯಿಂದ್ಲೂ
ಮಾತು ಹೊರಡಲಾರದೆ ಕೆಲವರೋ ಲೊಚಗುಡ್ತ,
ಕೆಲವರೋ ಅಯ್ಯೋ ಅನ್ತ, ಉಳಿದವರು ದೀನವಾಗಿ ತಾವೇ
ನಿಟ್ಟುಸುರಾಗಿ ಕೂತು–
"ಯಾವ ದಿನ ಸೇರ್ಲಿ
ಇಂಥ ಕಸ್ಟದ ಮಾತ್ಗಳ ಕೇಳ್ಬೇಕೂ ನೋಡ್ಬೇಕಲ್ಲಾ!
ನಮ್ಮ ಹಾಳಾದ ಹಣೇಲಿ ಅದೇನ್ ಬರ್ದಿದ್ದಾದು?
ಆ ಭಗವಂತ ಯಾಕಾರು ನಮ್ ಹುಟ್ಟುಸ್ದಾ?
ನಮ್ಗ ಸಾವ್ನಾರೂ ಕೊಡಬಾರ್ದ?"
ತಲಗೊಂದು ಎಂದು ಮಾತಾಡ್ತ ಕೂತಿರಬೇಕಿರುವಾಗ,
ಆ ಕಡಾ ಐದ್ ಜನ, ಈ ಕಡಾ ಐದ್ ಜನಾ, ಹಿಂದ್ಯೆದ್ ಜನ,
ನಡುಮಧ್ಯಾ ಕುಸುಮಾಳ ಅಪ್ಪಾಜಿಯು ಮಾತಾಡ್ತ,
ಉಳುದವರು ಊಗುಟ್ತಾ
ಊರೊಳಕ್ಕ ಕಾಲಿಟ್ಟರು.

ಈ ಕಲಿಗಾಲದ ಜನಕ್ಕೆಲ್ಲ
ವೇಳ ಅವೇಳ ಅಂಬುದಿಲ್ಲದೆ,
ಒಂದು ಚಣೊತ್ತಾರೂ ತಾವು ನಿಂಬಳವಾಗಿ ಕೂತು
ಕಸ್ಟ ಸುಕ ಮಾತಾಡಿಕೊಳ್ಳಲಾಗದ
ಜೋತಮ್ಮದೀರು
ಬೇಜಾರು ತುಂಬ್ಕಂಡು
ಎದ್ದು ತಂತಮ್ಮ ತಳ ಸೇರ್ಕಂಡರು.

## ೨ ಕುಸುಮಾಳ ತಂದೆ ಸೋಮಪ್ಪರು

ಕುಸುಮಾಳ ತಂದೆ ಸೋಮಪ್ಪರು
ಹಟ್ಟಿ ಮುಂದಲು ನಿಂತ ನಿಲುವು ಬಿರುಸುಗೆ
ಬಾಗುಲ ಕಾಲ್ದೆಸೆಯಲ್ಲಿ ತಲ್ವ ಇಟ್ಟು
ತೂಕಡಿಸುತಲಿದ್ದ ಆಳುಮಗಗ ಬೆಚ್ಚಿಟ್ಟಂತಾಗಿ ಏಳಲು,
ಒಂದು ಆನ ನುಗ್ಗೂವಷ್ಟಿದ್ದ ಆ ದಾರಂದವು
ಆ ಊರಾಗಿದ್ದ ಊರು ಒಂದ್ಸಲ ಆಕಳಿಸಿದಷ್ಟು ಸಬುದ ಮಾಡ್ತ
ತಕ್ಕಂಡಿತು.
ಆಗಲೀಗ ಹಟ್ಟೀಯ ಒಳಗಿದ್ದೂ ಇದ್ದೂ
ಬೇಜಾರು ತುಂಬ್ಕಂಡಿದ್ದ ಕತ್ತಲು,
ಬಾಗಲು ತಗೆಯುವುದನ್ನೆ ಕಾಯುತ್ತಿದ್ದು
ಹೊರ ಬಂದುದೆ ಉಸುರು ಬುಡಲು,
ಹಾಗೆಯೇ ಹಟ್ಟೀ ಹೊರಗಿದ್ದ ಕತ್ತಲೂಗ
ತಾನೂ ಒಂದ್ಸಲ ಹಟ್ಟೀಯ ಒಳಚಂದ್ವ ನೋಡುವಾ ಅನ್ಸಿ
ಅದೋ ಒಳಬಂತು.

ಆಳುಮಗ ಓಡಾಡಿಕೊಂಡಾಗ
ಲಾಂಟೀನು ಬತ್ತಿ ಎತ್ತರಿಸಿ
ಮಿನುಗುಡೊ ಬೆಳೂಕ ದೊಡ್ಡದಾಗಿಸಿದನು.
ಆ ಬೆಳುಕುವು ತನ್ನ ಶಕ್ತಿಮೀರಿ ಹಬ್ಬಿಯೂ
ಕಣ್ಗಳ ಓಡಿಸಿದಷ್ಟೂ
ಇನ್ನೂವಿ ಕಂಡುಬರುತ್ತಿದ್ದ ಆ ಒಂದೂರಷ್ಟಿದ್ದ
ಹಟ್ಟೀಯ ಒಕ್ಕಡ ಮೂಲೆನಾರೂ
ತಲುಪಲು ಅದಕ್ಕಾಗದೆ
ಏದುಸುರಾಗಿ ನಿಂತಿತು.

ಆಳುಮಗ "ಅವ್ವರ ಏಳಿಸ್ಲ ಅಳಿ" ಅಂದನು.
"ಬ್ಯಾಡ, ನಂದು ನಂಜಲಗೂಡ್ಲೆ ಊಟಾಯ್ತುಕಣ,
ನೀ ಮಲಿಕ ಇನ್ನು..." ಎಂದು ಸೋಮಪ್ಪರು,
ಆಳುದ್ದುದ ಹದನಾರು ಚಪ್ಪಡಿ ಕಲ್ಲಿನ ತೊಟ್ಟಿಗ ಇಳುದು
ಕೈಕಾಲ್‌ಮೊಕ್ವ ತೊಳದು,
ಅದಾದ ಮ್ಯಾಲ
ಅರ್ಧ ಹಜಾರವ ಆವರಿಸಿದ್ದ ಮಂಚದ ಮ್ಯಾಲ ದೇಹವಿರಿಸಿ
ಒಂದು ಸಿಕರೋಟು ಹಚ್ಚಿ ಸೇದಿದರೂ
ಮನಸ್ಸು ನಿಂತಲ್ಲಿ ನಿಲ್ಲದಿರಲು
ಬಾಣ್ತಿಮನಲೀರೋ ಮಗಳು ಕುಸುಮಾಳ
ಒಂದ್ಸಲ ನೋಡುವ ಆಸೆ ಎದ್ದಾಡಿತು.

ಗಾಳಿ ಬೆಳೂಕೂಗಳ ತಡೆಗಟ್ಟಿ ನಿಂತಿದ್ದ
ಆ ಬಾಣಂತಿ ಮನೆಯು
ಕುಸುಮಾಳ ಉಸುರಾಟದಲಿ ಬೆಚ್ಚಗಿತ್ತು.
ಕೈಯಣ್ಣೆ ಸೊಳ್ಳಿನ ಬೆಳುಕು ಬೆಳೂಗ್ತ
ತಂಪಾಗಿ ಚೆಲ್ಲೊತ ಉರಿಯೂತ
ಅಲ್ಲೇ ಕುಸುಮಾಳ ತೋಳಮ್ಯಾಲ
ಹಗಲೂರಾತ್ರೀಯ ಪರಿವಿಲ್ಲದ
ಅವಳ ಕಂದಮ್ಮನು
ಕಣ್ಗಳ ಅರಳಿಸಿಕೊಂಡು
ಕಾಕು ಹಾಕ್ತ
ಕಯ್ಯುಕಾಲು ಕೆಳಗ್ಮೇಲಾಡುಸ್ತ ಆಡುತ್ತಿದ್ದರ,
ಅದರವ್ವ ತನ್ನ ಪರಿವಿಲ್ಲದ
ನಿದ್ದವಾಗಿದ್ದಳು.
ಅವಳ ಹನಿಬೆವುರುಗಳು ಆ ಹಣೆತುಂಬವೂ ಹರಡಿ
ಆಗಾಗ ಅವು ಒಡೆದು
ಮೊಕದಿಂದ ಕೆಳಕ್ಕ ಇಳಿಯುತ್ತಿದ್ದವು.
ಅವಳ ಕೂದಲೂ ಅವಳ ಮೊಕಕ್ಕೆಲ್ಲ ಚೆಲ್ಕಂಡು

ಆ ಬೆವೂರ ತ್ಯಾವಕ್ಕ ಅಂಟ್ಕಂಡು
ಅದೂನು ಅಲ್ಲಾಡದಿತ್ತು.

ಆ ಕೂಸು ಆಡುವ ಚೋದ್ಯವ ನೋಡ್ತಾ
ಕುಸುಮಾಳ ತಮ್ಮನಾಗಿದ್ದ ಹನ್ನೇಡು ವರುಸಾದ ಪರ್ಸಾದನು
ಎದುರೂಗ ಕೂತಿತ್ತು.
ದೇವಮಾನವರಂತೆ ರೆಪ್ಪೆ ಮಿಟುಕಿಸದ
ಆ ಬೆರಗು ಕಣ್ಗಳ ಒಳಕ್ಕ
ಕಯ್ಯಣ್ಣಿ ಸೊಳ್ಳಿನ ತಂಪಾದ ಬೆಳೂಕು ಬಿದ್ದು
ಅದು
ಅಲ್ಲಿಂದ ಇನ್ನೂವಿ ತಂಪಾಗಿ ನೆಲಕ ಚೆಲ್ಲುತ್ತಿತ್ತು.
ಇನ್ನು ಅವನ ಬಾಯಳತೆಗೆ ಮೀರಿ
ಸುರಿಯುತ್ತಿದ್ದ ಹೆಚ್ಚುವರಿ ಜೊಲ್ಲನ್ನು
ಭೂಮತಾಯಿ ತನ್ನೇಡು ಕೈಗಳಿಂದಲು
ಆತುಗೊಳ್ಳುತ್ತಿದ್ದಳು.

ಇದಕಂಡು,
ಮಗಳನು ಕಣ್ಣುಗ ತುಂಬಿಕೊಳ್ಳಲು ಬಂದ
ಸೋಮಪ್ಪಗ ಬಾರದ ನಗೂ ಬಂದು
“ಅಡ್ಯೆ ಪರ್ಸಾದ ಅದ್ಯಾನ ನೀನು?
ಇನ್ನೂವಿ ನಿನ್ ಕಣ್ಗ ನಿದ್ದ ಬಂದಿಲ್ವ?” ಅಂದರು.
ಪರ್ಸಾದ
ಬಾಯ್ತುಂಬಿದ್ದ ಜೊಲ್ಲ ಭೂಮತಾಯ್ಗ ಚಲ್ಲುಬುಟ್ಟು
“ಅಪ್ಪೆ ಇಲ್ನೋಡು, ಕೂಸು ಆಡ್ತ ಅದ!” ಅಂದನು.
“ಇನ್ನೇನ್ ಬೆಳಕರೀತಾದ.
ವೋಗು ನೀ ಮಲಿಕ” ಅಂದರು.
ಅಸ್ಟರಲ್ಲೆ ಬಾಯ್ಗ ತುಂಬ್ದ ಜೊಲ್ಲ
ಪರ್ಸಾದ ಕಟಬಾಯಲ್ಲಿ ಉಕ್ಕುಸ್ತ
“ಅಪ್ಪೆ ಇಲ್ನೋಡು... ಕೂಸು ಆಡ್ತ ಅದ” ಅಂದನು.

ಒಂದ್ಸಲ
ಸೋಮಪ್ಪರು ಆ ದೇಹದ ತುಂಬಾ ಉಸುರಾಡಿ,
ಮಗಳ ಕಣ್ಣುಗ ತುಂಬಿಕೊಂಡು
ಮಂಚಕ್ಕೆ ಬಂದು
ಆ ದೇಹವ ಚಲ್ಲಿದರು.

ಪರ್ಸಾದನು
ಏಳ್ಜನ ಗಂಡುಮಕ್ಕಳಮ್ಯಾಲ
ಒಬ್ಬಳು ಮಗಳಾಗಿ ಕುಸುಮಾಳು ಹುಟ್ಟೀ
ಇನ್ನು ಮಕ್ಕಮರಿ ಸಾಕು ಎಂದಿರುವಾಗ
ಅರಿವುಗ ಬಾರದೆ ಹುಟ್ಟಿಬುಟ್ಟಿದ್ದನು.
ಚೂಜಿಮದ್ದುಗೆಲ್ಲ ಜಗ್ಗದೆ ಗೆದ್ದು
ಹುಟ್ಟಿಬಂದ ಪರ್ಸಾದನ ಬೆಪ್ಪು ಮತ್ತು ಅವನ ಜೊಲ್ಲು
ಅವನು ಬೆಳೆದಂತೆಲ್ಲಾ ಅವೂ ಬೆಳೀತಾ
ಯಾಕಾರೂ ಹುಟ್ಟಿದನೋ ಅನ್ನುಸ್ತ
ಅವನೋ ಹುಟ್ಟಾಗಿತ್ತು.

ಈ ನನ್ನ ಕಂದ ಪರ್ಸಾದನು
ಕೂತುಣ್ಣೊ ಫಲದಲ್ಲು
ಒಡೆಯಾಗಿ ನಿಂತೋಯ್ತುಲ್ಲಾ
ಅಂತಂತ
ಹಾಗೇ ಅಪ್ಪಾಜಿಯವರ ಕಣ್ಣುಗ ನಿದ್ದವು ಕವುರಿತು.
ಆಗ
ಆ ಅರಜೀವದ ಕತ್ಲಬೆಳುಕಲ್ಲಿ
ಸೋಮಪ್ಪರ ಕಣ್ಣುಗಳ ಸುತ್ತಾ ಸುತ್ತುತ್ತಿದ್ದ ಕಪ್ಪುಬಳವು
ಇನ್ನೊಂದು ಗೆರ್ರ್ವ ಹೆಚ್ಚಿಸಿಕೊಂಡಿತು.

ಸೋಮಪ್ಪರ ಮೂಗಿನ ಮ್ಯಾಲ,
ಹುಬ್ಬಿನ ಕೆಳಗ

ಏಡು ಕಪ್ಪು ಪ್ಯಾಚು ಅಂತಿದ್ದು
ಅದರಲ್ಲಿ ಸಾವೂವು ಗೀಜ್ಗಲ ಹಕ್ಕಿ ಗೂಡುಕಟ್ಟಿ,
ಆ ಲಾಂಟೀನ ಕತ್ಲ ಬೆಳೂಕು
ಅಲ್ಲಾಡ್ತ ತಳ್ಳಾಡ್ತ
ಅಲ್ಲುಗ ಬಂದು ಬಿದ್ದಾಗ
ಆ ಕಣ್ಣುಗುಡ್ಡಗಳ ಮ್ಯಾಲಿಂದ
ಆ ಸಾವೂವು ಎದ್ದು ಬಂದು
ಸೆಡೆಯಾಡಿಸುವಂತಾಗುತ್ತಿತ್ತು.

ಆಯ್ತಾ
ಸೋಮಪ್ಪಗ ನಿದ್ದ ತುಂಬಲು,
ಅವರ ವಝುನ್ನಾಗಿದ್ದ ದೇಹವ
ಹೊರಲಾರದೆ ಹೊತ್ತು ಹೋಗುತ್ತಿದ್ದ
ಅವರ ಜೀವಾತ್ಮನು
'ಉಸ್ಸೋ' ಎಂದು ಎದ್ದು ಕೂತು
ಸುಸ್ತಾರಿಸಿಕೊಳ್ಳತೊಡಗಿತು.

ಈ ರೀತಿಯಾಗಿ
ಪಸುಪಕ್ಷಿಯಾದಿಯಾಗಿ
ನರಮನುಸರನ್ನೆಲ್ಲ ನಿದ್ದಾವು ಆವರಿಸಿರಲು
ಆಗ
ಸೋಮಪ್ಪರು ಮಲುಗಿದ್ದ ಮಂಚಾವು
ವಯ್ಸಾದ ನಾಯ್ಕಸಾನಿ ಮಾಡುವೋಪಾದಿ
ವಯ್ಯಾರದಲಿ
ತಲ್ವ ಎತ್ತಿ ಒಂದ್ಸಲ ನೋಡಿತು.
ಸುಸ್ತಾರಿಸ್ತಿರೋ ಜೀವಾತ್ಮನ ಕಂಡು
ಊಕಳಕ ಒಬ್ಬರು ಆದರು ಅಂದುಕೊಂಡು
ಸಂತೋಸವಾಗಿ
ಹೇಳತೊಡಗಿತು...

“ಒಂದ್ಸಲ ಯಾನಾಯ್ತು...
ನಂ ದೇಸ್ದ ಮಾರಾಜ್ರು
ಹೆಣ್ ನೋಡಾಕ ಅಂತ
ಪಕ್ಕದ ದೇಸ್ದ ರಾಜ್ಯಕ ವೊಯ್ತಾರ.
ಈ ರಾಜ್ಯದ ಅರ್ಮನ ಹೆಂಗಿದ್ದುದು
ತಾಡೂ ವಸಿ ನೋಡವು ಅಂದ್ಕಂಬುಟ್ಟು
ನಂ ಮಾರಾಜ್ರು
ಒಕ್ಕಡಯಿಂದ ನೋಡ್ಕಂಡ್ ನೋಡ್ಕಂಡು ಬತ್ತಾ ಇರಬೇಕಾರ,
ಆ ಅಂತಾಪುರವಾಗಿದ್ದ ಅಂತಪುರಕ್ಕೆಲ್ಲಾ
ಕಳಸದ ಥರ್ವಾಗಿ ಇದ್ದಂಥ
ಒಂದು ಮಂಚಾವು ಅವರ ಕಣ್ಣುಗ ಬಿತ್ತು.

ಆ ಮಂಚ್ಕ ನೆಟ್ಟ ಕಣ್ಣು ಕೀಳ್ದನೆಯೆ,
ನಮ್ಮ ದೇಸ್ದ ಮಾರಾಜ್ರು–
‘ಎಲಲಾ
ನಾ ನೋಡುದ್ರ ಇಲ್ಲುಗ ಹೆಣ್ಣುಗ್ ಬಂದಿರೋದು.
ಈ ಅರ್ಮನ ಹೆಣ್ಣು ನಮ್ ಅರ್ಮನಗ ಬಂದ್ರ,
ನಮ್ ಅರ್ಮನಲೂ ಇಂಥ ಒಂದು ಮಂಚ ಇಲ್ದಿದ್ರ
ಅವ್ಳು ಮಲ್ಗಿಳಾ’... ಅಂಬೋ ಚಿಂತವು
ಅವರ ಎದ ಒಳಕ್ಕ ನುಗ್ಗಿ
ಒಕ್ಕಡಯಿಂದ ಸುಡ್ತಾ ಬತ್ತಿರಬೇಕಾರ,

ಆಗ, ನಮ್ ರಾಜ್ರು ಏನ್ಮಾಡ್ದರು...
ತಮ್ಮ ರಾಜ್ಯಕ ಬಂದರು.
ಬಂದವರು, ದೇಸದಲ್ಲಿರೋ ಓಜಪ್ಪಗಳನ್ನೆಲ್ಲಾ ಕರಸ್ಕಂಡು
ಪರೀಕ್ಷಿ
ಏಳ್ಜನ ಇರ್‍ಸಗಂಡು
ಅವರ್ಗ ಈಳ್ಯ ಕೊಟ್ಟು
‘ನೋಡ್ರಯ್ಯಾ ಓಜಪ್ಪಗಳಾ...

ನೀವ್ಗಳು
ಈಗಾನೆ
ಉತ್ತಮವಾದ ಮರ ಕಡ್ಕಂಡು,
ಅದ್ರ ಕೆಚ್ಚ ತಕ್ಕಂಡೂ
ಆ ಕೆಚ್ಚಲ್ಲೆ
ಆ ಪರರಾಜ್ಯದ ಮಂಚ ಇದೆಯಲ್ಲಾ...
ವಸಿ ಅದಕ್ಕಿಂತ್ಲೂ ವೈನಾಗಿಯ
ಒಂದು ಮಂಚ್ವ ಮಾಡ್ಕೊಡಿ ನಮ್ಗ'
ಅಂತ ಅಪ್ಪಣೆಯ ಮಾಡ್ದರು.

ಆ ಉಟ್ಟಬಟ್ಟೇಲೆ ಓಜಪ್ಪಗಳು
ಗರುಗ್ಸ ಉಳಿ ಇಡ್ಕಂಡು ಹೊರಟು,
ಮೂರು ತಿಂಗಾ ಮರಾ ಹುಡ್ಕೀ
ಮೂರ್ ತಿಂಗಾ ಆ ಮರ್ದ ಕೆಚ್ ತಗ್ದೂ ನಯಸ್ಮಾಡೀ
ಮೂರ್ ತಿಂಗಕಾಲ ಚಿತ್ತಾರ್ವ ಗೆಯ್ದು
ಗೆಯ್ಮ ಮಾಡೀ
ಗೊಂಬ ಕಂಡಂಗ ಮಾಡಿ ಇರುಸುದ್ರು ನಂಗ..."
ಎಂದು ಮಂಚವು ಮಾತು ನಿಲ್ಸಿ
ತನ್ನ ಚಿಕ್ಕ ವಯಸ್ಸಿನ ಐಭೋಗವ ಕಣ್ಣುಗ ಕಟ್ಗಂಡು
ಅದ ನೋಡ್ತಾ ನೋಡ್ತ
ಅದ್ನೆ ಕಣ್ಣುಗ ಕಟ್ಗಂಡು ನೋಡ್ತ
ತನ್ನನ್ನೆ ಮರ್ತು
ಮರ್ತೇಹೋಯ್ತು.

ಮಂಚದ ಕಡೆಯಿಂದ ಮಾತು ನಿಂತೊಯ್ತಲೆ,
ಆ ಮಾತಿನೊಳಗ ತನ್ನ ಮರೆಯೂತಿದ್ದ
ಜೀವಾತ್ಮನಿಗ ಪಿಚ್ಚನಸಿ
"ಈಗ್ಲೂನು ನಿಂಗ ಮದ್ವ ಮಾಡಿ ಕಳಿಸಂಗಿಯ
ಇದ್ದಯೀಕಣಾ...

ಮುಂದ್ಕ ಯಾನಾಯ್ತು...?" ಅಂತು.
ಆಗ ಮಂಚಕ ಎಚ್ಚರ ಆಗಿ
ಅಯ್ಯೋ ಅಂತ ಆರಂಭಿಸಿತು:
"ಅಯ್ಯೋ...
ಯಾನ ಈಗ ಇರಾದು ನಾನು?
ಅಯ್ಯೋ ನನ್ನಪ್ಪಾ...
ಆಗ ನೋಡ್‌ಬೇಕಿತ್ತು ನನ್ನ.
ನನ್ನಾ ನೋಡಾಕ ಅಂತ್ಲಿಯ
ಎಸ್ಟೋ ದೇಸ್ದ ರಾಜ್ರು ಬರೋರು.
ಬರೋರು ಎಸ್ಟ್ ಜನ್ವೋ,
ಹೋಗವರು ಎಸ್ಟ್ ಜನ್ವೋ.
ಆಗ ನನ್ನ ಮಯ್ಮೇಲ
ಒಂದು ಕೊಳೆ ಅನ್ನೋದು ಇತ್ತ?
ಒಂದು ಗಲೀಜು ಅನ್ನೋದು ಇತ್ತ?
ವಚ್ಚಾನ ವಸ ರೇಸ್ಮ ಬಟ್ಟಲಿಯ
ನಂಗ ಒರುಸ್ತ ಇದ್ದೂದು.
ಒಂದ್ಸಲ ಒರುಸ್ದಮ್ಯಾಲ
ಅದ್ರಲ್ಲಿ
ಇನ್ನೊಂದು ಸಲ ಒರುಸ್ತ ಇರ್ಲಿಲ್ಲ ನಂಗ.
ಆ ಬಟ್ಯ ಎಸ್ದ್‌ಬುಡರು ಅತ್ತಗ.
ಆಮೇಕಾ, ದಿನಬುಟ್‌ದಿನಾ
ಪುನುಗು ಕಸ್ತೂರ್‍ಯ ಲೇಪ್ಸರೂ...

ಬಾಳಾಟ್ವ ಹಿಂಗ್ ಮಾಡ್ದವಳ್ಗಾ,
ಗ್ರಾಚಾರ ಅನ್ನೋದು ಗುದ್ದಕ ಬಂದ್ರಾ,
ನೋಡ್ಕ ಎಲ್ಲಿಗ್ ತಂದಿಡ್ತದ.
ಈಗ ನನ್ನಾ ತುಳ್ಕಂದು ಓಡಾಡವರು ಅದೆಷ್ಟು ಜನ್ವೊ!
ಅದಿರ್‍ಲಿ,
ಬತ್ತಾ ಅನ್ನಂಗಿಲ್ಲ, ಜೋಳರಾಗೀ ಅನ್ನಂಗಿಲ್ಲ,

ಹುಳ್ಳಿ ಅನ್ನಂಗಿಲ್ಲಾ...
ಅದೂ ಇರ್ಲಿ,
ಕೊನಗ
ದನ ತಿನ್ನೋ ಸೆತ್ತಸೆದ ಅನ್ನಂಗಿಲ್ಲಾ...
ಎಲ್ಲಾನುವಿ ನನ್ಮೇಲ ಚಲ್ಲಾಡಿ ಚದುರಾಡಿ
ಈ ರೂಪ್ಗ ತಂದಿಟ್ರಲ್ಲಾ...
ಇಂಥಾ ಕಡ ನಾ ಇರ್ಬೇಕಲ್ಲಾ...
ನಾ ಇರಬೌದ?
ಅದೇನ್ ಪಾಪ್ವ ಮಾಡಿರದು ನಾನು...?"
ಅನ್ನುವಷ್ಟಕ್ಕ
ಮಾತ್ಗ ಮೊದ್ಲು
ದುಕ್ಕವೇ ಉಕ್ಕಲು
ಅಲ್ಲುಗ ನಿಲ್ಸಿತು.

* * * *

## ೩. ಮಂಚದ ಕಥಾ ಆಲಿಸುತಲಿದ್ದ ಆ ಜೀವಾತ್ಮನು

ಮಂಚದ ಕಥಾ ಆಲಿಸುತಲಿದ್ದ ಆ ಜೀವಾತ್ಮನು,
ಸೋಮಪ್ಪರ ಘಟವನ್ನು ಸೇರುವುದಕ್ಕೂ ಮೊದಲಾಗಿ,
ಸೋಮಪ್ಪರ ತಂದೆ  ಯಾಡನು.
ಯಾಡನ ತಾಯಿ ಅಕ್ಕಮಾದೇವಮ್ಮನು.
ಗಂಡನ ತಿಥಿಯಾದ ಮಾರನೆಗೆ
ತೌರಿಗೆ ದೌಡಾಯಿಸಿದ್ದ ಅಕ್ಕಮಾದೇವಮ್ಮನು
ಆರು ವರುಷದ ಬಳಿಕ
ಅಪ್ಪ ಸತ್ತ ಹನ್ನೆಡು ತಿಂಗಳಗ
ಹಟ್ಟೀ ಜೀತಗಾರಗ ಹುಟ್ಟಿದವನೆಂಬ ಅಪವಾದದ
ತನ್ನ ಕುಡಿ ಯಾಡನೊಡನೆ
ಗಂಡನ ಮನೆಗೆ
ಪಾಲಿಗಾಗಿ ಬಂದಾಗ ಏನಾಯ್ತು,

ಸೋಮಪ್ಪರ ತಂದೆಯಾದ
ಈ ಯಾಡಕಂದನು,
ಹೊಸ ಬಟ್ಟ ಹಾಕ್ಕಂಡಿದ್ದರೂ
ಸಾಕ್ಷಾತ್ ಕೋತಿಮರಿಯಂತೆ
ತಾಯ ಸೊಂಟ್ಕ ಬಿಕ್ಕಂಡಿದ್ದನು.
ಆ ತಾಯ, ಆ ಅಕ್ಕಮಾದೇವಮ್ಮನ
ಇನ್ನೊಂದು ಕೈಲಿ ಬಿದುರಬುಟ್ಟಿಯೊಂದು ಇದ್ದು
ಬೆವುರು ವರಿಸಿಕೊಳ್ಳಲೂ ಆಗದವಳಾಗಿ
ಬಂದವಳು
ಪುರಾಣ ಹೇಳೋ ಬಸಪ್ಪಸೋಮಿಯವರ
ಹಟ್ಟೀ ಹಜಾರದಲ್ಲಿ ಭಾರಗಳ ಇಳುಸಿ  ಕೂತವಳು

ಮಯ್ಯ ಬೆವುರು ಜಲವ ಬಳ್ದು ಚೆಲ್ಲಿ
ಉಸುರಾಡಿದಳು.

ಆ ಒಳಗಿದ್ದ ಬಸಪ್ಪಸೋಮಿಯವರ
ಮೊಕಮೋರ ಕಯ್ಯಿಕಾಲು ಹೊಟ್ಟೆ
ಹೀಗೆಯೇ ಎಲ್ಲಂದರಲ್ಲಿ
ಅಲ್ಲಲ್ಲಿ ಮೂಡುತ್ತಿದ್ದ
ಸುಕ್ಕುಗಳ ಮುಚ್ಚುತ
ಈಭೂತಿಮಯವಾದ ಆ ದೇಹವು
ಪುರಾಣ್ವ ಓದುತ್ತಿದ್ದುದು

ಬಂದು ಕುಂತವಳ ಒಂದ್ಸಲ ಕಣ್ಣೆತ್ತಿ ನೋಡಲಾಗಿ
ಸರ್ವವೂ ಅರುವಾಯ್ತು.
ಮೊಕ್ವ,
ಕಣ್ಣು ಮೀಸಲಿಯ ಮಾಡ್ಕಂಡಿದ್ದ
ತಮ್ಮ ಸಿದ್ದೂರನು
ಕಯ್ಯುಕಾಲು ಎರಡರಲ್ಲು ಹಗ್ಗ ವಸೆಯುತ್ತಿದ್ದವನು,
ಈ ಬಂದು ಕುಂತವಳ ನೋಡಲು
ಅವನ ತುಟಿ ಮೀಸ್ಗಳು,
ತಮ್ಮಟ  ಮುಂದ ಐಕಳು ಕುಣೀವಂತೆ
ಕುಣೀತೊಡಗಿದವು.

ಆಗ
ಅಣ್ಣ ಬಸಪ್ಪಸೋಮಿಯವರು
ಸಮಾಧಾನದುಂಬಿ
ನಡುಮನದಿಕ್ಕ ನೋಡಲು
ಆ ಬಂದು ಕೂತವಳನ್ನು ಕಣ್ಲೆ ತಿಂತಿದ್ದ
ಮಕ್ಕಳ ಫಲವಿಲ್ಲದ, ಮುಪ್ಪಾಡುತ್ತಿದ್ದ
ಅವರ ಹೆಡ್ತಿಯು ನಡುಮನಗ ನುಗ್ಗಿ ದಾರಂದ್ವ ಮುಚ್ಚಿಕೊಂಡಳು.

ಆಗ, ತಮ್ಮ ಸಿದ್ದೋದ್ದರನು
ಕಿರುಮನದಿಕ್ಕ ನೋಡಲು
ವಸ್ತಲಿಗಂಟಿದ್ದ ಅವನ ಹೆಡ್ತಿಯು
ತನ್ನ ಕಾಲ್ಬಳಿ ಕಯ್ಬಳಿ ಇದ್ದಬದ್ದ ಐಕಳನ್ನೆಲ್ಲವ
ತವಕನೆ ಒಳಸೆಳ್ದುಕೊಂಡು
ದಾರಂದ್ವ ಮುಚ್ಚಿದಂತೆ ಮಾಡಿದಳು.

ಆ ಬರೋ ಅಕ್ಕಮಾದೇವಮ್ಮನ ಕಂಡೂ–
ಇದಾರು ಇವಳು
ಈ ಪ್ರಕಾರವಾಗಿ ಉರುಬಿಸುಲಲ್ಲಿ ಬಿಳಿಸೀರ್ವ ಉಟ್ಗಂಡೂ
ಕುಂಕುಮ ಇಲ್ದ ಹಣಾಲೀ
ಬಳ ಇಲ್ದ ಕಯ್ಯಲೀ
ಕಂಕುಳಲ್ಲಿ ಕಂದನ್ನ ತತ್ಗಂಡು
ಊರ್ಗ ಬರುವಂತವಳಾದವಳು
ಎಂದವಳ ಅನುಸರಿಸಿ, ಗಂಡು ಹೆಣ್ಣಾದಿ
ಆಬಾಲವೃದ್ಧರು
ಬಸಪ್ಪಸೋಮಿಯವರ ದುಸ್ಟಿಗೆ ಸಿಕ್ಕದಂತೆ
ಆ ಬಾಗಲು ಒಂದು  ಜಾಥಾ
ಉಳಿದಲ್ಲಿ ಕರಿಮಣೀ ಸರವ
ಪೋಣಿಸಿದಂತಾದರು.

ಬಸಪ್ಪಸೋಮಿಯವರು
ತಮ್ಮ ತನುಮನಧನವ
ಪುರಾಣ ಪುಸ್ತಕದೊಳಗ ನೆಟ್ಟು
ತಲ ಎತ್ತದೆ ಕುಂತವರು
ಗಳುಗ ಕೂಡಿ ಬರಲು
ತಲ್ವ ಎತ್ತದೆ–
“ಯಾರಮ್ಮ ತಾಯೀ ನೀನೂ?
ಅಪರಿಚಿತಳಾದ ನೀನು ಬರಲು ಕಾರಣವಾದರೂ ಏನು?” ಎಂದರು.

ಅಲ್ಲಿ ಉಸುರಾಡದೆ ಬಿಗಿಯುತ್ತಿದ್ದ ಗಾಳಿಯಿಂದಾಗಿ
ಅಕ್ಕಮಾದೇವಮ್ಮಗ
ಅವರು ಅಸ್ಟು ಮಾತಾಡಿದ್ದೇ ಪುಣ್ಯವು ಅನ್ಸಿ–
"ನಾನುಕನ್ನೀ ಭಾವಯ್ಯನೋರೇ...
ನಿಮ್ಮ ಪಾದದ ಧೂಳು..." ಅಂದಳು.
ಆ ಯಾವ ಒಂದು ಗೆರೆಯೂ ಏರುಪೇರಾಗದ
ಬಸಪ್ಪಸೋಮಿಯವರ ದನಿಯು
"ಭಾವಯ್ಯ ಅನ್ನುವ ಆ ಒಂದು ವಾಕ್ಷ ಬಿಟ್ಟು
ಬೇರೆ ಏನಾದರೂ ಇದ್ದಲ್ಲಿ ಹೇಳು..." ಅಂದಿತು.

ಅದೊಂದು ಬುಟ್ಟು
ಅಕ್ಕಮಾದೇವಮ್ಮ ತಾನು
ಏನುತಾನೇ ಹೇಳೀಳು.
ರೋದನಾರಾಗದಲ್ಲಿ–
"ಅಪ್ಪ ಅವ್ವ ಇರಗಂಟಾ ನೋಡ್ಕಂಡಂಥಾ ಬಳಗ ಅಂಬೋದು
ಅಪ್ಪ ಅವ್ವ ಸತ್ತಮ್ಯಾಲ ಬೀದೀಗ ತಳ್ದುದಾ..." ಪಾಡಿದಳು.
ನಾಕಾ ಕಡೆಗೂ ಯಾಡನು
ಪೆಕರಾಗಿ ನೋಡತೊಡಗಿತು.

ಅಕ್ಕಮಾದೇವಮ್ಮನು ಪಾಡೀಪಾಡಿ
ಅವಳಾಗಿದ್ದು ಅವಳು ನಿಲ್ಸುವವರಗೂ
ತಾಳ್ಮಲಿ ಬಸಪ್ಪಸೋಮಿಯವರು ಕಾದು–
"ಶರಿಯಮ್ಮ ಅವರು ಮಾಡಿದ್ದು ಶರಿ
ನೀ ಇನ್ನು ಹೊರಡಬಹುದು..." ಅಂದರು.
ಅದಕ್ಕೆ ಅಕ್ಕಮಾದೇವಮ್ಮ–
'ಅಯ್ಯೋ, ಇನ್ ನಾನೆಲ್ಲಿಗ ವಾಗ್ಲಿ ಭಾವಯ್ಯೋರೇ...
ಇನ್ನು ನಿಂ ಪಾದ ತೊಳ್ದ ನೀರ್ನ ಕುಡ್ಕಂಡೂ...
ನನ ಗಂಡ್ನ ಯಸ್ರ ಹೇಳ್ಕಂಡೂ...' ಅಂತಿರಲು
ನಿಲ್ಲುವುದಿಲ್ಲವೆಂದರಿತ

ಬಸಪ್ಪಸೋಮಿಯವರು
ತಡುದು– "ನಿಲ್ಸಮ್ಮ, ಗಂಡ ಅನ್ನುವಂತ ಶಬುದವ
ಉಚ್ಚಾರವ ಮಾಡಬಾರದವಳು ನೀನು.
ತಿಥಿ ಆದಾಗಲೇ ಅದು ಅಲ್ಲಿಗೆ ತೀರಿತು–
ತೀರಿದಂಥದು ಇನ್ನು ಕೂಡದು.
ಇನ್ನು ನೀನು ಹೊರಡಬಹುದು" ಎಂದು
ಕಡ್ಡಾಗಿ ನುಡಿದರು.
ಹಾಗೂ ಅಕ್ಕಮಾದೇವಮ್ಮ ಬಾಯ್ದೆಗೆಯಲು
ತಲ ಎತ್ತೂ ನೋಡದಂಥ ಆ ಬಸಪ್ಪಸೋಮಿ ದನಿಯು
ಒಂದು ಗೆರ್ವ ಹೆಚ್ಚಿಸಿಕೊಂಡು–
"ಇನ್ನು ನೀನು ಮಾತಾಡಕೂಡದು
ನಮ್ಮ ಕಣ್ಣುಗಳ ಮುಂದೆ ಇರಕೂಡದು" ಎಂದಿತು.

ಅಕ್ಕಮಾದೇವಮ್ಮಗ ಬಾಯಿ ನಿಂತಿತು.
ಕಿರುಮನಲಿ ಐಕಳ ಬಾಯ್ಗ ಬೆಲ್ಲ ಚೀಪುಸ್ತ
ಹಜಾರದಲ್ಲಾಗುವುದ
ಮುಚ್ಚಿದ ದಾರಂದದಲ್ಲೊ ಕಾಣ್ತ
ಸಿದ್ದೂರನ ಹೆಡ್ತಿ ಇದ್ದಳು.
ಸಿದ್ದೂರನ ತುಟಿ ಮೀಸದಂತೆ
ಅವನ ಕಾಲುಕಯ್ಯೊಡನೆ
ಹಿಡುದಿದ್ದ ಹಗ್ಗದುರಿಯೂ
ಈಗ ತಂತಾನೆ ಕುಣಿಯುತ್ತಿತ್ತು!

ಕಾದು
ಅಕ್ಕಮಾದೇವಮ್ಮನು
ತನ್ನೇಡೂ ಕಯ್ಯ ಜೋಡ್ಸಿಕೊಂಡು
ಬಾವನವರ ಪಾದ್ವ ಹಿಡಿಯಲು ಎದ್ದಳು.
ಕಣ್ಮುಚ್ಚಿಯೂ ಕಾಣುವುದ ಸಿದ್ಧಿಸಿಕೊಂಡಿದ್ದ
ಬಸಪ್ಪಸೋಮಿಯವರಿಗ ಅದು ಅರುವಾಗಿ

ತಮ್ಮ ಪಾದಗಳ ಒಳಕ್ಕೆಳುದು ಸಿಗದಂತೆ
ಅನುಸರಿಸಿ ಕೂತು
“ನಮ್ಮ ಕಣ್ಣುಗಳ ಮುಂದೆ ನೀನು ಇನ್ನು ಇರಕೂಡದು”
ಅಂದರು.

ಎದ್ದಂಥ ಮಾದೇವಮ್ಮನು ಆಗ ಕೂತೂ
“ಅಯ್ಯೋ ಸಿವ್ನೇ” ಅಂದು,
“ನಾ ಯಾನಪ್ಪ ಮಾಡ್ಲೀ” ಅಂದು,
“ಸಿವ್ನಗ ಸಮಾನರಾದ
ನಂ ಭಾವಯ್ನರ ಕಣ್ಮುಂದ ಇರಬಾರದಂಥ ಕೆಲಸ್ವ
ನಾ ಯಾನಪ್ಪ ಮಾಡೀವ್ನಿ ದೇವ್ರೇ...?” ಅಂದು,
“ಇಂಥಾದ್ದು ಅಂತ ಯಾರಾರು
ಒಂದ್ ಚೂಜಿ ಮೊನದಸ್ಟು ತೋರಿಸುದ್ರೂ ಸೈತ
ಕೆರಬಾವಿ ನೋಡ್ಕತ್ತಿನಿ” ಅಂದೂ ಅಂದು
ಆಗ ಅದಕ ಬಸಪ್ಪಸೋಮಿಯವರ ದನಿಯ
ಇನ್ನೂ ಒಂದು ಗೆರವು ಹೆಚ್ಚಿ
“ನಮ್ಮ ಬಾಯಿಂದ
ಕೆಟ್ಟ ಮಾತುಗಳನ್ನು ನೀನು ಆಡಿಶಬಾರದಮ್ಮ.
ಗಂಡ ಸತ್ತ ಹನ್ನೆರಡನೆ ತಿಂಗಳಿಗೆ
ಯಾರಿಗಾದರೂ ಎಲ್ಲಾದರೂ
ಈ ನರಲೋಕದ ರೂಢಾವಳಿಯಲ್ಲಿ
ಮಕ್ಕಳಾಗಿರುವಂಥ ಪ್ರಸಂಗ ಏನಾರು ಇದ್ದಲ್ಲಿ
ಅದನ್ನು ನಮಗೆ ತೋರಿಸಿ
ನೀನು ಬರುವಂಥವಳಾಗು
ಈಗ ನಡೆಯಾಚೆ” ಎಂದಿತು.

ಮಾತುಗಳು ಬಾಣವಾಗಿ ಬಂದು
ಇರಿಯುತಿರಲಾಗ
ಅಕ್ಕಮಾದೇವಮ್ಮನು ನೆಲದ ಮ್ಯಾಲ ಕುಸ್ದುಬಿದ್ದು

ಆ ಇದ್ದಷ್ಟು ಜಾಗದಲ್ಲೆ ಒದ್ದಾಡಿ ಹೊರುಳಾಡ್ತ
“ಸಿವಾಸಿವಾ... ಈ ನನ್ ಕಿವಿಯಾರ ಕೇಳ್ಬೇಕಾಯ್ತಲ್ಲಪ್ಪ
ಸಿವಾ ಇದಾ, ಅಯ್ಯೋ ಸಿವಾ...!
ಎಲ್ಲಾದ್ರೂ ನಾ ಅಂಥವ್ಳಾ ಭಾವಯ್ಯನೋರೆ...?
ನನ್ನ ಕಣ್ಣಾಣು...
ನಿಮ್ ಪಾದ್‌ದಾಣು
ನನ್ನೊಳ್ಗ ಸತ್ಯ ಅನ್ನೋದು ಇಲ್ಲದಿದ್ರ
ನನ್ ಸತ್ತಿರೋ ಗಂಡ ಬಂದು
ಈಗ್ ನನ್ನ ಮುರ್ಕಳ್ಳಿ ಬೇಕಾರ
ಎಲ್‌ಬೇಕಾರ ಬಿಂಕಿಕೆಂಡ್ವ ಅಂಗೈಲಿ ಇಟ್ಗಂಡು
ಆಣಬಾಸ ಮಾಡ್ತೀನೀ
ಇಂಥ ದೇವ್ರಂಥ ನಿಮ್ ಬಾಯಿಂದ್ಲೂನು ಕೇಳ್ಬೇಕಾರ
ವೋದ ಜಲ್ಮದಲ್ಲಿ ನಾನು
ಎಂಥಾ ಘೋರ್‌ಪಾಪ್ವ ಮಾಡಿದ್ನೋ
ಅಯ್ಯೋ ಸಿವ್ನೇ... ನಿನ್ ಹೆಡ್ತಿ ಮುಂಡ್ಯಾಗ
ನೋಡ್ತಾ ನೀನೂ ಸುಮ್ನಿಯ ಇದ್ದೀಯಲ್ಲಪ್ಪಾ
ಬೇಕಾರ ಈಗ್ಲೇ ...” ರಾಗಕ್ಕೆ ತಾಳಲಾರದೆ
ಬಸಪ್ಪಸೋಮಿಯವರು “ಮುಚ್‌ಬಾಯ್”
ಅಂದರು.

ತಲ್ವ ಎತ್ತದ ಬಸಪ್ಪಸೋಮಿಯವರ ಕಣ್ಮುಂದಿದ್ದ
ಪುರಾಣಪುಸ್ತಕದೊಳಗ
ಈ ಮಾಯಾವಿನಿಯು ಮೂಡುತ
ಸೃಷ್ಟಿಕರ್ತನಿಂದಲೂ ಅಸಾಧ್ಯವಾದ ಕಾಲವನ್ನು
ಹಿಂದೂಮುಂದೂ ಮಾಡ್ತ
ಆಡುತ ಗೋಚರಿಸುತಲಿದ್ದಳು.
ದೃಷ್ಟಿಸಿ ಸುಟ್ಟುಬಿಡಬೇಕೆನ್ನಿಸುತ್ತಿರುವಾಗ
ನಡುಮನೆಯಿಂದ ಅವರ ಹೆಡ್ತಿ ದನಿಯು
“ಐ, ಅದ್ಯಾನ ನೀವು, ಅವ್ಳ ನೋಡ್ತ

ಪುರಾಣ ಮಾಡ್ತೀರದು ಇನ್ನುವಿ ನೀವೂ..." ಅಂದಿತು.
ಹೆಡ್ತಿ ಮಾತಿಗೆ ಬಸಪ್ಪಸೋಮಿಯವರು–
"ನನಗೆ ಹೇಳಲು ಬರಲು
ಮೂರು ಕಾಶಿನ ಹೆಣ್ಣಾದ ನೀನು
ಎಸ್ಟು ಮಾತ್ರದವಳು?" ಎಂದರು.
ಆ ದನಿ ಆ ಕಡ ನಿಂತಿತು,
ಕಿರುಮನೆಯು ಕಿವಿಯಾಗಿತ್ತು.

ಈ ಕಡ ಅಕ್ಕಮಾದೇವಮ್ಮನು
ತನ್ನ ಬಾಯ್ಮುಚ್ಚಿದ್ದರೂ
ಹಣೆಯ ಚಚ್ತಾ
ನೆಲವ ತನ್ನೇಡೂ ಬೋಳುಕೈಲು ತಾರುಸ್ತ
ಆ ಸದ್ದುಪದ್ದಿಂದಲೇ
ಮಾತು ಮಾಡಲು ತೊಡಗಿದಳು.
ತಾಳದ ಬಸಪ್ಪಸೋಮಿಯವರಾಗ
"ತಮ್ಮಾ" ಎಂದರು.
ಈಗ ದೇಹವಿಡೀ ಕುಣೀಸೂತಲಿದ್ದ ಸಿದ್ದೂರನು
"ಅಣ್ಣಾ" ಅಂದನು.
ಬಸಪ್ಪಸೋಮಿಯವರು–
"ಏನು ಮಾಡುವುದಪ್ಪಾ" ಎಂದರು.
ಸಿದ್ದೂರನು ಕುಂತಲ್ಲೆ ಕುಣೀತಿದ್ದವನು
ರೌದ್ರಾವೇಶ ತಾಳಿ ಎದ್ದು
"ನೀನು ಪುರಾಣ ಓತ್ತಿರು" ಎಂದವನೆ
ಅಕ್ಕಮಾದೇವಮ್ಮನಲ್ಲಿಗ ನೆಗ್ದು ಬಂದು
ಆ ಅವಳ ಹೊಟ್ಟಕಳ್ಳುವು ಕಲ್ಸಿಕೊಳ್ವಂತೆ
ಒಂದ್ಸಲ ಜಾಡ್ಸಿ ವದ್ದನು.
ಆಗ ನೆಲಕ ಅಪ್ಪಚ್ಚಿಯಾದ ಅವಳ
ಚೆಲ್ಲಿದ್ದ ಮುಂದಲೆ ಕೂದುಲ
ತನ್ನ ಕೈಮುಷ್ಟಿಗ ಸೇರ್ಸಿ ಗಂಟಾಕಿಕೊಳ್ಳುವಷ್ಟಕ್ಕ

ಆ ಅವಳ ಆ ದೇಹದಲ್ಲಿದ್ದ ಆ ಜೀವವು ತನ್ನ
ಸ್ವಾಧೀನ ಕಳ್ದುಕೊಂಡಿತು.
ಕಿತ್ತರೂ
ಯಾಡನು ಹೊಟ್ಟಒಳಗಿದ್ದಂತೆ
ಅವ್ವಗ ಅಂಟಿತು.

ಆಗಲೀಗ ಬಸಪ್ಪಸೋಮಿಯವರು
ತಲ್ವ ಎತ್ತಿ ಕಣ್ಣುಗಳ ಬುಟ್ಟರು.

ಆ ಸಿದ್ದೂರನು ಮುಷ್ಟಿ ಎಳೆದಾಗ,
ಆ ಮುಷ್ಟಿಗ ಗಂಟಾಕಿಕೊಂಡಿದ್ದ ಅಕ್ಕಮಾದೇವಮ್ಮನೂ
ಅವಳಿಗಂಟಿದ್ದ ಯಾಡನೂ
ಒಟ್ಟಿಗೇನೆ ಮಾರುದೂರ ಚಿಗಿಯುತ್ತಿದ್ದರು.
ಅವಳ ಗಂಟುಮೂಟೆಗೆ ಒದ್ದರ
ಅದು ಹತ್ತಾಳು ದೂರ ನೆಗೆದು ಬೀಳುತ್ತಿತ್ತು.
ಸುತ್ತಿದ್ದ ಜನವು
ಅದಾವ ಮಾಯದಲ್ಲೋ ಮಾಯವಾಗಿ ಹೋಗಿತ್ತು.

ಆಗ ಬೀದೀಯು ತನ್ನನ್ನು ಕುಗ್ಗಿಸಿಕೊಂಡಿತು,
ಆಗ ಗೋಮಾಳವು ಬಂತು.
ಆಗ ಅಲ್ಲಿ ಸಿದ್ದೂರನು
ತನ್ನ ಮುಷ್ಟಿಯ ಬಲವಾಗಿ ಮೇಲೆತ್ತಿ
ಒಂದ್ಸಲಕ ಆ ಬಲಬುಟ್ಟು
ಕೆಳಕ ಕುಕ್ಕಿದನು.
ಆಗ ಕೆಳಗ ನೋಡಿದನು–
ಆಗ ಅವನ ಕಣ್ಣುಮಠಾರ ಇದ್ದುದೆಲ್ಲವು
ಅರಜೀವವಾಗಿ ಚೆಲ್ಲಾಡಿತ್ತು.

ಹಾಗೂ
ಹೋಗ್ತಾ ಬತ್ತಾ ಜೀವವಾಡುತ್ತಿದ್ದ
ಅಕ್ಕಮಾದೇವಮ್ಮನ ಮಯ್ಯಗಂಟಿದ್ದ
ಬೆಳ್ಳಿಕರಡಿಗವು
ಬೆಳಕು ಹೀರ್ತ ಹೊಳೆಯುತಿರಲು
ಸಿದ್ದೂರನ ಕೈಯು ಅದ ಕಿತ್ಗಂಡು
ಅಲ್ಲಿಂದ ತಿರುಗೂ ನೋಡ್ದೆ ನಡ್ದು
ಸಿದ್ದೂರನು ಬಂದು ಅಣ್ಣನ ಪಾದಕ್ಕಿರಿಸಿದನು.

ಇತ್ತ
ಕಿತ್ತೂ ಚಲ್ಲಾಡಿದ್ದ ಆ ಬಟ್ಟಬರಿಯಂತೆ ಬಿದ್ದಿದ್ದ
ಆ ಅರಜೀವಾಡೊ ಅಕ್ಕಮಾದೇವಮ್ಮ ಯಾಡರನ್ನು
ಎಚ್ಚರವು ಎಷ್ಟೋ ಹೊತ್ತು ಕಳ್ದು ತಲ್ಪಿತು.

ಆಗ
ಅಕ್ಕಮಾದೇವಮ್ಮನ ದೇಹದಲಿ
ಬೆವುರ ಜಲವು ಉಕ್ಕುತ್ತಿರಲು
ಅವಳ ಸೊಂಟ್ವ ಬಿಗುಹಿಡುದ
ಯಾಡನ ಕಯ್ಗಳೂ ಬೆವೂತು ಜಾರುತ್ತಿದ್ದವು.
ಯಾಡ ಒಂದ್ಸಲ ಕಣ್ಣ ಅರತಗುದು
ಸುತ್ತಲ ಜನ್ವ ನೋಡಿ
ಕಣ್ಣು ಮುಚ್ಚಿ
ಆಮ್ಯಾಲ ಅರಗಣ್ಣ ತಗುದೂ ಬಿಟ್ಟೂ ಮುಚ್ಚಿ
ಈ ಪ್ರಕಾರ ಮಾಡುತಲಿತ್ತು.

ಆಸ್ತಿಯಾದ ಅಳುವ ಅಳಲೂ
ತ್ರಾಣವಿಲ್ಲದವಳಾಗಿ
ಅಕ್ಕಮಾದೇವಮ್ಮನು
ಕಿತ್ತು ತೂರಾಡುತ್ತಿದ್ದ ತನ್ನವು ಕೂದುಲುಗಳ

ತನ್ನೇಡು ಕಯ್ಗಳಿಂದಲೂ ಬಾಚಿಕೊಳ್ತಾ
ಅದ ನೋಡ್ತಾ,
ಅದ ನೋಡ್ತ ಗಾಳಿಗು ಜಾಗ ಕೊಡದ ಜನಕ್ಕೂ ತೋರುಸ್ತಾ
ಬೆಳಗಾಯ್ತು.

ಅಕ್ಕಮಾದೇವಮ್ಮನು–
ಹೋಗಲು ಬಂದವಳಲ್ಲವಾದ್ದರಿಂದ
ಸಿದ್ದೂರನು ಬಿಸುಟ ನೆಲದಲಿ
ಅಂಟುಕೂತಳು.

* * * *

## ೪ ಅಯ್ಯಾ ಅಲ್ಲಿ ಯಾಡನು

ಅಯ್ಯಾ
ಅಲ್ಲಿ ಯಾಡನು ಆರುವರುಷದವನಾಗಿದ್ದ ಕಾಲದಂತೆಯೇ ಈ ಕಾಲದಲ್ಲು
ಈಗ ಹೊಲಗೇರಿಯಲ್ಲಿ
ರಾತ್ರೀಲಿ ಉಂಡವರಿಗ ಬೆಳಗಿನ ಉಪಹಾರದಂತೂ
ರಾತ್ರೀಲಿ ಹೊಟ್ಟಗ ತಣ್ಣೀರಬಟ್ಟ ಕಟ್ಟಿದ್ದವರ್‍ಗ
ದೊಡ್ಡೋರ ಮನೆಯ ಮದುವ ಅನ್ನದಂತು
ರಂಜನೆಯು ಹಸಿವ ಮೆಟ್ಟಿ ನಿಲ್ಲುತ್ತಿತ್ತು!

ಅಲ್ಲಿ ಗಂಡ ಕಿಟ್ಟಯ್ಯನು
ಮಡುಚಿದ ಟರ್‍ಕಿಟವಲು ಹೆಗಲಲಿ ಧರಿಸಿದವನಾಗಿ,
ಉಟ್ಟಿದ್ದ ಪಂಚ್ಯ ಮಂಡಿಯಿಂದ ಮೇಲೆತ್ತಿ ಕಟ್ಟಿದವನಾಗಿ
ಬಾಗಲಾಚೆ ನಿಂತಿದ್ದರೆ,
ಒಳಗ ರವಕಗ ಗುಂಡಿಹಾಕ್ತ ಹೆಡ್ತಿಯಾದ ಕೆಂಪಿಯೂ
ಅವರೀರ್‍ವರ ನಡುವ ವಸ್ತುಲೂ ಇತ್ತು.
ಅವನು ಕಣ್ಣು ಮೆಡರಿಸುವನು
ಆದರೆ ಅವಳು ಕಣ್ಣೆತ್ತೂ ನೋಡದ ಸಲುವಾಗಿ
ಅವ ಕಣ್ಣು ಮೆಡರಿಸಿಯೂ
ಬಚಾವಾಗುತ್ತಿದ್ದ ಪುಣ್ಯವಂತನಾಗಿದ್ದನು.

ಈ ಕೊಸರಾಡುವ ಇದು
ಯಾವುದೊ ಮದುವ ಸಾಸ್ತ್ರ ಸಂಬಂಧದಾಟದಂತಿದ್ದು
ಜನರನ್ನು ಹಿಡ್ದು,
ಆ ತೊಪ್ಪ ಹೊತ್ತವರು ತೊಪ್ಪ ಹೊತ್ಗಂಡು
ಈ ದನಕರು ಹಿಡ್ದು ನಿಂತವರು ದನಕರು ಹಿಡ್ಕಂಡೂ

ನಿಂತವರು ನಿಂತಲ್ಲಿ
ಕುಂತವರು ಕುಂತಲ್ಲಿ
ನಡೆಯುವವರು ನಡಯದಂತೆ ಸೆರೆಯಾಗಿದ್ದರು.
ಕೊನಗ ನಿಂತಿದ್ದ ಗಂಡನಾದ ಕಿಟ್ಟಯ್ಯನು
ಪಂಚ ಕೊಳ ಆಗದಂತೆ ಅನುಸರಿಸಿ
ಅಲ್ಲೆ ಕುಕ್ಕರಗಾಲಲಿ ಕೂತು–
"ಅಮ್ಮಿ ಬಮ್ಮಿ ಹೆಣ್ಣಾ" ಎಂಬುದ ಇವ,
"ಐ ಬತ್ತೀನಿಕನ ನಡಾ" ಅಂಬುದ ಅವಳು
ಹಿಡ್ಕಂಡು ಎಳೆದಾಡತೊಡಗಿದರು!

ತೂರಮ್ಮನು
ಅಳುದೂ ಸುರುದೂ ತೂರಿ ನೋಡಿ ಕೊನಗ
ತನ್ನ ಕಣ್ಣುಕಿತ್ತು ಕೊಡುವಂತೆ
ಮಗಳು ಕೆಂಪೀಯ
ಅಣಿಯಾಗಿ ಅಚ್ಚಗಟ್ಟಾಗಿದ್ದ ಚೆಲುವನ್ನು
ಒಳ್ಳೆ ಯಾಪಾರಸ್ತಗಾರನಿಗೇ ಧಾರ ಎರದಿದ್ದಳು.
ಕೆಂಪಿ ಗಂಡನಾದ ಸಂಭಾವಸ್ತಗಾರ ಕಿಟ್ಟಯ್ಯನು
ಸಾವ್ಕಾರರು ಇಟ್ಟುಕೊಳ್ಳುವಂತ ಒಂದು ಸೈಯ್ಕಲ್ಲನ್ನೂ
ಅದಕ್ಕೂ ಒಂದು ಪಂಪನ್ನು ಇಟ್ಟುಗೊಂಡೂ
ಒಂದಲ್ಲಾ ಅಂತ ಏಡು ಚೊಗ ಚಡ್ಡೀ ಬನೀನೂ
ಜೊತಗ ಪಂಚ ಟವಲ್ಲೂ ಉಳ್ಳವನಾಗಿ
ಹಾಗೂ ಕೇಳ್ದವರಿಗ ಬೀಡ್ಯ
ಜೋಬಿಂದ ತಗ್ದು ಕೊಡುವಷ್ಟು ಆಗಿದ್ದನು.
ಈ ದಕ್ಷತ್ತಗ ಕಾರಣವು–
ಅವ್ನು ಊರೂರು ಸುತ್ತುತಾ
ಹುಣುಸ ಬೇವ್ನಬಿತ್ತಗಳ ಸೇರುಪಾವ್ಲಿ ಥಳ್ಕಾಗಿ ತಕ್ಕಂಡು
ಸಾಬರ್ಗ ಮಾರುತ್ತಿದ್ದುದಾಗಿತ್ತು!

ಇಂತಿಂಥ ಪುಣ್ಣಂತಗಾರನಗ ಆಗೂ ಆಡುವ

ಕೆಂಪಿಯಾಟ್ವ ಕಂಡು
ಕೆಂಪೀಯ ದೊಡ್ಡವ್ವನ ಮಗಳು ಒಬ್ಬಂಟಿ ಈರಿಗ
ಕ್ವಾಪ ತಡ್ದರೂ ನುಗ್ಗುತ ಬರ್ತಾ
ಅದ ಹಲ್ಲಲ್ಲಿ ತಡ್ಕಂಡು ಈರಿಯು ಮಾತಾಡಿ–
“ಅದ್ಯಾನತಾಯಿ ನೀ ಆಡದು?
ಬಿರ್‌ಬಿರ್ನ ವೋಗದ್ ಬುಟ್ಟು?” ಅಂದಳು.
ತಿಂಬುವಂತೆ ಕೆಂಪಿಯು–
“ನಿನ್ನನ್ಯಾರ ಗ್ರಾಸ್ತಿ ಬಾಯಾಕಂದು ಬಾ ಅಂತ ಕರ್ದವ್ರು?
ನಿಂಗ ಸುಮಾನ ಆದ್ರ ಹೋಗು ನೀನೀಯಾ...” ಎಂದು ಜಡಾಯ್ಸಿದಾಗ
ಈರೀಗ ಬಾಯ್ಕಟ್ಟಿತು.

ಅತ್ತ ಈರಿಯು ಸುಮ್ಮಾದಳು. ಗಂಡನು ಎಸೆಯಲು ಆ ಗಂಡನ ಫಲವು
ಹನ್ನೇಡು
ವರುಸದ ಮ್ಯಾಲ ಬೆಳವಣುಗ ನಿಂತು, ದಿನಾ ಸವೆಯೂತ ಸುಂಡೋಗಿದ್ದ
ತನ್ನ
ಕರುಳಬಳ್ಳಿಯ ತನ್ನ ಹೊಟ್ಟಗ ಕಟ್ಗಂಡು, ಅದ್ಕ ಅಂಬಲಿ ನೀರೆರದು
ಚಿಗುರಿಸೊ
ಯತ್ನವ ಮಾಡ್ತ, ಆ ಅವಳ ಕರುಳಬಳ್ಳಿಯೋ ಮೂಳ ಮಾತ್ರಕ್ಕ
ನರಮನುಷರ
ದೊಡ್ಡದಾದ ಕಿವಿಗಳು ದೊಡ್ಡದಾದ ಕಣ್ಣುಗಳ ಸಿಕ್ಕಿಸಿ ಇಟ್ಟಂತಿದ್ದು, ಇನ್ನು
ಅವಳೋ,
ತನ್ನ ಕರುಳ ಬಳ್ಳಿಗ ತನ್ನ ಬಗ್ಗರಿ ಮೂಳ್ವ ತೇದೂತೇದೂ ಕುಡಿಸೂತ, ತನ್ನ
ಕೆದುರೀದ
ಕೂದಲುಗ ಎಣ್ಣನೀರು ಕಾಣಿಸದ ಅವಳೋ ಆ ಕೆಂಚ್ಗ ಇರೋ ಆ
ಕೂದ್ಲುಗುವ
ಅದ್ನೂವ ಅವಳೋ ಒಂದು ಕಡ್ಡೀ ತುದೀಗ ಬಟ್ಟಸುತ್ತಿ ಎಣ್ಣಹಾಕಿ ಹಚ್ಚಿಟ್ಟ
ಉರಿಯೋ ಪಂಜಿನಂತಿದ್ದಳು.

ಇತ್ತ, ಹಟ್ಟೀಗ ದೊಡ್ಡಮನುಸಿ ತೂರಮ್ಮಗ
ಇನ್ನು ಸುಮ್ಮಗಿರುವುದು ತರವಲ್ಲ ಅನ್ನಲು
ಅಳಿಮಯ್ಯಗ– "ಅಪ್ಪ, ಈಗ ನೀವ್ ದಯಮಾಡ್ಸಿರಿ.
ಹೆಂಗೂವ ಕೆಂಪಿ ಬೆಂಮನ್ಸಿ,
ಕೂಸೂ ಬಾಣ್ತೀನುವ ಜೊತಲೆ ಕರ್ಕಂದು ವೋಗರೀ...
ಈಗ ದೊಡ್‌ಮನ್ಸ್ ಮಾಡಿ ದಯಮಾಡ್ಸಿ ಮತ್ತ..."
ಎಂದು ಬಾಯ್ತುಂಬ ಅಂದು
ಹೊಗಸೊಪ್ನ ತುಂಡ, ಬಾಯ್ಗ ನೆಗೆಸಿದಳು.
ಅಳಿಮಯ್ಯನು ದನೀಯ ಅಳೂಸ್ತ –
"ನೀವ್ಯಾನ ಹೇಳ್ತೀರಿಕನ
ಅಲ್ಲಿ ನಂಗ ಗಂಜಿನೀರ ಕಾಣ್ಸವರು ಯಾರಅಳಿ ಮತ್ತ..." ಅಂದನು.
ಅದಕ್ಕೆ ತೂರಮ್ಮನ ಮಾತ್ಗಳು ತುಟಿಕಡೆದಿರಲು
ಅದ ಕೆಂಪಿಯು ಮಟ್ಟ ಹಾಕಿ
ಗಂಡನ ದಿಕ್ ತಿರುಗಿ –
"ಊರೂರ ಬರ‍್ಬರ‍್ ಅಂತ ಸುಂಟ್ರಗಾಳಿ ಸುತ್ತಂಗ
ಕಾಲಲ್ಲಿ ಚಕ್ರ ಕಟ್ಕಂಡು ತಿರ್ಗತಿಯಲ್ಲಾ...
ಅಲ್ಲ್ ಉಂಡ್ಕಂದಿರು" ಅಂದೂ ಸಾಲದೆ
ಅವ್ವನ ದಿಕ್ಕೂ ತಿರುಗಿ –
"ಅವ್ವೆ, ಇವ ಎಂಥಾ ಕೇಪ್‌ಮಾರಿ ಅಂತ ಗೊತ್ತವ್ವ
ಅಸ್ಟು ಊರೂರು ತಿರ್ಗತನಲ್ಲ...
ಅಸ್ಟು ಓಟ್ಲ ರುಚ್ಯ ಕಂಡಿದ್ದಾನಲ್ಲ!
ಆ್ಣ! ಒಂಜೆನಾರು ನಂಗ ತಕ್ಕ ಬಂದು
"ಅಮ್ಮೇ ತಕ್ಕ
ಮಾಸಾಲದೋಸ ತಂದಿನಿಕನ ತಿಂದ್ಕ' ಅಂದಿಲ್ಲ
ಹೆಡ್ತೆಂತ ಹೆಡ್ತಿ..." ಎಂದೂ ಸಾಲದೆ
ಅವನ, ಗಂಡನ ಮೊಕ್ಕ ಕಯ್ಯೆಟ್ಟಿ
"ಥೂ ನಿನ್ ಯಾಸ್ಗ ಬೆಂಕಿ ಹಾಕ" ಅಂದಳು.
ಮಗಳಿಗ ತೂರಮ್ಮ ಗದುರಿಸಿಕೊಳ್ತ

ಹೊರಗ ಜನ ಗೊಳ್ಳೋ ಅಂತು.
ತೂರಮ್ಮನು ಹುಟ್ಟೋ ಮೊಮ್ಮೊಗಸಗ
ತನ್ನ ಪರಾಣಕೊಟ್ಟು ಹೋಗಲು
ಜೀವ ಹಿಡ್ದುಕೊಂಡಿದ್ದಳಷ್ಟೇ!
ಮಗಳು ಕೆಂಪೀಗ ಹುಟ್ಟೋ ಕುಡಿಗಳು
ಮೂರು ತಿಂಗಾದ ಮ್ಯಾಲ ನಿಲ್ಲುತ್ತಿರಲಿಲ್ಲವಾಗಿ

ಹೀಗಿರಲು
ಒಂಜಿನ
ಕೆಂಪೀಯು ಅಪ್ಪನ ಮನಲಿ ಇರುವುದು ಹೆಚ್ಚಾಗ್ತ
ಆಗ ರಾತ್ರನಗ ಪೋಣೀಲಿ ಗಾಳಿ ಪಿಸುಗುಟ್ಟಿದಂತಾಗುವುದು
ಆಮೇಕಾಮೇಕ ಅದು ಹಟ್ಟಿ ಒಳಗೂ
ಸದ್ದು ಸುಳುವಾಗುವುದೇ ಮುಂತಾದ್ದು
ಮುಪ್ಪಾದರೂ ಕಣ್ಣುಕಿವಿ ಹಲ್ಲು ಗಟ್ಟಿಗಿದ್ದ ತೂರಮ್ಮನು
ಒಂಜಿನ
ಆ ಕಡ ಭಾಗದಲ್ಲಿರೋ ವಾರಗಿತ್ತಿ ಮಗಳಾದ ಈರಿಯು
ತನ್ನ ಹೈದನನ್ನು ದೇವರ ಸನ್ನಿಧಿಗ ಕರ್ಕಂಡು ಹೋಗಿರೋ
ಆ ಸರಿಯಾದ ಟೇಮು ಸಿಕ್ಕಿಸಿಕೊಂಡು
ತೂರಮ್ಮನು
ಎಡಗೈಲಿ ಮಗಳ ಮುಂದಲ್ವ ಹಿಡ್ಕಂಡೂ
ಬಲಗೈಲಿ ಈಚಲ ಇಡಗಲು ಹಿಡ್ಕಂಡು
ಬಗ್ಗಿದ ಬೆನ್ನ ಇನ್ನೂ ಬಗ್ಗಿಸಿ
ಕಪ್ಪು ಹಚ್ಚಿದ್ದ ಕಪ್ಪುಹಲ್ಲೊನ ನೊರಗುಟ್ಸಿ
"ಯಾನಮ್ಮಿ? ಯಾನ ಇದು ನಿನ್ ಮಾಯಾ ಮಂಗಾಟ?
ಚಾಲು ಚಲಾಕು?" ಅಂತ ಗುದ್ದಿದಳು.

ಮಗಳು, ಮೊಕ್ವ ಸೆರುಗಲ್ಲಿ ಮುಚ್ಕಂಡು ಅಲುಬಿದಳು.
ಆ ಬಿಗಿ ಬಿಡದ ತೂರಮ್ಮನು
ಎಡಮುಷ್ಟೀಲಿ ಹಿಡಿದಿದ್ದ ಮಗಳ ಮುಂದಲ್ವ ಚಿಗಿಸಿ ಮೇಲೆತ್ತಿ

"ಯಾರ್ ಮುಂದ್ಯ ಆಡ್ತಾ ಇರೋದು ನೀನೂ?
ಅದೇನ್ ನಿನ್ ಹೊಟ್ಟ ಒಳ್ಗ ಮಡಿಕಂಡಿದ್ದೀಯೋ ಅದ
ಕಕ್ಕು ಅದಾ" ಅಂದಳು.
ಹೀಗೆ ಮಗಳು, ಮೊಕ್ವ ಮುಚ್ಕಂಡು ಸೊರಗುಟ್ತಾ
ಅವ್ವ ಹಿಡುತ ಬುಡದಿರಲು
ಹೀಗೆ...

ಇದು ಹೀಗಾಗ್ತ
ಕೊನಗ ಕೆಂಪಿಯು ಸೋತು ಸುಣ್ಣವಾಗಿ ಸೊರಗುಟ್ತ–
"ಅದ ಯಾನ ಅಂತ ನಾ ಹೇಳ್ಳವ್ವ?
ಅದ ನಾ ಯಾಗ ಅಂತ ಹೇಳ್ಳಿ?
ನಾ ತಂದಂಥ ಫಲ್ವ ನಾ ಯಾಗ್ ಹೇಳ್ಳಿ ಹೇಳು
ನಾ ಸತ್ತಾಗ ಸೊರ್ಗಕ್ಕ ಸೇರ್ಕಲ್ಲಿ ನಂ ಅವ್ವ ಅಂತ
ಹಿಂಡಕೂಳಾಕಾಕ ಒಂದು ಗಂಡ್ಗೂಸು ಆಗೋದು ಬ್ಯಾಡ
ಬೇಕಾರ ನಂಗ. ಬೆನ್ನುಜ್ಜಿ ಕೊಡಾಕ ಅಂತ
ಒಂದು ಹೆಣ್ಣುಗೂಸು ಅಂತಾರೂ ಆಗದು ಬ್ಯಾಡವವ್ವ ನಂಗಾ...?"
ಅಂದಳು.

ಈ ಬಾಣವು ಬಂದು ತೂರಮ್ಮನ ಎಡಗೈಗ ನಾಟಲು–
ಮಗಳ ಮುಂದಲ ಜುಟ್ಟುಬುಟ್ಟು,
ಅಲ್ಲಿಂದ ಬಲಗಯ್ಗ ನಾಟಲು–
ಹಿಡ್ದ ಇಡುಗಲ ಬುಟ್ಟು,
ಅಲ್ಲಿಂದ ಜೀವಕ್ಕ ನಾಟಲು–
ತೂರಮ್ಮ ಕುಸ್ದಳು.

ಅತ್ತ ಮೊಕ್ವ ಎತ್ತದ ಮಗಳು ಸೊರಗುಟ್ಟುತ್ತಿರಲು
ಇತ್ತ ಚೆಲ್ಲೆಸೆದಂತೆ ಕೂತ ತೂರಮ್ಮನು
ತನ್ನ ದೇಹಕ್ಕ ಸೂಲು ಕೊಡ್ಸಿ
ನಡುಗೊ ಪರಾಣ್ಕ ಮಾತಿಟ್ಟು

"ಅದ್ಯಾನ ಇರಾದು ವಸಿ ಬುಡ್ಸಿ ಹೇಳವ್ವತಾಯಿ" ಅಂದಳು.
ಸೊರಗುಟ್ಟುವುದಕ್ಕ ಕೆಂಪೀಯು ಮಾತು ಸೇರ್ಸಿ–
"ನೀನು ಹೇಳೂ ಅಂತಂದ್ರ ಅದ ನಾ ಹೆಂಗೇಳಲವ್ವಾ?
ಅದ ಯಾವ ಬಾಯಿಂದ ಹೇಳ್ಲಿ?
ಕೋಳಿ ಕೆದ್ಕಂಗಾ ಕೆದ್ಕವನ್ಗ ನನ್ ಕಟ್‌ಬುಟ್ಟೊ...
ಮಕ್ಕಳ ಫಲ್ದ ಊರ್ಜಿತ್ವಾ ನಾ ಹೆಂಗ್ ಕಾಣ್ಲಿ?
ನಾ ಹೇಗ್ ಕಾಣ್ಲಿ?" ಅಂತ ಸೊರಗುಟ್ಟತೊಡಗಿದಳು.

ಅಹಾ! ಎಂಥ ಘೋರ ಅನ್ಯಾಯವು
ತಾನು ಹೆತ್ತಂಥ ಕುಡಿಗ
ತನ್ನ ಕಯ್ಯಾರ ಆಯ್ತಲ್ಲಾ ಅಂತ
ಆಗಲೀಗ ತೂರಮ್ಮನ ಕೇಳಿಸೊ ಕಿವಿಯು–ಕೇಳಿಸದಂತಾಯ್ತು
ಕಾಣಿಸೊ ಕಣ್ಣು–ಕಾಣಿಸದಂತಾಯ್ತು.

ಹೀಗಾಗೂ ಆಮೇಲೂ ಕೆಂಪಿಗ ಹುಟ್ಟಿದ ಮಕ್ಕಳ ಫಲವು
ಮೂರು ತಿಂಗಾದ ಮ್ಯಾಲ ಊರ್ಜಿತ ಆಗದಿರಲು,
ಚಿಂತ್ಯ, ಪಕ್ಕದಲಿ ಇಟ್ಟುಕೊಂಡವಳಾಗಿ ತೂರಮ್ಮನು–
"ಎಲಾ... ಯಾವ ದ್ಯಾವ್ರ ಕೇಳಕ ಅಂತ ವೋದ್ರುನುವ
ಆ ದ್ಯಾವ್ರು ನಾ ವೋದೇಟ್ಗಿಯ
ಕುರುತುಗಳ್ಳುವುದಕೂ ಮೊದ್ಲು ಕರ್ದು
ಸಿನೇತಗಾರಳ ಕಂಡಂತೆ ಮಾತಾಡುಸ್ತ–
"ವೊವೊ ಬಾ, ಬಾ , ಮಗಳೇ
ಬಾ ತೂರಮ್ಮ ನನ ಕಂದಾ
ಈ ಸಲ ಮಾತ್ರ ನೀನು ಸಟಗೂವೂ ಚಿಂತ ಮಾಡಬ್ಯಾಡ
ಹುಟ್ಟೋ ಮೊಮ್ಗೊಸಗ ಗಟ್ಟಿ ಆಯಸ್ಸು ಕೊಟ್ಟಿವಿನಿ
ಹುಟ್ಟಿದರ ಮೇಟಿಯು ಇಂತಿಂಥ ಹೆಸರೀಡೂ
ಹುಟ್ಟಿದರ ವಾಲೆಯು ಇಂತಿಂಥ ಹೆಸರೀಡು..." ಎಂದು
ತಲಸವುರೀ ಕಾಣ್ಕ ತಕ್ಕಂಡು ಕಳಿಸುತ್ತಿದ್ದಂಥಹ
ಮಾರಮ್ಮದೀರ ನುಡಿಯು ಹುಸಿಯಾಗೊ ಮಾಯದ ಪತ್ತೆಗಾಗಿ

ಆ ಚಿಂತ್ಯವು ಸೇಣುಸಾಡ್ತ–

"ವೋ ವೊ ಆ ಥರ್‍ವಾಗಿಲ್ಲಾ ಅದೂ
ಈ ಥರ್‍ವಾಗಿ ಅದ ಅದು.
ಈ ತೂರಮ್ಮ ಅವ್ಳಲ್ಲಾ ಅವ್ಳು ಮದ್ದುಮಾಟ ಬಲ್ಲೋಳು.
ಕಟ್ಟುಪಾಡು ಮಾಡ್ತಾಳ.
ಹಟ್ಟಿ ಆಚ್ಗ ನಿಲ್ಲುಸ್ತಾಳ.
ಸಿಕ್ಕಾಕಂಡ್ರ ಹಿಂದ್ಲಪಾದ್ವ ಮುಂದ್ಕ ಬರುಸ್ತಾಳ...
ಈ ಥರ್‍ವಾಗಿ ಆವುದೊ ಪಿಲಾನುಗಾರ
ಗಾಳೋಗರಾವೊ ದೇವಮಾನವರ ಒಳಾಕಿಕೊಂಡು
ನನ್ ಕಂದನ್ಗ ಹುಟ್ಟೋ ಕೂಸ ಮುರೀತಾ ಇರೋ ಅದು
ಈ ಸಲ ಯಾನಾರೂ ಬಂದುದೇ ಉಂಟಾದ್ರೇ
ಈ ನನ್ ಹಳ ಚಡಾವು ತಕ್ಕಂಡೂ
ಅದರಲ್ಲೆ ಅದ್ನೀಗ ಇಸ್ಥೂ ಪಾಲು ಮಾಡಿ ತಿಂತೀನೀ"
ಅಂತ ಉಂಡು ಉಸುರಾಡ್ತ ಇರುವಾಗ–

ಅಲ್ಲಿ ನಿಂತಿರ ಜನ ನಿಂತದ,
ಕುಂತಿರ ಜನ ಕುಂತದ,
ಪಂಚ ಕೊಳ ಆಗದಂತೆ ಕುಕ್ಕರಗಾಲಲ್ಲಿ ಕೂತಿರೋ ಕಿಟ್ಟಯ್ಯ
ಕೂತನ!

ಕೂತಿರೋ ಕಿಟ್ಟಯ್ಯ ಎದ್ದು
ಕಯ್ಲಿದ್ದ ಕಡ್ಡಿ ಮುರ್ದು–
"ಆಗರ ನೀ ಬರಲ್ಲ ಅನ್ನಮ್ಮೀ" ಅಂದನು.
ಕೆಂಪಿಯು, ಇದ್ವಾನ ಯಾವೂರ ದಾಸಯ್ಯ ಅನ್ನಲಿಲ್ಲ.
ಹೆಗಲಲ್ಲಿ ಸರಿಯಾಗಿದ್ದ ಟವಲ್ಲನ್ನು ಸರಿಮಾಡ್ಕಂಡೂ
ಗಂಟ್ಲನೂ ಸರಿಮಾಡ್ಕಂಡೂ
ಹೆಡ್ತಿಗ "ಇದಿಯ ಕೊನ ಸಲ ನೋಡ್ಕ" ಅಂದು,
ಆಮ್ಯಾಲ ಅತ್ಯಮ್ಮಗ–

"ಇದ್ಯಾಕ ಇವ ಹಿಂಗಂತನ ಅಂದ್ಕಬ್ಯಾಡಿ
ಅತ್ತಮ್ಮೋರೇ... ನಿಮ್ ಮಗಳ ಇನ್ನು ನೀವೇ ಮಡಿಕಳ್ಳಿ" ಅಂದು
ಒಂದೀಟು ದೂರ ನಡುದು,
ನಿಂತು,
ಟರ್ಕಿಟವಲ ಇನ್ನೂ ಒಂದ್ಸಲ ಮಡ್ಚಿ ಸರಿಮಾಡ್ಕಂಡು,
ತಿರುಗಿ ಒಂದ್ಸಲ ನೋಡಿಯೂ
ಕ್ಯಾಬಿನಯ್ ಆದಂಥವನಾಗಿ,
ಆಮೇಲ ಎತ್ತಿಕಟ್ಟಿದ ಪಂಚ್ವ ಕೆಳಕ ಬುಟ್ಗಂಡು
ಆ ಪಂಚ್ಯ ಬರಬರ ಸದ್ದು ಮಾಡುಸ್ತ
ನಡ್ದನು.

ಒಳಗ, ಅಂಬಲಿ ನೀರ ತನ್ನ ಹೈದಗ ನೊಣಸುತ್ತಿದ್ದ ಈರೀಗ
ಇದು ದಿಗುಲಾಗಿ
ಕಾಯಕ್ವ ಕೈಬುಟ್ಟು–
"ಅಪ್ಪೋ ಇದ್ಯಾನಪ್ಪ ನೀವ್ ಮಾಡ್ತಾ ಇರದು?
ಅದ್ಯಾನ ನೀವೂ..." ಅಂತಂತ ಅವಳೂ ನಡುದೂ
ಜನಗಳು ಕಡುದೂ
ಬೇಲ್ಗಳು ಸಿಕ್ಕಲಾಗಿ, ಆಗ–
"ನೀವು ಬನ್ಯಪ್ಪ"
"ಅಲ್ಲಿ ನಂಗ ಯಾರವ್ರ ಅಂತ ಬರ್ಲಿ ಹೇಳಿ...?"
"ಇದೊಳ್ಳೆ ಸೈ ಅನ್ನೋ ಮಾತಾಯ್ತಲ್ಲ ನೀವೂ ಆಡೋದು...?"
"ಆಗಾರ ಇನ್ಯಾವುದ ಹೇಳಿಮತ್ತ ಸೈ ಅನ್ನ ಮಾತೂ...?"
"ಜನ ಯಾರ್ನಳಿ ಆಡ್ಕಳದು ಆಗಾರ...?"
"ನನ್ಯಾಕ ಆಡ್ಕಂದದು ಹೇಳೀ...?"
"ಅವ್ವೆ! ಅವ್ರು ಎಷ್ಟೇ ಆದ್ರೂ ಹೆಣ್ಣೆಂಗ್ಸು ಅನ್ನುಸ್ಕತ್ತಳ...
ನೀವು ದೊಡ್ಮನಸರೂವೀ ಹಂಗಿಯ ಆಡ್ದರ, ಮಾತು
ನಿಂತ್ಕಳದು ಯಾರ್ಗ ಹೇಳಿ...?"

ಆಗಲೀಗ ಸೋತ ಕಿಟ್ಟಯ್ಯ ಈರಿ ಹಿಂದ ಟವಲ ಸರಿಪಡಿಸ್ತ

ಈಗ ಬರುತ್ತಿರಲು
ಕಿಟ್ಟಯ್ಯ ಈರಿಗ– “ಇದ್ಯಾನ ಇಸ್ಟೊಂದು ಮುಪ್ಪು ಹಿಡ್ಕಂಡಿದ್ದೀರಲ್ಲಾ”
ಅಂದನು.

ಈರಿ “ಅಯ್ಯೋ ಈಗ್ಲಿಯ ಎಸ್ಟೋ ವಾಸಿಕ ದಮ್ಮಯ್ಯ
ನೋಡಂಗಾರು ಅವ್ನೀ” ಅಂದು
ಇನ್ನೂ ವಸಿ ದೂರವು ಹೋಗಲು “ಅಪ್ಪೈ ನಿಂ ಪಾದ
ನೀವು ಇನ್ನೊಂದ್ಸಲಕ ಬಂದಾಗ ಜೀತ ಮಾಡಾದ್ರೂ ತೀರಿಸ್ತೀನಿ.
ನನ್ ಕೂಸ್ಗ ಯಾನ್ನೋ ಒಂದು ಮಾಡ್ಸಬೇಕಾಗದ
ಇಲ್ಲ ಅನ್ದಿಯ
ಒಂದತ್ ರೂಪಾಯ್ ಕೊಡಿ ಮತ್ತ...” ಅಂದು
ಹೀಗೀಗ ಹೀಗೀಗ ಅಂದಳು.
ಅದ್ಕ ಅವ “ಇದೆಲ್ಲೊ ಇಸ್ಟಿಲ್ ಲೋಟ್ದಲಿ ಕುಡ್ದು
ಚಯ ಹಿಡ್ಕಂಡ ಥರ ಕಾಣ್ತ ಅದ.
ಮೊದ್ಲಿಯ ಹೇಳಾಕ ಯಾನಾಗಿತ್ತು ನಿಮ್ಗ?
ಬರಾಗ ಔಸ್ದಿನಾರು ತರನು...” ಅಂದನು.
ಈರಿ “ಅಯ್ಯಯ್ಯೋ ಅದು ಔಸ್ದಿದಲ್ಲಕ ಸೋಮಿ” ಎಂದು
ತನ್ನ ದನೀಗ ಪರಾಣ ಬೆರ್ಸಿ,
ಇನ್ನೊಂದ್ಸಲ “ಅಪ್ಪೋ ಹತ್ ರೂಪಾಯ್ನಾರು...” ಅಂದಳು.

ಅವ ಜೋಬ ತಡುಕಿದಂತೆ ಮಾಡಿ
ತಗ್ದು ಒಂದು ರೂಪಾಯ್ ನೋಟು ಚಾಚಲು
ಈರಿಯು ಯಾರೂ ನೋಡ್ತಾ ಇಲ್ಲದ್ದ ದುಡಪಡಿಸಿಕೊಂಡು
ತವಕನ ಈಸ್ಕಂಡು
ಸ್ಯಾಲನರಿಗ ಸೇರ್ಸಿ “ಅಪ್ಪೈ... ಇನ್ನೊಂದೇಡು ರೂಪಾಯ್ನಾರುವ...”
ಅಂದಳು.

ಆ ಜರುಗಿದ ಬೆಳಗಲ ಸಮರದ ಸದ್ದುವು
ನಾಕ ದಿಕ್ಕನ್ನೂ ಭೇದಿಸಿ ಮೊಳಗುತಲಿ ಬಂದು

ಕಿವಿಗಿರಿಯುತ್ತಿದ್ದುದು ಅಂತೂ ನಿಂತು
ಈಗ ಗಾಳಿಯಾಡುತ್ತಿರಲು

ಚನ್ನನು ಹೊರಬಂದವನಾಗಿ
ಜಗಲಿಮ್ಯಾಲ ಕೂತು
ಎಡಗಯ್ಯಲಿ ಕನ್ನಡಿ ಹಿಡ್ದೂ
ಬಲಗೈಲಿ ಕತ್ತರಿ ಹಿಡ್ದು
ಮೀಸ ಕತ್ತರಿಸಲಾರಂಬಿಸಿದನು.
ಇಂಗ್ಲಿಷೊಡನೆ ಗುದ್ದಾಡಿ ಬೀಯೆ ಎಂಬ ಏಡಕ್ಷರ ಆಗದೆ
ಎತ್ತೂ ಇಲ್ಲದೆ ಚೆನ್ನನಿದ್ದನು.
ಹೊಟ್ಟಗ ಯಾನಾರೂ ಕಮ್ಮಿ ಬಿದ್ದು
ನಡಗೆಗ ಗತ್ತು ಬಾರದಿದ್ದರೆ
ನಡೆಯುವುದ ಬುಟ್ಟು ಕೂರುತಿದ್ದ ಚನ್ನನು
ತಮ್ಮದೀರ ಜೀತದ ತಂಗಳಲ್ಲಿ ನಿಂತು
ಚನ್ನರಸ ಎಂದು ಹೆಸುರ ಬದಲಿಸಿಕೊಂಡಿದ್ದ ಚನ್ನಂಗೆ
ಈಗ ತನ್ನ ಮೊಖಕ್ಕೊಪ್ಪುವ
ಹಾಲಿ ಮೀಸೆ ಯಾವುದೆಂದು ಬಗೆಹರಿಸಿಕೊಳ್ಳುವುದರಲ್ಲಿ
ಕಷ್ಟ ಎದುರಾಗಿತ್ತು.
ಅದರಕ್ಕನಾಕ್ಯಾಯ ಮೇಲ್ಜಾತಿಗೆ ಕಣ್ಣುರಿ ಮಾಡಲು
ಗಿರ್ಜಾಮೀಸ ಬುಡುವುದು ಅವನ ಗುರಿಯಾಗಿದ್ದರೂ
ಆದರೆ ಚಿಗುರುಗೂದಲಾಗಿತ್ತು.

ಇವಗ ಸಮಸ್ಯ ಹೀಗಿರುವಾಗ
ಕೇರಿಗ ಕಾಲಿಡುತ್ತಿದ್ದ
ಆ ಕಿಟ್ಟಯ್ಯ ಈರೀಯು ಕಂಡುಬಂದು
ಚನ್ನನ ಮೀಸ ಕತ್ತರಿಸುವುದು ನಿಂತು–
ಬದಲಾಗಿ ಅವನ ಮಯ್ಯ ಉರಿ ಎದ್ದು ನಿಂತು–
“ಅದ್ಯಾವ ಸೀಮ ಜನ್ಗಳ ನೀವೂ
ಅದ್ಯಾಕಾರೂ ಹುಟ್ಟಿದ್ದೀರೀ ನೀವೂ

ನಿಮ್ ಜಗಳ್ವ ನಿಮ್ ಹಟ್ಟಿ ಒಳ್ಗ ಮಾಡ್ಕಳಕ
ಅದ್ಯಾನ ರೋಗ ಆಗಿರದು ನಿಮ್ಗಾ?
ಮ್ಯಾಗಲ ಕೇರಿಯವ್ರೂ ನೋಡ್ತ–
'ಇಲ್ನೋಡು ಈ ಹೊಲಬಡ್ಡೆತ್ತವ್‌ಗಳ ಬಾಳಾಟ್ವ'
ಅನ್ನಂಗ ಆಡಗ್ಗತಿ ಮಾಡೀಮಾಡಿ
ಊರ್ಲುವ ಸಮಾಧಾನವಾಗಿ ಇರಗೊಡ್ಸಲ್ವಲ್ಲ ನಂಗಾ...
ಥೂ ಬಡ್ಡೆತ್ತವ..."– ಎಂದು ಉಗ್ದು ಅಂದನು.
ತುಟಿಪಿಟಕ್ಕನ್ನದ ಅವರು ದಾಟಿದರು.

ಚನ್ನನ ಅಪ್ಪ ಬಿಳಿದುಪ್ಪಟಿ ಹೊದ್ದುಕೊಂಡು
ಪಕ್ಕದಲ್ಲಿ ಊರ್ಗೋಲು ಇಟ್ಟುಕೊಂಡು
ಇತ್ತಗ ಬೀದೀಗೂ ಸೇರ್ದಂಗ
ಅತ್ತಗ ಹಟ್ಟಿಗೂ ಸೇರ್ದಂಗ
ಇರೋ ತಾವುನಲ್ಲಿ ಕೂತವನು
ದುಪ್ಪಟಿ ಒಳಗಿಂದ ಕಯ್ಯ ತಗುದು–
"ಓವೋವೊ... ನಮ್ ತೂರಮ್ಮನ ಅಳಿಮಯ್ಯರಲ್ವ!
ನಮ್ಗೂ ನಿಮ್ಗೂವ ಹತ್ರದ ಸಂಬಂಜಕನ...
ಒಂದ್ ಬೀಡಿ ಎಸ್ದುಬುಟ್ಟು ಹೋಗ್ರಪ್ಪೋ..."
ಎಂದು ಕಯ್ಯ ನೀಡಿದನು.

* * * *

## ೫ ಈ ವ್ಯಾಳದಲ್ಲಿ ಮುಂಬರೋ ಕಿಚ್ಚು

ಈ ವ್ಯಾಳದಲ್ಲಿ ಮುಂಬರೋ ಕಿಚ್ಚು ಹಾಯಿಸೊ ಹಬ್ಬದ
ಸಡಗರವು ಮ್ಯಾಗಲ ಕೇರೀಲಿ ನಡದಾಡಿ
ಊರುಗ ದೊಡ್ಡೋರ ಹಟ್ಟೀಲಿ
ಕುಣ್ದು ಕುಪ್ಪಳಿಸುತ್ತಿದ್ದಾಗ,

ಆ ಕಾಲದಲ್ಲಿ
ಸಿದ್ದೂರನು ಅರಜೀವ ಮಾಡಿ ಎಸ್ದು ಹೋಗಿದ್ದ
ಅಕ್ಕಮಾದೇವಮ್ಮ ಯಾಡರ ದೇಹಕ
ಸಂಜ ಆಗುತಾಗುತ ಸೂಲು ಎಂಬುದು ಕೂಡಿಕೊಳ್ಳುತ
ಗಕ್ಕಿಟ್ಟವಳಾಗಿ ಕೂತಿದ್ದ
ಅಕ್ಕಮಾದೇವಮ್ಮನ ಕಣ್ಣುಗಳ ನೀರ್ನ ಕೋಡಿಯು ಹರ್ದ್ದು
ಕೆರೆಯ ಸೇರುತ್ತಿರಲು
ತಾಯ ಹೊಟ್ಟಗ ತಲಹಾಕಿ ಯಾಡನು
ಕಣ್ಣುರೆಪ್ಪ ಮುಚ್ಚೋದು ತಗಿಯೋದು ಸುತ್ತಾ ಕಣ್ಣಾಡಿಸೋದು
ಮಾಡುತ್ತಿರಲು
ಅವನ ಒಳಗಲ ದ್ರವವೆಲ್ಲ ಇಂಗಿದುದಾಗಿ
ಅವನ ಬತ್ತಿದ ನೇತ್ರಗಳಿಂದ ನೀರು ಅಂಬುದು ತಾನೇ ಬರಲು
ಎಲ್ಲಿತ್ತು ಎಂಬುವಂತಿರಲು.
ಯಾಡನ ತಲ್ವ ಭೂಮಿ ಮ್ಯಾಲ ಇಟ್ಟವಳಾಗಿ
ಎದ್ದು ಅಕ್ಕಮಾದೇವಮ್ಮ ನಡೆದವಳಾಗಿ ಬಂದಳು
ಆ ಕಣ್ಣೀರು ತುಂಬಿದ್ದ ಕೆರೆಯ ಕರೆಗ. ಸರಣು
ಆ ಕೆರೆಗ ಮೂರು ಸಲ ಮಾಡಿದಳು. ಕಣ್ಣುಗ
ಆ ಕೆರೆಯ ನೀರ ಮೂರು ಸಲ ಒತ್ತಿಕೊಂಡಳು. ಪ್ರಾರ್ತಿಸುತ

ಆ ಮೂರು ಬೊಗಸ ನೀರ ಕುಡ್ದಾಳು. ಆ
ಸೆರಗೀನ ತುದಿಯಾ ನೀರಿಗದ್ದಿದಳೂ

ಆ ನೀರೂ ಕುಡುದಾ ಸೆರುಗಾ ತುದಿಯಾ
ತನ್ನೇಡೂ ಕೈಲೂ ಹಿಡುದೂ ತಂದೂ

ಆ ಯಾಡಾನಾ ಬಾಯಾ ಆ ಹಕ್ಕಿಯಾ ಬಾಯಾ ಬಿಡಿಸೂತ ಕುಂತೂ
ಆ ನೀರು ಕುಡುದಾ ತುದೀ ಸೆರುಗಾ ನೀರ ತೊಟ್ಟಿಕ್ಕಿಸುತ್ತಿರಲೂ
ಆ ಆಗ ಆ ಯಾಡನಾ ದೇಹದಲ್ಲೂ ದ್ರವವಾಡೀ ಬಂತೂ
ಆ ಆಗ ಆ ಯಾಡನಾ ಕಣ್ಣುಗಳಲ್ಲೂ ನೀರಾಡೀ ಬಂತೂ

ಅಲ್ಲುಗ ಭೂಮತಾಯ ತನ್ನೇಡು ರೆಕ್ಕೆಗಳೂ
ತೆಂಗಿನ ಗರಿಯ ರೂಪದಲ್ಲಿ ಬರುವಂತಾಗಲೂ
ಅಕ್ಕಮಾದೇವಮ್ಮ ಯಾಡರು ಕೂತ ಜಾಗವೂ
ಅಲ್ಲುಗ ನೆರುಳಾಯ್ತು.

ಉಂಟಾದಂಥ ನೆರುಳಲ್ಲಿ
ಅಕ್ಕಮಾದೇವಮ್ಮ ಯಾಡರು
ರಾತ್ರನಗ ಮಲುಗ್ತಾ
ಬೆಳಕರೀತ್ಲೆ ಅದ್ನಿಯ ಹೋಟ್ಲಗ ತಿರುಗ್ಸಂಡೂ
ನಿಚ್ಚಾಲೂ ಟೀ ಕಡುಬು
ಆಯ್ತೋರನಾಗ ದೋಸುವಿ
ಜೊತಗ ಬೀಡಿಬಿಂಕಿಪೊಟ್ಟಣ ಇಟ್ಗಂಡು ಯಾಪ್ನ ಮಾಡ್ತ,
ಯಾಡನು ದಿನದಿನ್ಕ ಬೆಳೀತಾ
ಯಾಡನು ಇಂದ್ಗ ಚಿಕ್ಕವನು ನಾಳ್ಗ ದೊಡ್ಡವನಾದನು.
ದೊಡ್ಡವನಾದ ಯಾಡನು
ಎಡ ಮೂಗಿನ ವೊಳ್ಳಲಿ ಬರೋ ಗೊಣ್ಣನ–
ಬಲ ಮುಂಗೈಲಿ ವರಸ್ಕಳ್ತಾ,
ಬಲಮೂಗಿನ ವೊಳ್ಳಲಿ ಬರೋ ಗೊಣ್ಣನ–

ಎಡ ಮುಂಗೈಲಿ ವರಸ್ಕಳ್ತ,
ಗೊಣ್ಣವಾಚ ಕೈಗ ಕಟ್ಟಿ – ಗಳಾಸ ತೊಳೆಯೋನು.
ಯಾವುದಾರು ದಿಕ್ ತಪ್ಪಿದ ಇರುವೆ
ಏನಾರ ಸಕ್ಕರ ಅರಳ ಕದ್ದು
ಹೋಯ್ತಾ ಬತ್ತ ಸಿಕ್ಕಿಬಿದ್ದರ–
ಬುಡು ಬಡ್ಡೆತ್ತದ, ಈ ಗೊಟ್ಟಿನ ಕಾಲ್ದಲ್ಲಿ
ಒಂದು ಸಕ್ರ ಅರಳಗ ಮೂರ್ಕಾಸು ಆಯ್ತದಕನ ಅಂತ
ಬುಡಸ್ಕಳನು ಅತ್ತಗ

ಇತ್ತಾಗ ಒಂದಿನ
ಆ ಹೋಟ್ಲತವು ಬಸ್ಸು ಅರಗಳುಗ ಸುದಾರ್ಸಕಂದು
ಟೀ ಕುಡ್ದು ಹೊರಡುವಂತಾಗಿ
ಇನ್ನೂ ಇತ್ತಾಗ
ಯಾಡನು ತೊಳದೂ ತೊಳ್ದು ಬುಡುತ್ತಿದ್ದ ಗಲೀಜ್ನ ನೀರೂ
ಕೆರ ಸೇರಗಂಟಾನೂ ಆಗಿ
ಹಾಗೂ
ಒಂದು ಬಸ್ಸು ಅಂಬೋದು ಬಂದು
ಊರಲಿ ತಂಗುದಾಣ ಆದಾಗ,
ಅಕ್ಕಮಾದೇವಮ್ಮನ ಹೋಟ್ಲು ಬರಕಾಯಸ್ತು.
ಆಗ್ಯೆ ಹುಲಿಮ್ಯಾಲ ಕೂತ
ಮಲೈಮಾದೇಶ್ವರನ ಪೋಟ
ಕುದುರಮ್ಯಾಲ ಕೂತ ಬಸುವಣ್ಣನ ಪೋಟ
ನೆರುಕಗ ನೇತಾಡೀ
ದಿನಾ ಅವಕ ಹೂ ಹಣ್ಣು ಊದುಬತ್ತಿ ಬೀಳವು.
ರಾತ್ರನಗ ಅನ್ನ ವಗ್ರಾಣಿ ಸಾರೂ ತಯಾರಾಗ್ತ
ಆ ವಗ್ರಾಣಿ ಸಾರ್ಗ
ಬೆದುಕೀರು ಬೆಂಮನ್ಸಿರಾಗಿ
ಬಾವ್ಕ ಪಡುತಾ.

ಇರಲು, ಯಾಡಗ ಕೆಲ್ಸ ಹೆಚ್ಕಂಡು–
ಹಗಲು ಲೋಟ ತೊಳೀತಾ
ರಾತ್ರನಗ ತೂಕಡುಸ್ತ
ನಾಳ ಕಡುಬಿಗ ಸಂಪ್ಲ ಆಡ್ಸ ಕೆಲ್ಸವಾಯ್ತು.

ಅವರವ್ವ ನೀರ್ಗ ಅಂತ ಹೋದಾಗ
ಟೀಗ ಅಂತ ಬರೋ ಪೋಲಿ ಬಡ್ಡೆತ್ತವು
"ಅಡ್ಯೆ ಯಾಡ, ನಿಮ್ಮವ್ವ ಕೊಟ್ಟಯುಡಾ" ಅನ್ನವು.
ಇವ
ಕೂಸ್ನಲಿ ಕಣ್ಣು ರೆಪ್ಯ ಮಾಡ್ತಿದ್ದ ಆ ಥರ್ವಾಗಿ ಮಾಡ್ತ–
"ತಿರುಗಾ ವಾಪ್ಸು ಕೊಡುದಾದ್ರ ಕೊಡ್ತೀನೀ ಬೇಕಾರ" ಅನ್ನನು.
ಅದ್ಕ ಅವು ನಗವು!
ಆ ದೂರ್ದಲಿ ನೀರು ಸೇದೋ ಆ ಅಕ್ಕಮಾದೇವಮ್ಮನು
ಯಾಡನ ಹುಟ್ಟುಹೆಸುರ ಹಿಡ್ದು–
"ಕೂಸೂ ರಾಜಸೇಕರ ಮೂರ್ತೂ...
ತೊಲಮ್ಯಾಲ ವಚ್ಚಾನ ಹೊಸ ಟೀ ಸೊಪ್ಪು ಮಡುಗಿವ್ನಿ
ಅದ್ರಲ್ಲಿ ಕಾಯ್ಸ್ಕೊಡು ನನಕಂದಾ" ಅಂತ
ವಕ್ಕಳಿಂದ್ಲೆ ದನಿ ಕಡಿಸ್ತ
ನಾಕ ಕೇರ್ಗೂ ಕೇಳಿಸ್ತ ಕೂಗ್ತ ಇದ್ದರ
ಇಲ್ಲಿ ಪೋಲಿ ಬಡ್ಡೆತ್ತವು
"ಅಡ್ಯೆ ಯಾಡ, ನಿಮ್ಮವ್ವ ಕೊಟ್ಟಯುಡಾ" ಅಂತಾ,
ಯಾಡ ಬೆಳೀತಾ
ಇಂದ್ಗ ಚಿಕ್ಕವನು ನಾಳ್ಗ ದೊಡ್ಡವನಾದನು.

* * * *

## ೬ ಅತ್ತಗ ದೊಡ್ಡವನಾದ ಯಾಡನು

ಅತ್ತಗ ದೊಡ್ಡವನಾದ ಯಾಡನು
ಒಂಜಿನ ಅವ್ವಗ "ಅವ್ವಾ ಅವ್ವ ಅದ್ಯಾಕಕನ
ಈ ಕೆಲ್ಸ ಬ್ಯಾಸರಿಕ" ಅಂದನು.
ಅಕ್ಕಮಾದೇವಮ್ಮ ಚೋಜುಗಪಟ್ಟುಕೊಂಡು–
"ಇದ್ಯಾಕಪ್ಪ ಕಂದಾ, ಇಂದು ಹೊಸ ಮಾತ ಆಡ್ತಾ ಇದ್ದಿ!
ಇನ್ನು ಬ್ಯಾರೆ ಕೆಲಸ್ವ ಯಾನ್ ಮಾಡೀಯಪ್ಪ?" ಅಂದಳು.
ಹೀಗೀಗೆ
ಒಂದು ಆಡು, ಒಂದು ಕುರಿ, ಒಂದು ಮೂಗುಬಸಪ್ನ ತಕ್ಕೊಟ್ಟರ
ಅವ ಮೇಯುಸ್ತ ಅದರಲ್ಲೆ ಹೆಚ್ಚೊಕ್ಲು ಆಯ್ತಿನಿ ಅಂದನು.
ಮಗ ಕೇಳಿದ್ದನ್ನು
ಅವ್ವ ಸೆರುಗೊಡ್ಡಿ ವಾರಕ ಅಂತ ಬೇಡಿ ತರಲು
ಅಲ್ಲೊಂದು ರೊಪ್ಪವಾಗಿ ಯಾಡ ಮೇಯುಸ್ತಾ ಇರಬೇಕಾರ–
ಎಲ್ಲರಿಗಿಂತ್ಲೂ ಮೊದ್ಲೆನೆ ಏಳನು
ಅತ್ಲಾಗ ಜೀತಕಾರ ಐಕಳು ಬರೋಕು ಮೊದ್ಲುವ
ಇದ್ದಬದ್ದ ಹಸುರ ತಾನೇ ಮೇಯ್ಸಿಬುಡೋನು.
ಆಗ ಯಾನಾಯ್ತೂ
ಇವ ಮೇಯ್ಸ ಚಂದಕ ಎಲ್ರೂ ಮ್ಯಾಲಬಿದ್ದು
ನಂ ದನ ಮೇಯ್ಸು ನಂ ಆಡುಕುರಿ ಮೇಯ್ಸು ಅಂತ
ರಾಸುಗಳು ಬಂದು ಬೀಳ್ತಾ
ಯಾಡನ ರೊಪ್ಪವು ಹಿಗ್ಗಿತು

ಆ ದಿನವೂ ಯಾಡನು
ಮುತ್ತುಗದ ಮರದ ಮ್ಯಾಲ ಕೂತೂ
ಬುತ್ತಿಬಿಚ್ಚಿ ತಿಂದೂ

ಕಣ್‌ರೆಪ್ಪ ಚಿಕ್ಕದು ದೊಡ್ಡದು ಮಾಡ್ತಾ
ಸುತ್ತಾಲೂ ನೋಡ್ತಾ
ದನಕುರಿ ಆಡಾ ಮೇಯುಸ್ತಾ ಇರಬೇಕಾರ
ಆ ಜೀತಕಾರ ಐಕಳೆಲ್ಲ ಪಿಚ್ಚೆ ಆಡ್ತ ಇದ್ವು.
ಅಲ್ಲಿ ಕಾಸ್‌ಕಟ್ಟಿ ಆಡವರು ನಾಕ್ಜನ ಆದ್ರ
ಅಲ್ಲಿ ಮ್ಯಾಲಬಿದ್ದು ನೋಡವು ಹತ್ ಹೈಕ ಇದ್ವು.
ಯಾಡ ಏನ್ಮಾಡ್ದ
ಮರ ಇಳ್ದು ಬಂದು–
"ನೋಡ್ರೋ ನೋಡ್ರೋ ನಾಳಕ
ನಮ್ಮವ್ವ ಮಾಡ್ದ ವಡ ತಂದ್ಕೊಡ್ತಿನಿಕನ
ಈಗ ನನ್ನ ದನಕುರಿ ಆಡ್ನುವ ನೋಡ್ಕಳ್ಳಿ ವಸ್ಯ
ನಂಗ್ಯಾಕೊ ವಸಿ ಹೊಟ್ಟಕಳ್ತ" ಅಂದುಬುಟ್ಟು
ಹಳ್ಳಕ ಇಳ್ದು–
ಕುವ್ವೆ ಕುವ್ವೆಟರ್ರಾ ಅಂದು
ಆಡುಕುರಿಗಳನ್ನೆಲ್ಲಾ ಬರುಸ್ಕಂಡ,
ಅಂಬಾ ಅಂದು ಹಸುದನಗಳನ್ನೆಲ್ಲಾ ಬರುಸ್ಕಂಡವ
ಅವ್ಗಳ ಓಡುಸ್ಕಂಡು
ನಂಜನಗೂಡ್ನ ಸುಕ್ರವಾರದ ಸಂತಗ ತಂದನು.
ಸಿವಸಿವಾ ಆ ಸಂತಾ ಆ ಹೊಳ ಕಣ್ಣುಗ ಕಾಣಗಂಟಾ ಇತ್ತಲ್ಲಾ
ಅಸ್ಟುದ್ದಾ ಅಸ್ಟಗಲುಕುವಾ
ಆ ಭೂಮತಾಯಾ ಎದ ಮ್ಯಾಲ
ಕುರುಚಲಗಿಡದ ಗುಡ್ಡದ ಥರವಾಗಿ–
ಒಂದ್ಕಡಗೆಲ್ಲ ಜೋಳ್ದ ರಾಶಿ,
ಇನ್ನೊಂದ್ಕಡಗೆಲ್ಲ ಬೆಲ್ಲದ ರಾಶಿ,
ಮತ್ತೊಂದು ಕಡೆಗೆಲ್ಲ ದನ ಕೋಳಿಕುರಿ
ಕೊತ್ತೀನು ಸೈತ ಇರೋದು!
ಅಲ್ಲಿಂದ ಏಳೋ ಸದ್ದುಗದ್ದಲು ಆಕಾಸಕ ಗುದ್ದುತಾ...
ಆ ಜನ್ವೊ ಥರಾವರಿ ಧಿರುಸು ಹಾಕಂಡೂ
ಆ ಕಡ್ಗ ಈ ಕಡ್ಗ ಸುಮ್ನ ಸುತ್ತರು.

ಆಗ ಯಾಡ
ಪೇಟ್ವ ತಲ್ಗ ಸುತ್ಗಂಡೂ ಯಾಸ ತಾಳ್ಕಂಡೂ
ದನ ಇರಕಡ ದನ ನಿಲ್ಸಿ
ಕುರಿ ಇರಕಡ ಕುರಿ ನಿಲ್ಸಿ
ಆಡು ಇರಕಡ ಆಡ ನಿಲ್ಸಿ
ನಡುಮಧ್ಯ ತಾನು ಮೋಜಿನ್ದಾರನಂಗ ನಿಂತ್ಕಳ್ತಲೆ
ಯಾವುದೋ ದೊರಮಕ್ಕ ಮೂರ್ಜನ
ದನದ ಯಾಪಾರ್ಕ ಅಂತ ಒಬ್ಬ
ಕುರಿ ಯಾಪಾರ್ಕ ಅಂತ ಒಬ್ಬ
ಆಡ್ನ ಯಾಪಾರ್ಕ ಅಂತ ಒಬ್ಬ
ಬಂದ್ರು.
ಆ ಮೂರ್ಜನಕ್ಕೂವ ಯಾಡ್ನ ರಾಸುಗಳ ಮ್ಯಾಲ ಮನಸಾಗಿ
ಹೋಗಲೊಲ್ಲರು
"ಏನಯ್ಯಾ ಹುಡ್ಗಾ ಏನ್ ಎಸ್ರು ನಿನ್‌ದು?"
ಅಂತ ಅವ್ರು ಕೇಳ್ತಾರೆ.
ಅವರವ್ವ ನೀರು ತರ್ವಾಗ ಕೂಗೋ "ರಾಜಸೇಕರಮೂರ್ತು" ಹೇಳ್ತಲೆ
ಓಹೋ ಇವನ್ಯಾರೊ ದೊಡ್‌ಮನ್ಸರ ಮನೆಯವನೇ ಇರ್ಬೇಕು
ಅಂದ್ಕಂಡು – "ಯಾಪಾರಕ್ಕೇನ್ರೀ ಈ ರಾಸ್ಗಳು ಇರಾದು?" ಅಂತ್ಲೆ,
ಯಾಡ "ಊಕನ್ರಿ. ನಮ್ ಅಪ್ಪಾಜಿಯವರು
ಇಲ್ಲೆ ತಾಲೊಕ್ ಆಫೀಸ್ನಲಿ ಮೋಜಿನ್‌ದಾರ್
ನೋಡ್ಕ ಬತ್ತಿನಿ ಇರು ಅಂದ್ಬುಟ್ಟು ಹೋಗರಕನ,
ಇನ್ನೊಂದು ಚಣೊತ್ಗ ಬಂದ್ಬುಡ್ತರಕನ
ವಸಿ ತಡ್ಕಳ್ರೀ" ಅಂದನು.

ಆಗ ಆ ದೊರಮಕ್ಕ
ಆ ಆಡುಕುರಿ ದನ್ವ ನೋಡ್ತ
ಆ ಸುಳಿಸುದ್ದ ನೋಡ್ತಾ
ಆನಂದುಸ್ತ
ಅದೂನೂವ ಬ್ಯಾಸರುಕ ಆಗಲು

ಆ ಗಂ ಅನ್ನೋ ಹೋಟ್ಲುಗ ನುಗ್ಗಿ
ಟೀ ಬೋಂಡ್ವ ತಿಂಕಂಡು
ಬೀಡಿಸಿಕರೋಟ ಸೇದ್ಕಂಡು ಬರಲು
ಅಸ್ಟೊತ್ತಗ
ಹೊತ್ತು ನಡುಮಧ್ಯ ಇದ್ದುದು ವಾಲ್ತು.

ಆಗಲಂತು ದೊರಮಕ್ಕಗ ತಡಯಾಕಾಗಲಿಲ್ಲ–
"ಅಲ್ಲಪ್ಪಾ ಹುಡ್ಗ,
ನಾವ್ ನೋಡ್ದುರ ನಿನ್ ರಾಸಗಳ ನೆಚ್ಗಂಡು
ಬೇರೆಕಡಾ ಮನ್ಸೂ ಮಾಡ್ಲಿಲ್ಲ.
ಆ ಕಡ ಪರೂರೆಲ್ಲ ಕಣ್ಣುಗ ಬೇಕ್‌ಬೇಕಾದವ್ನೆಲ್ಲ
ಬ್ಯಾರೆಯವರ ಹತ್ರ ಆಯ್ಕಂಡು ಹೊರಟೂಹೋದ್ರೂ.
ಈ ಕಡ ನಿಮ್ ಅಪ್ಪಾಜಿಯವರೂ ಬರ್ಲ್ನಿಲ್ಲ
ಇನ್ನು ನಿಮ್ ಅಪ್ಪಾಜಿಯವರು ಬಂದೂ
ನಾವು ಯಾಪಾರ ಕುದುರ್ಸೀ
ಇನ್ನು ನಾವು ನಮ್‌ನಂ ಊರು ಸೇರ್ಕಳದು ಯಾವಾಗ್ಲಪ್ಪಾ?" ಅಂದರು.
ಯಾಡನು "ಅಯ್ಯಯ್ಯೋ ನಂ ಅಪ್ಪಾಜಿಯವರು
ಅದೆಲ್ಲೋ ಮೋಜಿನ್‌ದಾರ್ ಜೊತ
ವಡಟೀ ಕುಡೀತಾ ಸಿಕರೋಟು ಸೇದ್ಕತ್ತ
ಮರ್ತುಬುಟ್ಟಿರಬೌದುಕನ
ನೀವ್ಗಳು ವಸಿ ನೋಡ್ಕತ ಇರಿ ಇತ್ತಗ
ನಾನು ಈಚೋರಿಯಿಂದ್ ಹೋಗಿ
ಆಚೋರಿಯಿಂದ ಜೊತಲಿ ಬಂದ್ ಬುಡ್ತೀನಿ ಅತ್ತಗ" ಅಂದನು.

ಆಗ ದೊರಮಕ್ಕ ನಗ್ತ ತಡ್ದು ಅಂದರು
ಏನಂದರ– "ಎಲ್ಲಾದ್ರುನು ಉಂಟೇನಯ್ಯ ಪೆಚ್ಚು ಹುಡುಗ್ನೆ
ಸಂತಲಿ ಒಳ್ಳೇರೂ ಉಂಟೂ. ಕೆಟ್ಟೋರೂ ಉಂಟೂ.
ಯಾನಾರೂ ರೇಟ ಹೇಳವ್ರನೇಯ್ಯ...?"
"ಉಹ್ಞಾ ಸೋಮೀ ಹೇಳವ್ರ.

ಕೇಳ್ದವರ‍್ಗ ಮೊದ್ಲು ಅವ್ರತವಿಯ ರೇಟ್ ಕೇಳು ಅಂದವ್ರ"
"ಅಯ್ಯಯ್ಯೋ ಮೂದೇವೀ
ಆಗಾರ ಅದೆಸ್ಟ ರೇಟು ಹೇಳು ಮತ್ತ"
"ನಿಮ್ ರೇಟ ಮೊದ್ಲ ಹೇಳಿ ಮತ್ತ"
ಆ ಮೂರ‍್ಜನ ದೊರಮಕ್ಕಳುವ ತಂತಮ್ಮಲ್ಲೆ ಮಾತಾಡ್ಕಂಡರು.
"ನಮ್ ರೇಟು ಮೂರ್ ಸಾವರಕಣಯ್ಯ"
"ನಾಕ್ ಸಾವರ‍್ಕ ಬಂದ್ರ ಕೊಟ್‌ಬುಡು. ಅದ್ಕೂ ಮೊದ್ಲುವಿ
ಕೇಳ್ದವರ‍್ಗ ಐಸಾವರ ಹೇಳು ಅಂದವ್ರ ಸೋಮೀ"

ಆ ಯಾಡನ ಮಾತ್ಗ ಆ ದೊರಮಕ್ಕ ನಕ್ಕಂತ ನಗ್ತಾ
ಆ ರೇಟೇನ ಒಂದ್ಕಾಸು ಹೆಚ್ಚೂ ಅನ್ಸಂಗಿದ್ರೂನೂ ಮಾಲೂವಿ
ಆ ಮಟ್ಟಕ್ಕೇನೆ ಐತೆ ಅಂದ್ಕಂಡು,
ನೂರ್‌ನೂರ್ ರೂಪಾಯ್ನ ರವರವ ನೋಟ ಎಣುಸಿ ರಾಸ್ಗಳ ಹಿಡ್ದರು.

ಆ ಚಣವೇ ಯಾಡನು
ಆ ಗಂಮಂತ ಕರೆಯೂತಿದ್ದ ಓಟ್ಲುಗ ತಾನೂವಿ ನುಗ್ಗಿ
ಬೋಂಡ ಟೀ ಕುಡ್ಕಂಡವನು,
ಅಲ್ಲಿ ಲೋಟ ತೊಳೆಯೊ ಗಂಡು
ಐದು ಗಳಾಸ್ನುವ ಐದು ಬೆರುಳಲ್ಲಿ ಸಿಕ್ಸಿಕೊಂಡು
ಆ ಗಲೀಜ್ನ ನೀರ‍್ಗ ಆ ಐದು ಲೋಟನುವ
ಜಳಕ್ಕನ ಒಳಕ್ಕೆಟ್ಟಿ

ಒಳ್ಗ ಲಳಲಳ ಮಾಡ್ಬುಟ್ಟು
ಮೇಲ್ಕ ಥಳಥಳ್ನ ಲೋಟ್ವ ಎತ್ತುತಾ ಇದ್ನಲ್ಲಾ
ಅದ್ನೂವ ನೋಡ್ಕಂಡು ಇವ ಯಾನ್ಮಾಡಬುಟ್ಟಾ
ಬರ‍್ರೋ ಅಂತ ಬಸ್ಸಲಿ ಬಂದು
ಬುತ್ಯ ಅವುಸಿಡ್ತ ಇದ್ನಲ್ಲಾ
ಆ ಮುತ್ತುಗದ ಮರ‍್ವ ಹತ್ತಿ ನೋಡ್ತಾನೇ–
ಆ ಜೀತಗಾರ ಐಕಳು ಇನ್ನೂವಿ ಪಿಚ್ಚಿ ಆಡ್ತಲೆ ಅವೆ!

ಇವ ಇಳ್ದು ಆ ಮರದ ಕೆಳುಗ ಮಲುಗಿ
ಕಟಬಾಯಲಿ ಆ ಕಡಗ ಒಂದು ಗೇಣು
ಈ ಕಡಗ ಒಂದು ಗೇಣು ಜೊಲ್ಲು ಸುರುಸ್ತಾ ಇದ್ದರೆ
ಒಬ್ಬರ ಮೇಲೊಬ್ಬರು ಆ ಜೀತಗಾರ ಐಕ
ಕವುಚ್ಕೊಂಡು ಬಿದ್ದು
ಪಿಚ್ಚಿ ಆಡ್ತಾ ಇದ್ದವು,
ಬುಟ್ಟ ಪಿಚ್ಚಿ ಕಾಣಿಸದಾದಾಗ
ವೋವೋ ಕತ್ಲು ಆಯ್ತು ಅಂದ್ಕಬುಟ್ಟು
ಎದ್ದು ತಂತಮ್ಮ ದನಕುರಿಗಾಗಿ
ಕಾಣ್ವ ಅಸ್ಟೂ ದೂರ್ಕುವ ನೋಡ್ತವ,
ಒಂದು ರವಷ್ಟೂ ಕಂಡುಬರಲಿಲ್ಲ.
ಆ ಹತ್ತೂ ಜನವೂ ಆ ಹತ್ತೂ ದಿಕ್ಕಲೂ ನೋಡ್ಕಂಡು
ತಿರುಗಾ ಮುತ್ತುಗದ ಮರದ ತವುಕ ಬರ್ತವೆ!
ಅಲ್ಲಿ ಯಾಡ ಯಾಸ ಹಾಕಿ
ಜೊಲ್ಲ ಕರಗಟ್ಟಿಸಿಕೊಂಡು ಮಲಗವನೆ!
ಆಗ ಜೀತಗಾರ ಐಕಳು ಯಾನಂತ ಮಾತಾಡಿಕೊಂಡ್ವು:
ನಂ ನಂ ಗೌಡಗಳು ಇನ್ನು ನಂ ಬುಡಾಕಿಲ್ಲ
ಎದ್ದರ ಯಾಡನೂ ಬುಡಾಕಿಲ್ಲ...
ಅಂದ್ಕಂಡು ಕಾಫಿ ತೋಟ್ದ ದಿಕ್ಕ ದೌಡಾಯಿಸಿದವು ಅತ್ತ.

* * * *

## ೭ ಇತ್ತ, ಕತ್ತಲು ಭೂಮಗ

ಇತ್ತ, ಕತ್ತಲು ಭೂಮಗ ತನ್ನ ದಾರದ ಎಳೆಗಳನು ಇಳಿಬುಡ್ತಾ
ಹಾಗೂ ಪಸುಪ್ರಾಣಾದಿಗಳು ಬಾರದಿರಲು
ದಿಗಲುಳ್ಳವರಾಗಿ ಗೌಡಗಳೂ ಗೌಡತೀರೂ
ಗಂಡ್ಸತ್ತ ಮುಂಡರಾದಿಯಾಗಿ ಜಮಾಯಿಸಿ
ಧೂಳು ಕಾಣಲು ತವುಕವಾಗಿರಲು

ಆ ರಸ್ತಾ ಮಣ್ಣುಮಡ್ಡೆಗಳು ಒಂದುಗೂಡಿ
ಅದು ಯಾಡನಾಗಿ
ಆ ಕಲ್ಲುಮುಳ್ಳು ರಸ್ತಾಲಿ
ಯಾಡನು ಉರುಳುಸ್ಯಾವ  ಮಾಡ್ತ
ಹತ್ತೂದನ ಎಬ್ಬುಸೋ ಧೂಳ
ಅವ ಒಬ್ಬನೆ ಎಬ್ಬೂಸ್ತ
ಉರೂಳ್ತ, ಬರುತಾ
ಇದ್ದ್ಯಾನ ಎಂಬುದರ ಅರುತಮಾನ ಅದಾರಿಗೂ ಉಂಟಾಗದಿರಲು
ಎಲ್ಲರ್ರೂ ಒಂದ್ಸಲಕ ಬೆರಗು ಹಿಡ್ದು
ಬಲು ಕಸ್ಟದವರಾರೋ ಮತಕ್ಕ ಹರುಕೆ ಹೊತ್ತವರಿಂದ
ಈ ಸ್ಯಾವ ನಡೆಯೂತಿರಬೇಕೆಂದು
ಅಂದಾಜುಸ್ತ ಇರುವಲ್ಲಿಗ
ಯಾಡನು ಉರುಳು ಬಂದು ಅಲ್ಲಿಗ–
ಅಲ್ಲಿ ನಾನಾ ಥರಾವರಿ ಉರುಳ್ತಾ
ಇದ್ದ್ಯಾನಪ್ಪ ಸಿವ ಇದು ಅನ್ನುಸ್ತ
ಆ ಮಾನುಭವ ಯಾಡನ ಚೊಗ ಚೆಡ್ಡಾದಿಗಳು
ಅವಾವುವು ಇತ್ತೋ ಅವು
ಅವುಕ ಮಣ್ಣುಧೂಳುಏಲುಉಚ್ಚಾತೊಪ್ಪಾದಿಗಳು

ಬಿಡುಸಲಾಗದಂತಂಟಿ
ಅದಾವುದಾದರೂ ಅದಿರಲಿ–
ಅದರೊಳಗಿದ್ದ ಆ ದೇಹವೂ
ರಗುತವಾಡುತ ನೂರಾ ಎಂಟು ಬಣ್ಣವಾದ ಅದು
ನಿಂತ್‌ಕಡ ನಿಲ್ದಿಯ ಉರುಳ್ತ
ಆ ನಿಂತವರ ಪಾದ್ಗಳ ಹಿಡಿಯೂತ

ಬೆವೂತ ಆ ಜನವು ಬಿಂಕಿಕಡ್ಡಿಗೀರಿ
ಬೆಳೂಕ ಮಾಡಿ ನೋಡಲೂ
ಅರುತವು ಸಿಗದಿರಲು
ಆಗ ಬಲುಕಷ್ಟದಲಿ ಯಾರೊ  ಒಬ್ಬ ಬುದ್ದಿವಂತುಗ
ಮೊದಲು ತಿಳಿದುಬಂದು–
ಅದು ಯಾಡ ಅಂಬುದು ಅರುವಾಯ್ತು!
ಆಗ ಆ ಎಲ್ಲರೂ ಯಾಡನ ಎತ್ತಿ ಕೂರಿಸಿದರು.
ಓಡಾಡ್ತ ಒಬ್ಬ ನೀರು ತಂದನು
ಇನ್ನೊಬ್ಬ–ಯಾಡನ ಬಾಯ ಬುಡಿಸಿದನು.
ಆ ಬುಡಿಸಿದ ಬಾಯ್ಗ ಮತ್ತೊಬ್ಬ ನೀರು ಅನಕಿಸಿದನು.
ಮಗದೊಬ್ಬ ಟವಲ್ಲಿಂದ ಗಾಳಿಸ್ಯಾವವ
ಆಗ
ಅವ್ವ ಅಕ್ಕಮಾದೇವಮ್ಮನು
ಲಬೊಲಬೋ ಬಾಯ ಬಡಿಯೂತ ಬಂದು
ಆ ಉರುಳಾಡುತ ಇರೋ
ಯಾಡನ ಮುಂದ ಕೂತು ವಾಲಾಡಿದಳು.
ಎಲ್ಲಕ್ಕೂ ಯಾಡ
'ಲವ್ವೊ ಲವ್ವೊ ಲಪ್ಪೋ ಲಪ್ಪೋ' ಅಂತ.
ಆಗ ತಿಳ್ದವರೊಬ್ಬರು
"ಯಾನ್ನ ಕಂಡು ಬೆಚ್ಕಂಡಿರದು ಇದುಕನ್ಪ
ವಸಿ ಹೊತ್ತು ಸುಮ್ಮಗ ಮಲುಗ್ಸಿರಿ"– ಅಂದರು.
ಬಿಳಿ ಮೀಸ್ಯವ ಒಬ್ಬನು

ಬೇವುನ ಸೊಪ್ಪು ತಂದು ಇಳಿತಗುದು
ತಗೀತಾ ಯಾಡನ ಶರೀಲದ ಮ್ಯಾಲ
ನವುರಾಗಿ ಸೊಪ್ಪು ಸವೂರೂತ ಸವುರ್ತ–
"ಬುಡ್ತು ಅನ್ನು, ಬುಡ್ತು ಅನ್ನು" ಅಂತ ಸವೂರೂತ ಬುಡುಸ್ತಿದ್ದನು.
ಬುಡುಸಾಗಿ ಆಮ್ಯಾಲೂ
"ಅದ್ಯಾನ ಕಂಡ್ಯಪ್ಪ" ಅಂದ್ರ
ಅದ್ಕೊವ ಯಾಡ 'ಲವ್ವೊಲವ್ವೊ ಲಪ್ಪೊಲಪ್ಪೋ' ವದುರ್ತ
ಊರುಗಾದಿ ಊರು ನೋಡ್ತ ನಿಂತಿತ್ತು.
ಅಕ್ಕಮಾದೇವಮ್ಮ ದುಕ್ಕದ ಮಡುವಾಗಿ
ಒಂದು ದಿಕ್ಕಗ ಕಯ್ಯ ತೋರುಸ್ತ–
"ನಮ್ಮ ಏಳ್ಗ ನೋಡಕ್ಕಾಗದವರ ಮಾಟ್ನಕಪ್ಪ ಇದೂ
ಇದು ಅಂತಿಂತದಲ್ಲಾ" ಅಂತ
ನೆಲವ ತಾರುಸ್ತ ವಾಲಾಡೂತ.
ಈ ಚಂದವು ನಿದ್ದಬಂದು
ಆ ಜನಕ ಗುದ್ದೊವರ್ಗೂ ನಡ್ದು
ಅಲ್ಲಿ ನಿಂತೋರು
ತಲ್ಗ ಒಂದ್ಸಲವಾದರೂ "ಅದ್ಯಾನುಡ ಯಾಡ" ಅಂತ ಕೇಳಿ
ಆ ಕೇಳ್ದವರ್ಗ ಸುಸ್ತಾಗಿಸಿ
ಕೊನಗ ಯಾಡನು 'ನಂ ಆಡುಕುರಿ ದನುವಿ' ಅಂತ
ಉಸುರ ಬುಟ್ಟನು.
ಅಕ್ಕಮಾದೇವಮ್ಮಗಾಗ ದೊಡ್ಡಜೀವ ಎತ್ತಿಟ್ಟಂತಾಗಿ
ತಾರ್ಸದು ಕುಟ್ಟೋದು ನಿಲ್ಸಿ ಕೂತು ಬೆಪ್ಪಾದಳು.

ಸುತ್ತಾಲೂ ಜನವಾಗಿ ಗಾಳಿಯಾಡಲು ಕಸ್ಟವಾಗಿ
ಅಲ್ಲಾಡುತ್ತಿದ್ದ ಗಾಳಿಗ ಉಸುರು ಸಿಕ್ಕಾಕಿಕೊಂಡಿರಲು
ಯಾಡ ಅಂದನು–
"ನಂಗ ಹೊಟ್ಟಕಳ್ತ ಬಂತು
ಜೀತಗಾರ ಐಕಳ್ಗ ನೋಡ್ಕಳಿ ಅಂದಿ
ನಾನು ಹಳ್ಳಕ ವೋದಿ

ಅದ್ಯಾಕಕನಿ ಸುಸ್ತಾದಂಗಾಯ್ತು.
ಬಂದವ ಮುತ್ತಗದ ಮರ್ದ ನೆರುಳಲಿ ಮಲಿಕಂದಿ
ಅದ್ಯಾಕಕನಿ ನಂಗಾ ಮಾಯ್ದ ನಿದ್ದಾವು ಬಂದು
ಅಗುತಗತ್ತು!
ನಿದ್ದ ತಿಳ್ದು ಕಣ್‌ಬುಟ್ಟೇ...
ನನ್ ಸುತ್ತಾ ಬಿಕೋ ಅಂತಿತ್ತು!"

ಆ ನಿಂತ ಕುಂತ ರಾಸುದಾರರು ಕುಸ್ದು ಕೂರಲು
ಆಗ ಅಕ್ಕಮಾದೇವಮ್ಮನು
ಆ ಒಂದು ಉಸುರ್ಗ ಎದ್ದು
ಈ ಉಸುರ್ಗ ಬರಬರ್ನ ಬೇಲೀಲಿ ಆಳುದ್ದದ ಲಕ್ಕಿ ಕಡ್ಯ
ಕಿತ್ಗ ಬಂದು ಆ ಎಲ್ಲಾ ಉಸುರ್ನುವ ಸೇರ್ಸಿ
ಯಾಡನಿಗ ರಪ್ಪರಪ್ನ ಗಟ್ಟುಸ್ತ
ತಡೆಯಾಲು ಬಂದವರಗೂ ಬಿದ್ದವು ಅತ್ತಗ!
ಈ ರೋಷವ, ನಿಧಾನಸ್ತಗಾರರೊಬ್ಬರು
ತಡ್ದು ಅಂದರು–
"ಅಯ್ಯೋ ಮರುಳೇ, ನಿನ್ಮಗ ಬದ್ಕಿಬಂದಿರೋದೇ
ಒಂದು ಹೆಚ್ಗಾರಕ ಅಂದ್ಕೊ!
ಆ ಜೀತ್ಗಾರ ಐಕ ಯಾನಾದ್ವೊ ಯತ್ತಾದ್ವೊ
ನೀ ಮಾಡ್‌ಮಟ್ಟಿದ ಪುಣ್ಯ ಅವನ್ನೀಗ ಉಳುಸದ
ಎಲ್ಲರ್ಗೂ ಆದ್ದು ನಿಂಗೂ ಆಯ್ತದ
ಸಮಯ ಅನ್ನೋದು ಕುತ್ತುಗಗ ಬಂದೂ
ಗುದ್‌ಕಂಡು ಕೂತಾಗ
ಆಗ– ನನ್‌ದು ಕೊಡು, ತನ್‌ದು ಕೊಡು
ಅಂತ ಯಾರಾರು ಅಂದ್ರ
ಮೇಲಿರವ್ನು ಮೆಚ್ಚೀನಾ ಅದ ?
ಈಗ ಗಂಡು ಬೆಚ್ಕಂಡದ
ರತನೀರ್ ತಗ್ದು ಒಳಕ್ಕ ಕರ್ಕ..."
ಅಂದವರ ಕಾಲ್ಗ ಅಕ್ಕಮಾದೇವಮ್ಮನು ಬಿಗಿ ಹಿಡ್ದು ಬಿದ್ದೂ–

"ಯಪ್ಪಾ ಸಿವುನೇ, ನಾ ರುಸ್ಯಂತಿ ಆದ್ ತಾವಿಂದ್ಲೂ
ಒಂದು ಸಣ್ಣ ಕೂಸ್ನ ಕೈಲೂ ಬೆರುಳ ತೋರಸ್ಕಂಡು
ಬಾಳಾಟ ಮಾಡ್ನಿಲ್ಲಾ!
ಹಟ್ಟಿ ಒಳ್ಗ ಒಬ್ರು ತರಾವ್‌ರು ಇಲ್ಲಾ
ಒಬ್ರು ಬರಾವ್‌ರು ಇಲ್ಲಾ
ಇಂಥ ಕಡ ನಾನು ಒಂದು ದೂಪನಾರೂ ಆಕ್ಕಂಡೂ...
ಒಂದು ದೀಪನಾರೂ ಅಸ್ನಗಂಡೂ...
ಅವುರಾ ಹೆಸ್ರು ಹೇಳ್ಕಂಡು
ಹೆಂಗೋ ಜೀವ್ವ ಹಿಡ್ಕಂಡಿರೋ ನಾನೀಗ...
ಈ ಮಗ್ನ ದೆಸಲೀ..."

ಅಂತಂತ ಆ ಹಿಡ್ದ ಕಾಲ್ಗಳ ಹಿಡುತ ಬುಡದಿರಲು
ಅವರು ಅವಳ ಮೈದಡುವುತ ಮೇಲೆತ್ತಿ ನಿಲ್ಸಿದರು.
ಅಕ್ಕಮಾದೇವಮ್ಮನು
ಯಾಡಗ ಹಾಗೂ ಬುಡದೆ ಗುದ್ದುತ ನಡ್ದಳು.
ಆದ ಮಾಯವು ಸಿಗದೆ
ರಾಸುಗಳ ಮಡುಗಿ ಒಂದು ಕುಳ ಅನ್ನಿಕೊಂಡವರ್ಗ
ಹಟ್ಟೀಲಿ ಉಣ್ಣಕ ಅಂತ ಕುಂತರೂ
ಕಯ್ಗ ಬಂದ ತುತ್ತು
ಬಾಯ್ಗ ಬಂದರೂ
ಅದು ಒಳಹೋಗದುದಾಗಿ ಇರಲು

ಆ ಸಪ್ಪಟ್ಟು ಸಮರಾತ್ರಲು
ಅಕ್ಕಮಾದೇವಮ್ಮನು
ನಾಳ ಕಡಬುಸಂಪ್ಲವ ತನ್ನ ಸೋತ ಕಯ್ಗಳಿಂದಲಿ
ಆಡುಸ್ತಲೋ ಗೋಳಾಡ್ಸತಲೋ
ಕೈಯಾಡಿಸುತ್ತಿದ್ದಳು.
ಅಲ್ಲುಗ ಯಾಡನು ತವೆಯೂತ ಬಂದು
ಕಣ್ಣುರೆಪ್ಯ ಚಿಕ್ಕದು ದೊಡ್ಡದು ಮಾಡ್ತ

ಆ ಸೊಳ್ಳು ದೀಪವು ಸಣ್ಣದಾತು.
ಆ ಅವ್ವ ಯಾಡನ ಮಯ್ಯಬಾಸುಂಡವಾಗಿದ್ದ ಲಕ್ಕಿಕಡ್ಯ
ಸವೂರೂತ ಸವುರ್ತ–
"ಮೊದ್ಲಿಯ ಹೇಳಾಕ ಯಾನಗಿತ್ತಪ್ಪ ನನಕಂದಾ..." ಅಂದಳು.
ಅನ್ನಲು,
ಯಾಡನು
"ನಾ ಯಾನಾರ ಮೊದ್ಲಿಯ ಹೇಳ್‌ಬುಟ್ಟು
ನೀ ನಂಗ್ ಹೊಡ್ದಾಗ ನಂಗ ಅಳೂ ಬರ್ದಿದ್ರ ಆಮ್ಯಾಕ..."
ಅಂತ ಅನ್ತ
ಎಡಚೋರಿಯ ಚಡ್ಡೀ ನವಾರ್ವ ಮಾತ್ರ
ಹಿಚುಕ್ತಾ ಹಿಚುಕ್ತ
ನೂರ್‌ನೂರ್ ರುಪಾಯ್ಗಳ
ಒಂದಾದ ಮ್ಯಾಲ ಒಂದ ಹೊರಬರುಸ್ತ
ಜೊತಗ ತವಕನ ಆ ನೋಟ್ಗ ಅಂಟ್ಕಂಡಿದ್ದ ಕೂರನತ್ತು ಮುಂತಾದ್ವು
ಆ ಕಾಸ್ನ ಆಸ್ಗ
ಪರಾಣಬುಟ್ಟರೂ ಬುಡಲ್ಲ–ಅಂತ
ಅವೂ ಇಣುಕ್ತ ಬಂದವು.

ಆಗಲೀಗ, ಅಕ್ಕಮಾದೇವಮ್ಮಗ
ಮದೂಗ ಬಂದಂಥ ತನ್ನ ಮಗನಿಗ
ತನ್ನ ಹಾಳಾದ ಕಯ್ಗಳಿಂದಾ ಕಣ್ಣುಗಾಣದೆ ಹೊಡದುದಕಾಗಿ
ದುಕ್ಕಾವು ಉಕ್ತಾ "ಅಯ್ಯಯ್ಯೋ ನನಕಂದಾ
ನಿಂಗ ಮೊಕಮೋರ ಮಯ್ಯಿ ಅಂತ ನೋಡ್ದೀಯಾ
ಹೊಡೀತಲ್ಲಾಪ್ಪ ಈ ನನ್ ಹಾಳಾದ ಕಯ್ಗಳೂ
ಇವು ಎಂದ್ಗಪ್ಪಾ ಸೇದೋಗದೂ.....ಇವೂ..."
ಅಂತಳೂತ.

* * * *

## ೮ ಆಗಲೀಗ ಯಾಡನಿಗ ಯಾಕಕನಿ ದುಕ್ಕವು

ಆಗಲೀಗ
ಯಾಡನಿಗ ಯಾಕಕನಿ ದುಕ್ಕವು
ಅದೆಲ್ಲಿಂದಲೋ ಬಂದು ಅವನ ಮಯ್ಯುಂಬಿತು.
ದುಕ್ಕಳಿಸನು. ಆ ದುಕ್ಕಳಿಸೋ ದುಕ್ಕವು
ಅವನ ಮಯ್ಯಿಡೀ ಎದ್ದು
ಗೋಳೋ ಎಂದು ಹೊರಬಂದು
ಆ ಗುಳ್ಳ ಆವರಿಸಿ
ಆ ಗುಳ್ಳಿಂದಾಲೂ ಎದ್ದು ಆ ಊರ ಆವರಿಸಿಕೊಂಡು
ಆ ಊರಿಂದಲೂ ಎದ್ದು
ಬಾನುದುಂಬಿತು.

ಇತ್ತ ಈ ಸಮರಾತ್ರದಲಿ
ಮಂಚದ ಮ್ಯಾಲ ದೇಹವಿರಿಸಿದ್ದ ಸೋಮಪ್ಪರ ದೇಹವ
ಅದರೊಳಗಿದ್ದ ಜೀವವು ಇದ್ದಲ್ಲಿ ಇರಗೊಡ್ಸದೆ
ಎತ್ತೆತ್ತಿ ಇಡ್ತಾ
ಮಂಚಕ್ಕೂ ಮಯ್ಯೂವಾಗಿ
ಸಾಕಪ್ಪ ಈ ಜಲ್ಮ ಅನ್ನುಸ್ತಾ
ಆ ಮಂಚವು ತಲ್ವ ಎತ್ತಿ ಚಾಚಿ ನೋಡೀ ನೋಡಿ
ಅದರ ಕತ್ತುಗ ಸೆಳತ ಬಂದೂ
ಸೋಮಪ್ಪರು ಕಣ್ಗಳ ಬುಟ್ಗಂಡು ಇರೋ ಕಾರಣವಾಗಿ
ಮಂಚಕ ಯಾನಾರು ಮಾತು ತಗೆಯಲು ಸುಳಿವಾಗದೆ
ಅದರ ಮಡುಗಟ್ಟೀದ ಸಂಕಟವೋ
ಹೇಳತೀರದಾಗಿತ್ತು.

ಸೋಮಪ್ಪರು
ಸಂಕ್ಲಾಂತಿ ಹಬ್ಬದ
ಬಡೂಬಗ್ಗರ ದಾನಧರ್ಮದ ಸಾವಿರ ಸೀರಗ ಆರ್ಡರು ಕೊಟ್ಟು
ಇಂದು ಬರಬೇಕಾದ ಲಾರಿಯು ಬಾರದೆ
ಅವರ ಉಸುರಾಟವು ಏರುಪೇರಾಗಿ
ಕಣ್ಗಳ ನಿದ್ದವು
ಸೀರ್ಗಳ ನೋಡ್ವ ತವಕದಲಿ ಓಡಾಡ್ತ...
ನಾಳ್ಗ  ಸಾವಿರ ಸೀರ್ಗಳೂ ಬಂದೂ...
ಆ ಒಂದೊಂದು ಸೀರೆಯೂ ಹದ್ನಾರು ಮೊಳ...
ಆ ಸಾವಿರ ಸೀರ್ಗ ಹದ್ನಾರು ಸಾವಿರ ಮೊಳವಾಗಿ...
ಅದರ ಈ ಒಂದು ತುದೀಲಿ ಊರು ಸುತ್ತಾ ಸುತ್ಸಕಂಡೂ...
ಆಗ ಈ ತುದಿಯೂ ಆ ತುದಿಯೂ ಕೂಡಿ
ಆ ಊರಾಗಿದ್ದ ಊರನ್ನು ಬಳಸ್ತಿರೋ...
ಎಂಬ ಆ ನಗುವೂ ಅವರ ನಿದ್ದೇನ ಕೊಲ್ಲೂತ
ಹೀಗ ಸುಕವಾಗಿ ಯೋಚುಸ್ತ
ಸೋಮಪ್ಪರ ಬುಟ್ಟಗಣ್ಣುಗಳ ಸುತ್ತಾಲೂ
ಆವರಿಸುತಲಿದ್ದ ಕಪ್ಪುಗ ಇನ್ನೊಂದು ಗೆರವ
ಆ ಕಾಲ ನನ್ಮಗನು
ಅವನ ಟೇಮುಗೆ ಅವನು ಕರಾರುವಾಕ್ಕಾಗಿ
ಅರುವಾಗದೋಪಾದಿಯಲಿ
ತನ್ನ ಗೆರ್ವ ಎಳುದು ಡೂಟಿ ಮುಗಿಸಿದನು.
ಇದರ ನಾಳ್ಗ ಆ ಕಾಲನು ತನ್ನ ಟೇಮ್ಗ ಬಂದು
ಸೋಮಪ್ಪರ ಕಣ್ಣುಬಳ ಸುತ್ತಲ ಕಪ್ಪುಗ
ಇನ್ನೊಂದು ಗೆರವ ಎಳೆಯೋ ಕಾಲ್ದಲಿ
ಸಾವಿರ ಸ್ಯಾಲಗಳು ಬಂದು
ಮನೆದುಂಬಿದ್ದ ಸಿರೀಲಿ
ಸೊಮಪ್ಪರು ಎಂದೂ ಇಲ್ಲದಷ್ಟು
ಸರ್ವವ ಮರ್ತು ನಿದ್ದವಾಗಿದ್ದರು.
ಅದರಿಂದಾಗಿ ಅವರ ಜೀವಾತ್ಮನು ಎದ್ದವನಾಗಿ

ಸೋಮಪ್ಪರ ತಲದೆಸಲಿ ಸಂತೋಸವಾಗಿ ಕೂತನು.
ಆಗಲೀಗ ಮಂಚಕ ಬಲು ಆನಂದವಾಗಿ
ಸುಮ್ಮಗ ಸ್ವಂಟಗ ಬಾಯಲಿ ಉಸ್ಸೋ ಅಂದು
ಆ ಮಾಮೂಲಿ ವಯ್ಯಾರದಲಿ ಕತ್ತಾಡುಸ್ತ–
ಅಯ್ ನಾನೀಯ ಹೇಳ್ಬೇಕಾರ
ಅದು ಕೇಳ್ದನೆ ಇದ್ದುದಾ ಎಂಬ ಅಹಂಭಾವದಲಿ
ಹೇಳತೊಡಗಿತು:

“ಅದೆಲ್ಲಿಗ್ಯ ನಿಲ್ಸಿದ್ದು ನಾನು?
ಇಂಥ ಕಡ ಇರಾಕ ಅದೇನ್ ಪಾಪ್ವ ಮಾಡಿದ್ನೋ ನಾನೂ...
ಅಂಬೋ ಅಲ್ಲಿಗ್ ತಾನೀಯ?
ನನ್ನ
ಗೊಂಬ ಕಂಡಂಗ ಮಾಡುಸ್ದನಲ್ಲಾ
ಆ ಪುಣ್ಣಾತಮಗಾರ ದೊರ!
ಅವ್ನ ಈ ತಂಪು ಹೊತ್ನಲ್ಲಿ ನೆನುಸ್ಕಬೇಕೂ!
ಅವ ಇರಗಂಟಾನು
ಗಿಣಿಗಿಂತ್ಲು ವಸಿ ಹೆಚ್ಚೂ ಅನ್ನಂಗಿಯ ನನ್ನ ನೋಡ್ಕಂದದು.
ಅವನ ಮಗ ಬಂದ್ನಲ್ಲ
ಅವ್ನ ಕಾಲ್ದಲುವಿ ಪರ್ವಾಗಿಲ್ಲಾ!
ಇದ್ದುದ ಇಲ್ಲ ಅಂತ ನಾ ಅನ್ನಾಯ ಆಡುದ್ರ
ಆ ಮೇಲಿರೊ ಸಿವ ಮೆಚ್ಚಿನಾ?
ಇವ ಆದಮ್ಯಾಲ
ಇವ್ನ ಮಗ ಪಟ್ಟಕ ಬಂದ್ನೋ ಚಟ್ಟಕ್ಕ ಬಂದ್ನೋ...
ಅಹಹ ಈ ಮುರ್ಕ್ಮಗನ ಕಾಲ್ದೇಸಲಿ
ಏಡ್‌ವರ್ಸಕ ಏಡ್‌ಲೋಕ್ವ ಕಂಡ್ಬುಟ್ಟೀ ನಾನು
ಇವರವ್ವ ಬಸುರೀ...
ಅವನ್ನ ನನ್ಮೇಲ ಹೊತ್ತೂ ಹೆತ್ತೂ...
ಅದ ಈಗ್ಲೂವಿ ನೆನಸ್ಕಂಡರ
ಆ ವಾಸ್ನ ನನ್ ಮೂಗ್ಗ ಇನ್ನೂ ಕಟ್ಕಂಡಾಗಿಯ ಅದ.

ಇದೇನಾರು ಅವನ್ಗ ನೆಪ್ಪಿದ್ದ?
ಆ ಮೂದೇವ್ಗ ಈ ನೆಪ್ಪಿದ್ದರ
ನಾ ಯಾಕ ಇಲ್ಲುಗ್ ಬಂದು ಯತಪಡಬೇಕಿತ್ತುಕನ.
ಅದಿರ್‍ಲಿ
ಅವ ನಿಂತ್ ಕಡ ನಿಲ್ತಿರಲಿಲ್ಲ
ಗರಗರ್‍ನ ಪಿಸಾಚಿ ಸುತ್ತಂಗ ದೇಸ ಸುತ್ತೋನು,
ಇಲ್ಲಿ ಅವ್ನ ಹೆಡ್ತಿ
ಒಂದ್ಸಲಕ ಒಬ್ಬನ್ ಕೈಲಿ ಕುಟ್ಟುಸ್ಕಂಡ್ರ
ಪುನಃ ನಾಳಿಕ ಇನ್ನೊಬ್ಬ ಆಗಬೇಕೂ...
ಅಂಥ ಚಾಲ್ನವಳೂ.
ಒಂದ್ಸಲ ಆ ಮುರ್‍ಕ್ಮಗ
ಆ ದೇಸ ಈ ದೇಸ ಅಂತ ಸುತ್ಗಂಡು
ಸಮುದ್ರದ ಆಚ್ಗೂ ಕೇಮಿಲ್ದೆ ಹೋಗಿದ್ದನಂತ
ಅವನ್ಗ ಕೇಡು ಬರ.
ಅಲ್ಲಿಂದ ಬಂದವ
ಒಂದು ಗಂಭೀರನಾರ ಕಲ್ತಗ ಬಂದ್ನಾ ಅವ?
ನಮ್ಮ ಕಂಡ್ತೂ ಅಂದ್ರ ಚೀ ಥೂ ಉಗುಯೋನು.
ಈ ಯತೆ ಅನ್ನೋದು ಒಂದ್ ಇಲ್ದಿದ್ರಾ
ನನ್ ಈ ಜಲ್ಮ ಇನ್ನೆಂಗಿರದೋ!

ಆ ಸಿವ ಕೊನಗು ಒಂಜಿನ
ಅಲ್ಲಿಂದ ಬ್ಯಾರೆ ಆಗೋ ಗಳುಗ್ಯ ಕೊಟ್ಟೂಬುಟ್ಟಾ ಕೇಳೀ
ನಮ್ಮ ತಂದೂ ತಂದೂ ಬೆಟ್ಟದಂಗ ಹರಾಜ್ಗ ಎಸುದ್ರು.
ಎಂದೂವಿ ಬಿಸಲು ಕಾಣ್ದವಳು ನಾನೂ...
ಆ ಬಿಸುಲ್ಗಿಯ ಮೂರ್ಚ್ಚರೋಗ ಬಂದಂಗಾಗದು ನನ್ ಜೀವ್ಕ...
ಆಮ್ಯಾಕ
ಅಲ್ಲಿ ಆ ಜನ್ವೋ ಪೋಜು ನೋಡಕ್ಕಿಂತ ಹೆಚ್ಗ ನಿಂತಿರೋದು.
ಆ ನಮ್ಮಾ ಮುಟ್ ನೋಡವರು ಎಸ್ಟ್ ಜನ್ವೊ...
ನಮ್ಮಾ...

ಒಬ್ಬ, ಪೇಟ್ವ ಹಾಕಂಡೂ
ಆ ಪೇಟ್ಗ ಹಕ್ಕಿಪುಕ್ಕದ ಕುಚ್ಚು ಕಟ್ಗಂಡೂ
ಆ ಜಮಾಧಾರಿ ಕುಣೀತಾ ಕುಣೀತಾ–
'ಜೀ ಹುಜೂರ್ ಸವಾಲ್ ನೂರ್ ರೂಪಾಯ್' ಅಂತ
ಪಾದದಿಂದ್ಲೂ ಬಲ ಎಳ್ಕಂಡು
ಬಾಯಿಂದ ಕೂಗನು.
ಅದ್ಕ ಹತ್‌ಜನ ತಾಟಪೋಟಿ ಆಡ್ತಾ ಆಡ್ತ
ಆಡ್ತಿಯಾ ಸಾವರ್ಗಂಟಾನು ಏರ್ಕಳದು...
ಯಾನ? ರೇಟು!
ಈ ತಾಟಪೋಟಿಯೆ ಕಣ್ಗ
ಒಂದ್ ಹಬ್ಬಾ ಅನ್ನಂಗಿರದು.

ಆ ಕತ ಅಲ್ಲಿ ಆ ತರ ಆಗ್ತಾ
ಇಲ್ಲಿ ನನ್ಕತ ಇನ್ನೊಂದು ತರವಾಗಾಯ್ತು.
ನನ್‌ತಪು ಅದ್ಯಾನ್ನ ಕಂಡ್ನೋ
ಅವನ್ ಮೊಕ್ಕ ಉಗಿಯಾಕು ಮನಸ್ಸಾಗದು ನಂಗ.
ಆ ಯಾತ್ಯಾತಿಕು ಬ್ಯಾಡದವ
ಆ ಚಡ್ಡೀಚೊಗ ಚೊಗದ್‌ಮ್ಯಾಲ ಒಂದು ಟವಲ್ನವ
ಅವ ನನ್ ಸುತ್ಲೂ ಬಳೂಸ್ತ
ಸುಮ್ಗ ಸುತ್ತನು.

ಇದ್ಯಾನ ಇವುಳ್ಗ ಇಷ್ಟೊಂದು ಧಿಮಾಕು ಅಂತ ನೀವು
ಅಂದ್ಕಂಡ್ರೂ ಸರಿಯಾ...
ನನ್ ಕಣ್ಣಾಣುಗುವ
ಆಗ್ಲಿಯಕಪ್ಪ ನಂಗ ಚಡ್ಡೀಚೊಗ ಅನ್ನದು ಅರಿವಾದ್ದು...
ಅವ ನಂಗ ಮೆಲ್ಲ್‌ಗ ಸವುರುದ್ರೂನು
ನಂಗ ಗರುಗ್ಸ ತಕ್ಕಂಡು ಕೂದಂಗ ಆಗದು ನಂಗ.
ಅದೂ ಇರ್ಲಿ ಬೇಕಾರ

ಅವನ ಕಯ್ನ ವಾಸ್ನಾ
ನೂರ್ಜನವ ಒಂದ್ಸಲಕ ಹೆತ್ತವಳ ಥರ್‍ವಾಗಿ
ಸುಮ್ಗ ಚುಂಗೋ ಅಂತನ್ನದು.
ಆ ಅವ್ನ ಆಡೋ ಆಟ್ಕುವೀ...
ಅವ ನನ್ ಬಳಸೋ ಬಾವಕ್ಕುವೀ
ಆ ಜನ ಅತ್ತಗ ಇರ್‍ಲಿ
ಆ ಜಮಾಧಾರಿ ಸ್ಯೆತ ನಗೋನು ಅತ್ತಗ.
ಅವ ನನ್ ಸುತ್ಲೂವಿ ಸುತ್ತುತಾ ಇದ್ನಲ್ಲಾ
ಅವ ಸುಮ್ಮಗ ಸುತ್ಲೀಬೇಕಾರ
ಅಣ್ಣಯ್ಯಾ ಕೇಳೀ
ಮೂಸೂ ನೋಡ್ತ ಆ ಮೂದೇವೀ
ಆದ್ರೂವಿ ನಾ ಯಾನ್ ಮಾಡಗಿದ್ದನು?
ನಾ ಬಂದು ಬಿದ್ದಿರೋದು ನೋಡ್ದುರ ಹರಾಜ್ಗ ಕೇಳೀ.

ಕೇಳೀ,
ಆ ಜಮಾಧಾರೀ ಎಂದೂವಿ ನಗೂನೇ ಕಂಡಿರ್‍ನಿಲ್ವೇನೋ
ಅವ, ದೊಡ್ಡ ಹೊಟ್ಟ ತುಂಬ ನಗೂನ ತುಂಬ್ಸಗಂಡು
ಉಕ್ಕುಸ್ತ– 'ಯಾನಯ್ಯ! ಯಾವೂರ?' ಅಂದನು.
ಅದ್ಕ ಇವ ಇಂಥ ಊರು ಇಂಥ ಕೇರಿ ಅನ್ನಬಾರ್‍ದ?
ಇವ ಯಾನ ಅನ್ನದು ಅದ್ಕ...
ಮೂಡ್ಲಕಡ್ಗ ಕಯ್ ತೋರುಸ್ತ–
'ಈ ಕಡ ಇರ ಊರು ಮಾಸೋಮಿ' ಅನ್ನದ!
ಅದಕು ಆ ಜಮಾಧಾರಿ ಹೊಟ್ಟಗ ತುಂಬ್ಕಂಡ ನಗುವೂ
ಸೇರಿ ತುಳುಕಾಡ್ತ
ಅವ ತನ್ನೇಡೂ ಕಯ್ಯಲಿ ಹೊಟ್ಟ ಹಿಡ್ಕಂಡು
ಕುಲುಗುಡ್ತ ಕೂತ್ಗತ್ಲಿಯಾ...
ಅದ್ಕಾ ಆ ಸುತ್ತಾ ಮೆತ್ಗಂಡಿದ್ದ ಜನವೂ
ಚಪ್ಪಾಳ ತಟ್ತ ನಗ್ತ.

ಅಣ್ಯೆ, ನೀ ಯಾನಾರೂ ಅಂದ್ಕ ಬೇಕಾರ
ನಾ ಬಂದು ಬಿದ್ದಿರೋದು ನೋಡುದ್ರ
ಹರಾಜ್ಗ ಎಸ್ದಿರೋ ಅಳಸಲ ಅನ್ನ
ಅಂಥ ನಂಗೂವಿ ಸೈತ ನಗು ಅನ್ನದು ಬತ್ತಿರದು ಅಂತಿನಿ!

ಆ ಪೇಟನೂವಿ
ಆ ಪೇಟ್ದಮ್ಯಾಗಲ ಕುಚ್ಚುನುವಿ ಕುಣೀಸ್ತ
ಆ ಜಮಾಧಾರಿ ಕುಣೀತ್ಲೆ 'ಯಾನಯ್ಯ?ಏನ್ ಎಸ್ರು ನಿಂದು?' ಅಂದನು.
ಆಗ ಆ ಯಾಸದವ
ತನ್ನ ಏಡೂ ಕಯ್ಯಗಳ
ಆಂಜನೇಯಸೋಮಿ ಥರ್ವಾಗಿ ಎದ ಮುಂದ್ಕ ತಂದ್ಕಂಡೂ
ಮುಂಗೈಬೆರುಳ ಇಳಿಬುಟ್ಟು ನಡುಗುಸ್ತಾ–
'ಯಾಡೇಗೌಡ ಅಂತ ಊರ್ಲಿ ಕರೀತಾರ ಬುದ್ಯೋರ' ಅಂದನು.
ಅವ್ನ ಯಾಸ್ಗ, ಅವ್ನ ಮಾತ್ನ ಬಾವ್ಕ
ನಂಗಿಯ ನಗು ಬರ್ತಿರಬೇಕಾರ
ಇನ್ನು ಉಳ್ದವರು ನಗೋದರಲ್ಲಿ ತೆಪ್ಪೇನಿದ್ದದೂ...
ಈ ಕುಸಿಗ ಆ ಜಮಾಧಾರಿಗ ಸುಮ್ನಿರಕ್ಕಾಗಿದಿಯಾ–
"ಈ ಮಂಚ್ದ ಮ್ಯಾಲ ನಿಂಗ ಗ್ಯಾನ ಉಂಟೇನಯ್ಯ?" ಅಂದನು.
ಅವನ ಹೆಸರೇನ?
ಯಾಡೇಗೌಡ್ನೋ ಏನೋ ಅಂತಲ್ವ...
ಆ ಮುರ್ಕಗನಾರು ಸುಮ್ನಿರಕ್ಕಾಗದಿಯಾ–
'ಗ್ಯಾನೇನ ಉಂಟೂ ಮಾಸೋಮಿ
ಆದ್ರ ನನ್ ಕೈಲಿ ಸತು ಇಲ್ವಲ್ಲಾ' ಅಂದನು.

ಇಸ್ಟೊತ್ತಿಗ,
ಆಗ್ಲಿಯ ಅವುನ ಯಾಸ್ಗ ಅರ್ಧಜನಾ
ಅವುನಾ ಮಾತೂನ ಬಾವ್ಕ ಇನ್ನರ್ಧ ಜನ
ಮಾರ್ಕಂಬುಟ್ಟಿತ್ತು ಅವಗ!
ಆ ಅವರು ನಕ್ಕ ನಗುವೇನ ಬೀದೀಲಿ ಬಿಟ್ಟಿ ಬಿದ್ದಿತ್ತ ಅಣ್ಣಯ್ಯ?

ತಾಡೂ, ಜೋಬ್ಲಿ ಸಾವ್ರ ರೂಪಾಯ್ನ ನೋಟು ಅದ
ಪ್ಯಾಟ ಬೀದೀಲಿರೊ ದೊಡ್ಡ ಅಂಗಡಿಲಿಯ
ನಗುವ ತಕ್ಕಂದು ಬತ್ತೀನಿ ಅನ್ನಂಗಿದ್ದುದಾ?
ಸೊಪನ್‌ದಲ್ಲೂ ನಗಾಕ ಆಯ್ತದೊ ಆಗಲ್ವೊ ಅಂಬೋ ಆ ಕಾಲ್ದಲಿ
ಅವರು ನಕ್ಕ ನಗೂಗ ಎಸ್ಟು ಸಾವ್ರ ಕೊಟ್ಟರೂ ತಾನೀಯ
ತೀರೀದೂ?
ಆಗ್ಲಿಯ ನಂಗ ಇದು
ಇಲ್ಗಿಯ ತಮಾಸಿಲಿ ಮುಗಿಯದಲ್ಲ ಇದು ಅನ್ನುಸಬುಡ್ತು...

ನಾ ಹಾಳಾದವಳು
ಅದ್ಯಾವ ಗಳುಗೇಲಿ
ಅದ್ಯಾಕಾರು ಹಾಗಂತ ನಾ ಅಂದ್ಕಂಡನೋ ಕಾಣೆ.
ನಗುವು ಜಮಾಧಾರಿಯಾಗಿ ನಿಂತ್ಕಂಡು ಗಂಭೀರವಾಗಿ
ಬಲಕಯ್ಯ ಮೇಲಕ್ಕೆತ್ತೀ
ಎಡಕಯ್ಯ ಮೂಡ್ಲ ಕಡಗ ತೋರುಸ್ತ
ಕುಣಿSದೀಯ ಏನಂದ:

'ನೋಡ್ರಪ್ಪ ಮಾಜನ್ಗಳೇ...
ನನ್ನ ಎಡಗೈನ ಕಡ ಇರೋ ಊರ್ನ
ಶ್ರೀಮಾನ್ ಯಾಡೇಗೌಡ್ರಗ
ಇಲ್ಲಿರೋ  ಸಾವ್‌ರಾರ್ ರೂಪಾಯ್ ಕೊಟ್ರೂ ಸಿಗ್ದೆ ಇರೂವಂತ
ಮಂಚದ ಮ್ಯಾಲ ಗ್ಯಾನ ಉಂಟಾಗಾಯ್ತಂತೆ.
ಅವುರ್ಗ ಈ ಗ್ಯಾನವ ದೇವ್ರು ಕೊಟ್ಟದ್ದು
ಅದು
ನಾವು ಮಾಡ್ದ ಪುಣ್ಯದ ಫಲ ಅದು!
ಆದರೆ ಕೇಳೀ...
ಅವ್ರ ಹತ್ರ ಸತು ಇಲ್ವಂತೆ
ಅವ್ರ ಹತ್ರ ಸತು ಇಲ್ದೆ ಇದ್ರೂನೂ
ಅವ್ರು ನಮ್ಗ ಕೊಟ್ಟೀರೊ ಸಂತೋಸನ

ನಾವು ನಂ ನಮ್ಮ ಮನೇಗೂ ಹೊತ್ಗಂಡು
ನಮ್ ನಮ್ ಹೆಡ್ತಿ ಮಕ್ಕಳಗು ಹಂಚುವಸ್ಟು ಕೊಟ್ಟಿದ್ದಾರೆ.
ಅದ್ಕಾಗಿ ಮಾಜನ್ಗಳೇ
ಜಿ ಹುಜೂರ್ ಸವಾಲ್  ಮ್ಯಾಲ
ಶ್ರಿಮಾನ್ ಯಾಡೇಗೌಡರು ನಾಕ್ ಆಣಿ ಹೆಚ್ಚಗೆ ಕೂಗ್ಲಿ ಸಾಕು
ಮಾಜನ್ಗಳು ಯಾರೂ ಬಿಡ್ಕೂಗಬಾರದು
ಇದ್ಕ ಸಮ್ಮತಿಯೋ...?'
ಅಂತ್ಲೆ–
ಆ ಮಾಜನ್ಗಳು ಎಲ್ರುವ ಏಡು ಕಯ್ಗಳ ಎತ್ಗಂಡು
ಕುಣೀತಾ ಕುಣೀತ
ಸಮ್ಮತಿ ಸಮ್ಮತಿ ಅಂತ
ಆ ದೊಡ್ಡಮನುಸಗಳು
ತಮ್ಮ ದೊಡ್ತನಾನೂ ಮರ್ತು ಕಿರುಚ್ತಾ ಇರಲು
ಆ ಜಮಾಧಾರಿ ಏಡು ಕಯ್ನು ಮೇಲೆತ್ತಿ ಆಡುಸ್ತ
ಆ ಎದ್ದ ಸದ್ದು ನಿಲ್ಸಿ
ಆಮ್ಯಾಲ ಮೊದಲ ಸ್ಟಯಲ್‌ನಿಂದ–
ಇದ್ನೋಡಿ ಇದು ಸಾವಿರ ರೂಪಾಯ್ಗು ಸಿಗುಲಾರ್ದಂಥ ಮಂಚ
ಈ ಮಂಚ್ಕ ಬ್ಯಾರೆ ದೇಸ್ದ ರಾಜರುಗಳು ಮನಸ್‌ಮಾಡಿ
ಎಸ್ಟೆಸ್ಟೋ ಯುದ್ಧಗಳೇ ನಡೆದು ಹೋದ್ವು.
ಈಗ ಅದ್ನೆಲ್ಲ ಕಟ್ಗಂಡು ನಮಗ್ಯಾಕಕನ
ಈಗ ಇದ್ಕ ಜೀ ಹುಜೂರ್ ಸವಾಲ್
ಬರೇ ನೂರ್ ರೂಪಾಯ್! ಬರೇ ನೂರೂಪಾಯ್
ಎಂದನು ನೆಗ್ತಾ!

ಅದ್ಯಾನ ಅವ್ನ ಹೆಸ್ರು...
ಯಾಡೇ ಗೌಡ್ನಲ್ವ?
ಆಗ ಅವ್ನು ಜಮಾಧಾರಿ ಕಾಲ್ಗ ತನ್ನೇಡೂ ಕಯ್ಯನು ಮುಟ್ಸಿ
ಸರಣು ಮಾಡಿ
ಆಮ್ಯಾಲ ಚೌಕಹಾಸಿ

ಸಮಸ್ತರಿಗೆಲ್ಲ ಅಡ್ಡಬಿದ್ದು ಎದ್ದವನಾಗಿ
ಆ ಕಯ್ಯ ಜೋಡ್ಸಿದವನಾಗಿ
ಒಂದೇ ದುಡದಲ್ಲಿ ನಿಂತು–
'ನೂರ್ ರುಪಾಯ್ಯ ಒಂದು ಲೋಟೂ
ಮ್ಯಾಲ ನಾಕಾಣಿ' ಅಂದನು ಯಾಡೇಗೌಡ.
ಆ ಮಾತ್ಗ ಆ ಮಾಜನವೂ ಆ ಜಮಾಧಾರಿಯೂ
ನಗ್ತ ಇನ್ನೂ ಬಿದ್ದೂ ಬಿದ್ದು.
ಆ ನಗೂವೆಲ್ಲ ಅದೆಸ್ಟೊ ಗಂಟೆಗಂಟ ನಡುದು
ಅದು ನಿಂತ ಮ್ಯಾಲ
ಆ ಜಮಾಧಾರಿ ಯಾಡೇಗೌಡ್ನ ಮುಂದಕ ಕೈನೀಡಿ
ಅದನೂ ಕುಣೀಸ್ತ–'ನಾಕಾಣಿ ನಾ ಹಾಕತ್ತೀನಿ,
ತತ್ತಮಂತ ನೂರ್ ರೂಪಾಯ್ನ ಒಂದ್ ಲೋಟಾ'
ಅಂದನು.
ಆಗ ಯಾಡೇಗೌಡನು ಜೋಡ್ಸಿದ್ದ ಕಯ್ಲೆ
ಜಮಾಧಾರಿಗ ಮುಗುದು 'ಬ್ಯಾಡಿಕಾ ನನ್ ಸೋಮಿ
ನಿಮ್ ಕೈಲಿ ನಾಕಾಣಿ ಹಾಕ್ಸದ್ರ ಈ ಜನ ಒಪ್ಪಿದಾ?
ಈ ಜನ ಒಪ್ಪೂದ್ರು ಆ ಸಿವ ಮೆಚ್ಚೇನಾ?' ಅಂತ ಅನ್ತ
ತನ್ನ ಚೊಗ್ವ ಎತ್ತಿ ಬಲಚೋರಿದು ಚಡ್ಡಿ ನವಾರ್ವ
ಹದವಾಗಿ ಹಿಚುಕ್ತಲೆ
ಒಂದಾದ ಮೇಲೊಂದು
ನೂರ್ ರೂಪಾಯ್ನ ನೋಟುಗಳು ಏಡುಕಡೀತ್ಲೆ
ಅವ ಹಿಚುಕೋದ ನಿಲ್ಸಲು
ಆಗ ತಲ್ವ ಕುಣುಸ್ತ ಬತ್ತಿದ್ದ ನೋಟುಗಳು ಅಲ್ಲುಗ ನಿಲ್ಲಲು
ಆ ಏಡುನೋಟ್ನುವ ಯಾಡೇಗೌಡ ಭಕುತೀಲಿ
ಹಾಸಿದ್ದ ಚೌಕದ ಮ್ಯಾಲ ಇಟ್ಟು
ಕಯ್ಯ ಮುಗುದು–
'ಹಿಂದ್ಕ ತೊಂಬತ್ತೊಂಬತ್ತು ಮುಕ್ಕಾಲ್ ರೂಪಾಯ್ನ
ದಯಪಾಲ್ಸಿ ನನ್ನೊಡೆಯಾ' ಅಂದನು,
ಜೋಡ್ಸಿದ್ದ ಕಯ್ಯ ಜೋಡ್ಸಿ.

ಆ ಜನಕೂ ಬೆರುಗಾಗಿ ಬುಟ್‌ಬಾಯ ಬುಟ್ಕಂಡು ನಿಂತಿರಲು,
ಆ ನೋಟಿನ ಮ್ಯಾಗಲ ಕೂರನತ್ತುಗಳು
ಸಂಸಾರ ಸಮೇತವಾಗಿ ಬಂದು ಅರ್ಮನ ನೋಡ್ತಿರವು.
ಆಗಲೀಗ ನನ್ನ ಎದೆಯಾಗಿದ್ದ ಎದೆಯಲ್ಲ
ದಗ್ ಅಂದೋಯ್ತು

ಅದಾಯ್ತ? ಅಲ್ಲುಗ ನನ್ನ ಋಣ ಅನ್ನೋದು ತೀರ್ತ?
ತೀರ್ತು. ಆಯ್ತು.
ಆದ್ರೀಗ ಅಣ್ಣಯ್ಯಾ,
ನೀವ್ಯಾನಾರೂ ಅಂದ್ಕಳ್ಳಿ ಬೇಕಾರ
ಆ ಹನ್ನೇಡ್ ಜನ ಜಟ್ಟಿಗಳೂವಿ
ನನ್ ಹೊತ್ಗಬಂದು
ಬಸ್ಸಿನ ಮ್ಯಾಲ ಪರಾಣ್ವ ಕಂಡಂಗ ಜೋಪಾನ್ವಾಗಿ ಮಲುಗಿಸಿದ್ರಲ್ಲಾ
ನೀವ್ಯಾನಾರೂ ಅಂದ್ಕಳ್ಳೀ–
ಆ ಬಸ್‌ನ ಉದ್ದ ಅಗಲವಿಯ
ನಂಗ ಸಾಲ್ದು ಅನ್ಸಂಗಿರದೂ.
ಆ ಬಸ್ಸೂವೀ ನನ್ನ ಮುಟ್ಟುಸ್ಕಂಡುದಕ
ಅದೆಸ್ಟು ಆನಂದ್ವ ಪಡ್ತೊ ಐಭೋಗ ಪಡ್ತೊ
ನಿಧಾನವಾಗಿ ಮೂಡ್ಲ ದಿಕ್ಕುಗ ಪಯಣ ಬೆಳೂಸ್ತು.
ಬಸ್ಸು ಪಟ್ಟಣ್ವ ಬುಟ್ಟಾಗಲಾರೂ
ನೀವು ಯಾನಾರೂ ಅಂದ್ಕಂಡರೂ ಸರಿಯಾ,
ನಾ... ತಿರ್ಗ್ಗಿ ನೋಡ್ಲಿಲ್ಲ
ಅದೆಸ್ಟು ನಿಜ್ವೊ ಅದೆಸ್ಟು ಸುಳ್ಳೋ
ನಾ ಬ್ಯಾರಿ ಕಾಣೀ...
ಅದು ಸುಳ್ಳಾಗಿದ್ದರ ಇಂದಾರೂ ನಿಜುವಾಗ್ಲಿ
ಇತ್ತಗ ನಾ ಆ ಪಟ್ಟಣುವ ಬುಟ್ಟಾಕ್ಷಣ
ಅತ್ತಗ ಆ ಅರ್ಮನೆಯಾಗಿದ್ದ ಅರ್ಮನವೆಲ್ಲ
ದಗ್‌ನ ಅಂತ್ಗಂಡು ದಿಗ್‌ನ ಉರ್ದೋಯ್ತು.

ಆದ್ರ ಅಣ್ಣಯ್ಯಾ
ನನ್ನುನ್ನ ಬಸ್ಸಿಂದ ಜೋಪಾನ್ವಾಗಿ ಇಳಿಸ್ಕಂಡೂ
ಆ ಜೋಪಾನ್ವಾಗಿ ಮೇಲ್ಬಿದ್ದು ಹೊತ್ಗಬಂದವರು
ಉಗಿಯೋಕು ಮನಸ್ಸಾಗದೂ
ಅಂಥ ಫಕಾಳಿಯಾಗಿ ನಿಂತಿದ್ದ
ಒಂದು ಜೋಪಡಿ ಮುಂದ್ಗಡ
ಜೋಪಾನ್ವಾಗಿ ಇಳುಸುದ್ರು ನೋಡೀ
ಆಗಲೀಗ
ನನ್ನ ಜೀವ ಇದ್ದುದು ಅತ್ತಗ ಜರ್‍ರಂತ ಜರೀಕತ್ತು.
ನಾನು ಅರ್‍ಮನ ಸುಖ ಕಂಡೋಳೂ
ನಂಗ ಅರ್‍ಮನಿಯ ಆಗ್‌ಬೇಕೂ...
ಅದಿಲ್ಲದಿದ್ದರ ನಂಗ ನಿದ್ದಾವು ಬರಲ್ಲ
ಅಂತ್ಯಾನ ಕೇಳ್‌ಲಿಲ್ಲಾ ನಾನೂ
ಆದರೆ, ನಾನು ಕಾಲು ನೀಟ್ಕಂಡು ಇರೋ ಅಸ್ಟಾದ್ರುವ
ಇರಾಕ ತಾವು ಇರಬೇಕೋ ಇರಬಾರ್‍ದೋ?
ಆ ಜೋಪ್ಡಿ ನನ್ನಸ್ಟು ಉದ್ದ ನನ್ನಸ್ಟು ಅಗಲ ಇತ್ತೋ
ಇರ್‍ನೆ ಇಲ್ವೊ ಅನ್ನಂಗಿತ್ತಲ್ಲಾ...
ಅವರೇನ ಮನುಸ್ರ? ಮರ್‍ಗಳಾ?

ಕೇಳೀ...
ಆಮೇಲಂತು ಆ ಚಳಿ ಏನೂ ಆ ಮಳ ಏನು
ಆಮ್ಯಾಕ ಆ ಬಿಸಲೂ ಅನ್ನೋದು ಏನೂ?!
ಒಂದಾ ಎರಡಾ? ನಾ ಪಟ್ಟಪಾಡು
ಆ ಸೀತದೇವಿಗು ಬಂದಿತ್ತೊ ಬಂದೇ ಇರ್‍ನಿಲ್ವೋ...
ನಾನು ಈ ಚಿಕ್ಕೊಯ್ಸಿಗಿಯ ಕೇಳೀ...
ಕೇಳೋ ನಿಮ್ಗಿಯ ಇಸ್ಟೊಂದು ದುಕ್ಕ ಆಗ್ತಿರಬೇಕಾರ
ಇನ್ನೂ..." ಎಂದು ಮಂಚ ದುಕ್ಕಳುಸ್ತ
ಅಳಲಾರಂಬಿಸಿದಾಗ
ಆಲಿಸುತಲಿದ್ದ ಜೀವಾತ್ಮಗ, ಇದೆಲ್ಲಿ ಮೊದ್ಲುನ ಥರ್‍ವಾಗಿ

ಇಲ್ಲಿಗಿಯಾ ನಿಲ್ಸಿಬುಡುತ್ತೊ ಅಂತ ದುಗುಡವಾಗಿ
ಆ ದುಕ್ಕಳಿಸೊ ಮಂಚದ ತಲವ ಸವೂರ್ತ–
“ಅಯ್ಯೋ ನಾವು ಬೇಜಾರು ಅಂತ
ಅನ್ನನೀರು ಬುಟ್‌ಬುಟ್ಟು
ಅಳ್ತ ಕೂತ್ಗಂಡರ
ನಾವ್ ತಕ್ಕಂದು ಬಂದಿರೋದು ಕಳ್ದುವೋದ್ದೇ?
ಮುಂದಲದ ಹೇಳೂ...” ಅಂತು.

ಜೀವಾತ್ಮನು ತಲ ಸವುರುತಿರಲು
ಉಕ್ಕೊ ದುಕ್ಕಕ ಸಮಾಧಾನವೂ ಆಗಿ
ಆಗ ಮಂಚವು–
“ಅಣ್ಣಯ್ಯಾ, ನಾನೂವಿ ನಿಚ್ಚಯಸಿಕಂಡೀ ಅನ್ನಿ...
ಆದ್ರ ಕಾಲ್ಗುಣ ಅನ್ನದ್ಕ ಹೇಳ್ತೀನಿ ಕೇಳೀ...
ನಾ ಬಂದ ಮ್ಯಾಲ ಇಲ್ಲುಗ ರಾತ್‌ರಾತ್ರನಗ
ಅದ್ಯಾರಕನಿ ಮೂರ್ಜನವು
ಅವರ ಮಾತು ನಮ್ಗ ತಿಳೀದೂ
ನಂಮಾತು ಅವರ್ಗ ತಿಳೀದೂ
ಒಬ್ಬ ಮದ್ರಾಸ್‌ನವ, ಒಬ್ಬ ತೆಲುಗನವನಂತಾ
ಇನ್ನೊಬ್ಬ ಮಲೆಯಾಳದವನಂತಾ!
ಇವುರು ಬರಾಕ ಹೋಗಾಕ ಸುರುವಾದ್ರು.
ಆ ಮೂರ್ಜನುವಿ ಖೋಟನೋಟ್ನವರಂತಾ...
ಅವ್ರು ರೂಪಾಯ್ನ ನೋಟ ಗೋಣಿ ಚೀಲ್ದಲಿಯ ತುಂಬೋರು...
ಅಂಥವರು!
ಅಂಥ್ಯವರಿಯ ಒಂಜಿನ ರಾತ್ರನಾಗ
ಮಾತ್‌ಮಾತ್ಗ ‘ಈ ಮಂಚ್ವ ನಮ್ಗ ಕೊಡ್ರೀ ಗೌಂಡರೇ’
ಅಂದರು.

ಯಾಡೇಗೌಡ– ‘ಅಯ್ಯಯ್ಯೋ ನನ್ನ ಪರಾಣ ಇರೋದು
ಈ ಮಂಚದಲ್ಲಿಯ...’

ಅಂತ ನನ್ ತಂದಂಥ ಬಗೆಯು ಇನ್ನೊಂದ್ಸಲವಾಗಲು ಆಗಲೀಗ,

ಅದ್ಯಾರಕನಿ, ಹಿಂದ್ಕ, ಒಬ್ಬ ಮಾತ್ಮಗಾಂದಿ ಅನ್ನವ ಇದ್ನಂತಲ್ಲಾ...
ಆ ಚೋಟುದ್ದದವ ಕೊಡೋ ಕಿರುಕುಳಾನ
ಆ ಪರಂಗಿಯವರ್ಗೇನಿಯ ತಡಕಳಾಕ ಬಲುಕಸ್ಟವಾಗಿ
ಆಗ ಆ ಪರಂಗಿಯವರು
ಈ ಚೊಟುದ್ದದವ್ನ ಹಿಡುದೂ ಹಿಡ್ದು
ಜೈಲಂತ  ಸೊಳ್ಳಮನ್ವಂತ ಅಂತ ಕೂಡಾಕಿ ಕೂಡಾಕಿ
ಯಾರ್ಕೈಲು ತಗಯಾಕ ಆಗಬಾರ್ದು...
ಅಂಥಾ ಬೀಗ್ವ ಹಾಕರಂತ.
ಆದ್ರೂನೂವ ಈ ನಮ್ ಚೋಟುದ್ದದ ಗಾಂದಿ ಅಂಬವ
ಅದ್ಯಾವ ಮಾಯ್ದಲ್ಲೊ
ಆ ಕಡ ಕೂಡಾಕದ್ರ
ಈ ಕಡ ತಪ್ಪಸ್ಕಂಡು
ನೆಗ್ತ ನೆಗ್ತ
ಟೋಪಿ ಸರಿಮಾಡ್ಕಳ್ತ ಬರ್ತಾ  ಇದ್ನಂತಲ್ಲಾ
ಆ ಮಾತ್ಮಾಗಾಂದೀ!
ಆ ಮಾತ್ಮಗಾಂದಿಯೇ ಸಾಕ್ಷತ್ತಾಗಿ ಬಂದು ನಿಂತು
'ಅಡ್ಯೆ ಮಕ್ಕಳಾ...
ಯಾನ್ರುಡ ನಿಮ್ಗ ಬೇಕಾಗಿರ ವರವು...' ಅಂತ
ಕೇಳ್ದಂಗಾಯ್ತು ಈ ಮೂರ್ಜನಕುವ.
ಆಗ ಆ ಮೂರ್ಜನುವ 'ನಮ್ ಗುಂಪ್ಗ ಸೇರ್ಕ ಮಾಸೋಮಿ'
ಅಂತ ಯಾಡೇಗೌಡನ ಕಾಲುಗ ಬಿದ್ದರು.

ಯಾವಾಗ ಆ ಮೂರ್ಜನುವ
ಯಾಡೇಗೌಡ್ನ ಕಾಲ್ಗ ಬಿದ್ದರೂ ನೋಡು...
ಆ ಗಳುಗಾಲಿಯ,
ನಾನು ಅರ್ಮನಲಿದ್ದಾಗ ನನ್ ಸಿನೇತಗಾರಳೂ...
ಅದೇ ನಾವ್ನಾವ್ಗಳು ಸೇರ್ಕಂಡಾಗ

ನೆಗ್ತ ನೆಗ್ತ ಗೇಲಿ ಮಾಡ್ಕಳ್ತ ಸಂತೋಸವಾಗಿದ್ದವೆಲ್ಲಾ...
ಆ ಲಕ್ಷಿಮಿ ಅಂಬೋಳು
ನನಗಾಗಿ ದೇಸ್ ದೇಸನೆಲ್ಲಾ ಸುತ್ತಾಡಿ ಸುಣ್ಣವಾಗಿ
ಕೊನಗ ಪತ್ತ ಮಾಡ್ಕಂಡು ಇಲ್ಲುಗ ಬಂದು
ಬಂದವಳೆ ನನ್ನ ಕಾಲ್ಗಳ ತಬ್ಕಂಡು
ಗೋಳೋ ಅಂತ ಅಳ್ತಾ–
'ಇನ್ನೊಂದ್ಸಲ ನನ್ನ ಕೈಬುಡಬೇಡಿಕನ್ನೀ ಅಕ್ಕಯ್ಯನೋರೇ'
ಅಂತ ಗೋಗರಿತ ದುಕ್ಕ ಮಾಡಿದಳು.
ನಾನು ಅವಳ ಕಣ್ಣೀರ್ ತೊಡ್ದು
ಆ ತಲ ಸವುರ್ತಾ ಸಮಾಧಾನ ಮಾಡಿ
'ಬುಡಾದು ಕಟ್‌ಗಳಾದು ನಮ್‌ನಮ್ ಕೈಲಿ
ಎಲ್ಲಿದ್ದದು ತಂಗ್ಯವ್ವಾ?
ನಾವು ಇಸ್ಟುಜಿನಗಂಟ ಬ್ಯಾರ್‌ಬೇರೆ ಇರ್ಬೇಕು ಅಂತ ತಂದಿದ್ದೋ
ಅದ್ಕಾಗಿ ಇದ್ದೊ ಹೊರ್ತು
ಅದರಲ್ಲಿ ನಂದೇನು ಇದ್ದೂದು?
ನಿಂದೇನು ಇದ್ದೂದು?'
ಅಂತೆಲ್ಲ ಅವಳ ದುಕ್ಕ ಇಂಗಿಸಾಕ ನನಗಾದ ಆ ಸುಸ್ತೊ.

ಈ ಸುಸ್ತಾ. ಈ ಸುಸ್ತನಮ್ಯಾಗ
ಆ ಖೋಟ ನೋಟ್ನವರು
ಮೊದ್ಲು ನಂಬ್ಸಾಕ ಎರುಚೋ
ನಿಜವಾದ ನೋಟಿನ ಚೀಲ್ಗಳ ತಂದೂ
ಆ ಭಾರ ಬೇರೆ ಬಂದು ನನ್ಮೇಲಿಯ ಬಿತ್ತು.
ಆ ಗೋಣೀ ಚೀಲ್ದಲಿ
ಜನಾನೇ ಕೊಂಡ್ಕಳೊ ನೊಟ್ನಕಂತೆಗಳು ತುಂಬಿರದು ಅಂತ
ಯಾರ್‌ತಾನಿಯ ಅಂದ್ಕಂಡರೂ?
ಆ ರಾತ್ರ ಆ ರೂಪಾಯ್ನ ಚೀಲ್ಗಳಾ
ಈ ಯಾಡೇಗೌಡ ಮಾಯಮಾಡಿ
ನನ್ನಡಿಲಿ ಅವುತ್ಗಂಡು

ಉಸುರಬುಡದೆ
ನನ್ನೊಳಗ ಮಾಯವಾಗಿರಬೇಕಾರ
ಆ ಮೂರ್ಜನವು
ಸಮರಾತ್ರಲಿ ಪಿಸುಗುಟ್ಕಂಡು
'ಯಾಡೇಗೌಂಡ್ರೇ' ಅಂತ ಬಂದರು.

ಬಂದು ಒಳಗ್ ನೋಡ್ತಾರೇ
ಒಳಗ ಅಕ್ಕಮಾದೇವಮ್ಮ
ಅವುಳ ಕೂದ್ಲಾಗಿದ್ದ ಕೂದ್ಲುನೆಲ್ಲ ಹಾರಾಡುಸ್ತ
ಸ್ಯಾಲರವ್ಕವ ಹರ್ಕಂಡೂ
ಎದಮ್ಯಾಗಲ ಸೆರುಗ ಚಲ್ಕಂಡೂ
ಕಣ್ಗಳಲಿ ಕಣ್ಣೀರು ಕೋಡಿ ಹರಿಸೂತ
ಆ ಮೂರ್ಜನನುವ ಕಂಡೇಟ್ಗಿಯ
ಹೊಟ್ಟಬಾಯ ಸದ್ದಿಲ್ಲದೆ ಬಡ್ಕಳತ–
'ಅಯ್ಯೊ ನಂಗ ಇದ್ದ ಒಬ್ ಕಂದುನ್ನ ಕೊಂದ್ರೆಲ್ಲಪ್ಪಾ...
ಪೋಲಿಸ್ ಬಂದು ತುಂಬ್ಕಂಡು ಹೋಯ್ತಲ್ಲಪ್ಪಾ
ನೀವ್‌ಗಳು ರಾತ್‌ರಾತ್ರನಗ ಬರೋದು ನೋಡಿಯಾ
ನಿಮ್ಮಗಳ ದಯ್ಯದವರೊ ಯಮ್ದವರೋ ಅಂದ್ಕಂಡ್ಡಿದ್ದೀ
ಅದ ನಿಜ ಮಾಡಿದ್ರೆಲ್ಲಾ
ಅಯ್ಯೋ ನಿಮ್ಗ ಈ ನನ್ನ ಕಯ್ಯಾರ ಅನ್ನ ಇಕ್ಕಿದ್ದೀ...
ನನ್ನ ಮನಲೇನ ಅನ್ನ ಕುಣೀತಿತ್ತಾ?
ಅಯ್ಯೊ ನಿಮ್ ಮನೆ ದಗ್‌ನ ಅತ್ಗಂಡು
ದಿಗ್‌ನ ಉರ್ದ್ದೋಗ.
ನಿಮ್ ಹೆಡ್ತೀರು ಮುಂಡ್ಯಾಗ
ಅಯ್ಯೋ ನಿಮ್‌ನಿಗ ತಿರ್ಗಾ ನೋಡ್ದಿರಗಾಗ
ಅಯ್ಯೋ...' ಅಂತ
ಅವಳ ಬಾಯಿಂದ ಇನ್ನೊಂದು ವಾಕ್ಯ
ಬರುವುದರ ಒಳಗಾಗಿ

ಅವರು ತಿರುಗ ನೋಡ್ದೆ ಇರಾಗ ಆದರು.
ಆಗಲೀಗ ನನ್ನೊಳಗ ಮಾಯವಾಗಿದ್ದ
ಯಾಡೇಗೌಡ
ಕಂಕುಳಲ್ಲಿ ಕಯ್ಯಲ್ಲಿ ಆ ರೂಪಾಯ್ನ ಚೀಲ್ಗಳ ತಬ್ಕಂಡು
ನಗುವಾಗಿ ತಾ ಬಂದನು.

ಆಮ್ಯಾಕೀಗ ನೋಡಪ್ಪ
ಈಗ ನೀ ಇರೊ ಈ ದೊಡ್ಡ್ ಹಟ್ಯ
ಅದ್ನೂವಿ ನನ್ನ ಆಯ ಅಳ್ತ ನೋಡ್ಕಂಡೂ
ಅದುಕ ತಕ್ಕ ಥರ್ವಾಗಿ..."
ಅಂತ ಅನ್ನೋದಕ್ಕೂ
ಕೋಳಿ ಕೂಗೋದಕ್ಕೂ ಸರಿಯಾಯ್ತು.
ಹೇಳುತ್ತಿದ್ದ ಮಂಚ ಮಲಿಕತ್ತು,
ಕೇಳುತ್ತಿದ್ದ ಜೀವಾತ್ಮ ಸಂತೋಸವಾಗಿ ಹೋಗಿ
ಸೋಮಪ್ಪರ ದೇಹಕ ಸೇರ್ಕಂಡಿತು.

* * * *

## ೯ ಆಮ್ಯಾಲ ಬರಿಬೆಳುಗಲ್ಲೋ ಬೆಳುಕಾಗಿ

ಆಮ್ಯಾಲ ಬರಿಬೆಳುಗಲ್ಲೋ ಬೆಳುಕಾಗಿ
ಪರ್ಲಾದನು ಕಣ್ಣುಬುಡಲು
ಆಗ ಬಸಪ್ಪಸೋಮಿ ಸಿದ್ದೂರ ತಾತದೀರ ಹಟ್ಟೀ
ಈಗ ದನಕಟ್ಟೋ ಕೊಟ್ಟಗ,
ಅಲ್ಲಿ ಹೋರ‍್ಗಳ ತೊಳದು
ಕಿಚ್ಚು ಹಾಯಿಸೊ ಹಬ್ಬಕ್ಕಾಗಿ ಸಿಂಗರಿಸಲು
ಅಣ್ಣದೀರು ಹೊರಡುತ್ತಿದ್ದರು.
ತಮ್ಮ ಪರ್ಲಾದನು ಬುಡದೆ ತಾನೂ ನಿಂತನು.
ಒಬ್ಬ ಕಡ್ಡಾದವ
ಅವ್ವ ಮಲ್ಲಾಜವ್ಮಗ,
“ಅವ್ವೆ ಈ ಪರ್ಲಾದನ ಹಿಡ್ಕಾ ಅತ್ತಗ
ಕೊಟ್ಟಗಲಿ ಹೋರಿ ಬಾಲ ಹಿಡ್ಕಂಡು
ಉಯ್ಯಾಲ ಆಡ್ತದ ಮೂದೇವಿ” ಅಂದನು.

ಮಲ್ಲಾಜಮ್ಮನು
ಸಾಕ್ಷಾತ್ ಅಕ್ಕಮಾದೇವಮ್ಮನ ರೂಪ್ಪ ಹೊತ್ಗಂಡು ಹುಟ್ಟೀ
ಈ ಹಟ್ಟೀ ಸೇರ‍್ದವಳೂ
ಈಗ ಚಂಡಿ ಹಿಡ್ದಿರೋ ಕಿರಿಮಗನ
ಕಯ್ ಬಾಯ್ಗ ಬೆಲ್ಲ ಸಕ್ಕರವ ತುಂಬಿ ಮರೆಸಿದಳು.
ಹಿಂದ್ಕ ಅಕ್ಕಮಾದೇವಮ್ಮನು ಧರುಸ್ತಿದ್ದ
ಗೇಣುದ್ದದ ಕರಡ್ಗನಿಗ
ಮಲ್ಲಾಜಮ್ಮನು ಧರುಸಿದ್ದಕ್ಕೂ ಅದ್ಕೂವೀ
ಹಿಂದ್ಕ ಅಕ್ಕಮಾದೇವಮ್ಮನ ಗಲ್ಲದ ಕಾರೆಳ್ಳುವಿ

ಮಲ್ಲಾಜಮ್ಮಗು ಹಾಗೆ ಅಲ್ಲೆ ಇರೋದಕ್ಕು ಅದ್ಕೂವೀ
ಹಿಂದ್ಕ ಅಕ್ಕಮಾದೇವಮ್ಮನ ಕಂಡ ಪಳಯುಳಿಕೆಗಳು
ಈಗ ಮಲ್ಲಾಜಮ್ಮಗ
'ಆಗ ಅಕ್ಕಮಾದೇವಮ್ಮನು ಪಟ್ಟ ಕಸ್ಟಕ
ಈಗ ಸುಖ ಉಣ್ಣಕ ಅಂತ ಇನ್ನೊಂದ್ಸಲ ಹುಟ್ಟಿ
ತನ್ನ ಹಟ್ಗಿಯ ಸೇರ್ಕಂಡವಳ'– ಅಂತಿದ್ದರು.

ಈ ಮಲ್ಲಾಜಮ್ಮ
ಆಗ ಬೆರುಳು ಚೀಪೋ ಕೂಸೂ ಅದ ಯಾರೋ ಅನ್ನಾಯಕಾತಿ ಹೆತ್ತು
ತಾನ್ ಮಾಯ್ವಾಗಿ ಕೂಸ ಆಸ್ಪತ್ರಾಲಿ ಎಸ್ದೂ
ಆ ನಗಾಡೋ ಕಂದನ ಚಂದ್ವ
ಮಕ್ಕಳಫಲ ಕಾಣದ ಸ್ಥಿತಿವಂತರು ಕಂಡು
ಅದುಕ ಸೋತು
ಅದ ತಂದು
ಸುದ್ದ ಮಾಡ್ಕಂಡು
ಲಿಂಗಧಾರಣ್ವ ಮಾಡ್ಸಿ
ಮಲ್ಲಾಜಮ್ಮನೆಂದು ಹೆಸುರಾಗಿ ಬೆಳೆದೂ
ಆ ಬೆಳೆದಂಥ ಮಲ್ಲಾಜಮ್ಮಗ ಕಂಡಂಥ ಯಾಡೇಗೌಡರಿಗ
ನೆಗ್ತ ಸತ್ತ ತನ್ನ ತಾಯಿ ಕಂಡಂತಾಗಿ
ಅವಳು ತನ್ನಾಗಿ ಪಟ್ಟಂಥ ವನವಾಸವು ಕಣ್ಮುಂದ ಬಂದು
ಮಗ ಸೋಮಪ್ಪಗ ಮಲ್ಲಾಜಮ್ಮನ ತಂದ್ಕಂಡು
ಏಡೂದಿಕ್ಲ ಆಸ್ತಿಗಳ ಕಸಿ ಮಾಡಿ
ಮತ್ತೂ ಏಳ್ಗ ಹೊಂದಿದವರಾಗಿ
ನಗ್ತ ತಾವೂ ನಿಧನರಾಗಿದ್ದರು.

ಸಕ್ಕರ ಬೆಲ್ಲಾವ ತಿಂದೂ
ಉಳುಕಾವ ತುಟಿಮೂಗು ಕಯ್ಗ ಮೆತ್ಗಂಡಿದ್ದ ಪರ್ಸಾದನು
ಅವ್ವ ತಂದು ಕುಡಿಸಿದ ಹಾಲ ಅರ್ಧವ ತಾನ್ ಕುಡ್ದೂ
ಇನ್ನರ್ಧವ ಭೂಮತಾಯ್ಗ ಕುಡಿಸೀ

ಆಮ್ಯಾಲ
ನೆನ್ನೆ ದಿನ ಸ್ಯಾಲ ತುಂಬ್ಕಂಡು ಬಂದಿದ್ದ ಲಾರಿ ತಾನಾಗಿ
ಕೈಗಳ ಗಾಳಿಗಿರ್ಕನ ಥರ್ವಾಗಿ ಆಡುಸ್ತ
ಬಾಯಲಿ ಜುಯ್ ಮಾಡ್ತ
ಪೆಟ್ರೋಲ್ ಜೊಲ್ಲ ಸುರುಸ್ತಾ
ಇಸ್ಟಾರ್ಟ್ ಆದನು.

... ಆ ಇಸ್ಟಾರ್ಟ್ ಆದ ಲಾರಿ ಎಲ್ಲುಗ್ ಬಂತು?
ಇಸ್ಟಾರ್ಟ್ ಆದ ಲಾರಿ ಸ್ಯಾಲಗುಡ್ಡಕ ಬಂತು
ಸ್ಯಾಲಗುಡ್ಡಕ ಬಂದ ಲಾರಿ ಏನ್ ಮಾಡ್ತು?
ಆ ಸ್ಯಾಲಗಳ ಬೆನ್ನುಗ ತುಂಬ್ಕತ್ತು
ಆ ತುಂಬ್ಕಂಡ್ ಲಾರಿ ಎಲ್ಲುಗ್ ಹೊರಡ್ತು?
ಎಲ್ಲಾ ಕಂಬ್ಗಳ ಮುಂದ್ ಮುಂದುಕ ಬಂತು
ಆ ಕಂಬಕ ಬಂದು ಲಾರಿ ಕಂಬ್ಕ ಏನ್ ಕೊಡ್ತು?
ಸ್ಯಾಲನಿಗ ಉಟ್ಟುಗ ಉಟ್ಗ ಅಂತ್ ಕೊಡ್ತು...

ಈ ಆಟವೂ ಮುಗುದು
ಪರ್ಸಾದನು ಲಾರಿಯಾಗೇ ಹೊರಬಂದೂ
ದಿನಾ ಕಾಣ್ವ ಮರ ಕಾಣ್ತಲೆ–
ಲಾರಿ ರೂಪ್ವ ಬುಟ್ಟವನಾಗಿ
ತನ್ನ ನಿಜ ರೂಪ್ವ ತಳ್ದು
ಜಗುಲಿಮ್ಯಾಲ ಕೂತು
ಪರ್ಸಾದನು ಜಗಲಿ ಕೆಳಾಕ ಕಾಲ್ಗಳ
ಇಳಿಬುಟ್ಟಾಡುಸ್ತ ಆಡುಸ್ತಾ
ಮರ್ವ ನೋಡ್ತಾ ನೋಡ್ತ
ಜೊಲ್ಲು ಸುರುಸ್ತಾ ಸುರುಸ್ತ
ಆ ಮರ್ದಲ್ಲಾಗ ಕೂಸು ಆಡೋದು ಕಾಣ್ತು.
ಪರ್ಸಾದ ನಗುವಾಗಿ
“ಅವ್ವೆ ಅವ್ವೆ...

ಮರ್ದ ಮ್ಯಾಲ ಕೂಸು ನೆಗ್ತ ಕಾಕಾಕ್ತ ಆಡ್ತಾ ಅದ
ನೋಡೂ ಬಾ ನೋಡು ಬಾ ..." ಅಂತಿರಲು

ಬಾರದಿದ್ದರೂ ಯಾರೂ
ಅವ ಅಂತಿರಲು,
ನಡೆದಾಡುತ್ತಿದ್ದ ಜನವು
ಅವನ ಮಾತುಗ ನಗ್ತಲೋ ಸಂಕ್ಟದಲೋ
ಅವರವರಗ ತಿಳಿದ ರೀತೀಲೀ...

* * * *

## ೧೦ ಅವರವರುಗ ತಿಳಿದ ರೀತೀಲಿ ನಡೆಯೂತಲಿರುವಾಗ

ಅವರವರುಗ ತಿಳಿದ ರೀತೀಲಿ ನಡೆಯೂತಲಿರುವಾಗ
ಮಠದ ಒಂದ್ಕಡ ಪಡಸಾಲ ಮ್ಯಾಲ
ರೌಂಡತಗ ಕೂತವರು
ಈ ಪರ್ಪಂಚವ ಮರ್ತು ಇಸ್ಪೀಟು ಆಡ್ತಾ
ಆ ಇಸ್ಪೀಟಿನ ಎಲ್ಗಳು ನಡ್ದತ್ತಾ
ಬೀಡಿಸಿಕರೋಟ್ನ ಹೊಗುವಿ
ಆ ಎಲ್ದ ಜೊತುಗ ಸುತ್ತೂ ಬಳಸುತ್ತಿತ್ತು.
ಆ ಆಡ್ತ ಕೂತಲ್ಲಿಗ
ಬೀಡಿಸಿಕರೋಟೂ
ಬೇಕಾದವರ್ಗ ವಡಟೀನೂವಿ
ಹಿಂದ್ಕ ಅಕ್ಕಮಾದೇವಮ್ಮ ನಡಸ್ತಿದ್ದಂಥ
ಹೋಟ್ಲು ಥರದ
ಹೋಟ್ಲಿಂದ ಬೇಕ್‌ಬೇಕಾದವರ್ಗ ಬೇಕ್‌ಬೇಕಾದ್ದು ಸಪ್ಲೆ ಆಗುತ್ತಿತ್ತು.
ಅಲ್ಲೆ ಸೋತು ಪಾಪರೆದ್ದೋದವ ಒಬ್ಬನು–
ರೇಡಿಯೋ ಪದ್ವ ಕಿವ್ಗ,
ಗೆದ್ದೂಗೆದ್ದೂ
ಚಿಲ್ಲರಾ ಅನ್ದಿಯಾ ನೋಟು ಅನ್ದಿಯಾ
ಗೋರಿ ಒಕ್ಕಡ ಗುಡ್ಡಾಕಿಕೊಂಡಿದ್ದವನ
ದುಡ್ಡಿನ ಗುಡ್ಡನಿಗ ಕಣ್ಣುಗ,
ಬೀಡಿಯ ಬಾಯ್ಗ
ಕೊಟ್ಟು ಕೂತಿದ್ದನು.

ಇನ್ನೊಂದ್ಕಡ ಇತ್ತಲ್ಲಾ
ಆ ಮಠದ ಪಡಸಾಲ್ದ ಮ್ಯಾಲೂ ಕೆಳೂಗು

ಒಂದು ತುಂಡುಗುಂಪಿನ ಗುಡ್ಡವು ಸುತ್ಗಂಡು ಲೀನವಾಗಿದ್ದು
ಆ ಕಾಯಕ ಏನು ಅಂಬುದು
ದೂರಕ್ಕೆ ಅರಿವಾಗದಂತಿತ್ತು.

ಹೀಗಿರ್ತ,
ನಂಜಲಗೂಡ್ಲ ದಿಕ್ಕಿಂದ ಹೊಲಾರ ಅಮಾಸನು
ಬಾಡ್ಗ ಸೈಕಲ್ನಲ್ಲಿ
ಅದರ ಹ್ಯಾಂಡಲ ಹಿಡ್ಕಳ್ದೇನೆ
ಕಯ್ಯ ಹಿಂದ್ಕೂ ಮುಂದ್ಕೂ ಬೀಸ್ತ
ಆ ಸೈಕಲ್ನೂ ನಲೀಸ್ತಾ
ತಾನೂ ನಲೀತಾ
ಊರ್ದಿಕ್ಕ ಬರುತ್ತಿದ್ದನು!

ಕುಟ್ಟೋ ತಮ್ಮಟ ಮುಂದ
ಕುಣೀತಾ ಬೆಳೆದ ಅಮಾಸನಿಗ
ಅವ್ನ ಸೈಕಲ್ನಲಿ ನೇತಾಡೊ ಗೋಣಿ ಚೀಲ್ದ ಸಾಮಾನನ್ನು
'ಯಾನುಡ ಅದು' ಅಂತ ಯಾರಾರು ಕೇಳುದ್ರ–
'ಐ ಚರ್ಮ್ಕನ್ನಿ ಬುದ್ಯೆ' ಅಂತಿದ್ದನಾದರೂ
ಅವು ಚರ್ಮವಾಗಿರದೆ
ಮುಟ್ಟಿನ ಸ್ಯಾಲವಾಗಿದ್ದವು.

ಮುಟ್ಟಿನ ಸ್ಯಾಲ ಸಂಪಾದನ ಕಾಯಕದ ಯಶಸ್ಸಿಗಾಗಿ
ಅಮಾಸನು ನೂರರವರ್ಗ ನಂಬರ್ ಕಲ್ತು
ಅದ ಜೋತಿಸಿಗಳ ಮಂತ್ರದ ಅಂಕಿಯಂತೆ ಬಳುಸ್ತಾ
ಊರಲ್ಲಿ ಯಾವಾವ ಹಟ್ಟಿಯಲ್ಲಿ
ಯಾವಾವ ಹೆಂಗಸು
ಯಾವಾವ ದಿನವು ಮುಟ್ಟಾಗುವಳು ಎಂಬುದರ
ಒಂದು ಕರಾರುವಾಕ್ಕಾದ ಪಂಚಾಂಗ್ವ ರಚುಸಿಕೊಂಡಿದ್ದನು.
ಮಾರಾಜರು ನಂಬೋ ಒಂಟಿಕೊಪ್ಪಲ್ ಪಂಚಾಂಗವು ಸುಳ್ಳಾದರೂ

ಅಮಾಸನ ಪಂಚಾಂಗವು
ಯಾರ್ದಾದರು ಪ್ರಕೃತಿ ಯತ್ವಾಸದಿಂದಾಗಿ
ಹೆಚ್ಚೆಂದರೆ ಒಂದ್‌ದಿನ ಹೆಚ್ಚೂಕಮ್ಮಿಯಾಗುತ್ತಿತ್ತೊ
ಪರಂತು ನಿಜವಾಗುತಾ

ಈ ನಿಜವ ಹಿಡ್ದು
ನಿದ್ದವು ತೂಕಡಿಸೋ ಕಾಲವ ಅರಿತವನಾದ ಅಮಾಸನು
ಆ ವ್ಯಾಳದಲಿ
ಅಗತ್ಯವಾದೆಡೆ ಚಣಮಾತ್ರದ ಭೇಟಿ ನೀಡಿ
ಸೂರಡಿ ಸಿಕ್ಕಿಸೊ ಮುಟ್ಟಿನ ಸ್ಯಾಲಗಳ ಮಾಯಮಾಡ್ತ
ಸಾಕಸ್ಟು ಸ್ಯಾಲಭಾಗ್ಯ ಪಡ್ದು
ನೇಮನಿಷ್ಠಗ ಹೆಸುರಾದ ಮ್ಯಾಗಲಕೇರಿ ಯಮ್ಕಗಳ್ಗ
ಇದು ಯಾತರ ಕೆಲ್ಸ ಅಂಬುದ ಅರುವಾಗಿಸದೆ
ದಿಕ್ಕೆಡಿಸಿದ್ದನು!

ಸ್ವಪ್ರತಿಭೆಯಿಂದ ಈ ಕಾಯಕ್ವ ಕಂಡುಹಿಡ್ದವನಾಗಿ
ಅದನು ನೇಮನಿಷ್ಠೇಲಿ ಆಚರಿಸುತಲಿದ್ದ ಅಮಾಸನು
ಮಾಲನ್ನು ಫ್ರೆಸ್ಸಾಗಿ ಬಿಕರಿ ಮಾಡಲು ಸಿಕ್ಕಿದಂದೇ
ನೇರ್ವಾಗಿ ನಂಜಲಗೂಡ ಹೊಳ ತಲುಪಿ
ಅಲ್ಲಿ ಅಗಸನ ಯಾಸದಲಿ ಮಾಲು ಹಸನುಮಾಡಿ
ಅಡ್ವಾನ್ಸ್ ಕೊಟ್ಟಿದ್ದ ಸಾಬರ್ಗ ನಿಯತ್ತಲಿ ಮಾರುತ್ತಿದ್ದನು.

ಅಮಾಸನ ಈ ಕಾಯಕವು
ಕೂಲಿಕೆಲ್ಸಕ್ಕಿಂತ ಹೆಚ್ಚು ಲಾಭದಾಯಕವಾಗಿಯೂ
ಅನಿಶ್ಚಯತೆ ಇಲ್ಲದ್ದಾಗಿಯೂ
ಹಾಗೂ ಯಾರ್ಗಾರು ಮುಟ್ಟುನಿಂತು
ಸಂಭವಿಸೋ ಲುಕ್ಸಾನಿಗ
ಪ್ರಕೃತಿಯು ಹೊಸ ಗಿರಾಕಿ ಕೂಡುಸ್ತ
ಅದು ಅಲ್ಲಲ್ಲಿಗ ಸಮನಾಗಿ

ಇದು ಅಮಾಸನ ಹೊಟ್ಟೆಬಟ್ಟೆ ಬೀಡಿ
ಸಿನುಮಾ ಸೈಕಲ್‌ಬಾಡ್ಗಗೂ ಆಗಿ
ಉಳುದುದು
ಇವನ ನೆಚ್ಚಿ ಮಾರಿಗುಡಿ ನೆಲಕ್ಕಂಟಿ
ಬಾಯ ಬುಟ್ಕಂಡಿದ್ದ ಕುರಿಯಯ್ಯಗ
ಗಂಜಿನೀರ ಕಾಣಿಸ್ತಿತ್ತು!

ಯಾವ ಪ್ರಕಾರವಾಗಿ ಸೈಕಲ್‌ಮ್ಯಾಲ ಬರುತ್ತಿದ್ದ
ಅಮಾಸನು ಯಾರ ಕಣ್ಣುಗ ಬೀಳುವಂತವನಾದನೆಂದರೆ–
ಇಸ್ಪೀಟು ಆಟ್ದಲಿ ದುಡ್ಡುಕಾಸು ಹೊಡ್ದು ಗೋರಾಕ್ಕಂಡಿದ್ದವನ
ಕಣ್ಣುಗ ಬಿದ್ದನು.
ಈಗ ಕಾಲ್ಬಳಿ ಗುಡ್ಡವಾಗಿ ಬಿದ್ದಿರೋ
ಶ್ರೀಲಕ್ಷ್ಮಿ ಚಂಚಲವ ಅರಿತವನಾದ ಅವ
ನೆಪ ತೆಗ್ದು ಆಟ ನಿಲ್ಸಕಾ
ಕಣ್ಣೆಯ ಬಿಂಕಿ ಕಡಿಸ್ತ
ಹಲ್ಮುಡ್ಯ ಖಚ್ಗಂಡೂ–
“ನೋಡ್ರುಡಾ ನೋಡ್ರುಡಾ! ಹೊಟ್ಟಗ ಹಿಟ್ಟು ಇಲ್ದೆ ಇದ್ರೂ
ಆ ಹೊಲೀನ್ ಕೊಬ್ಬ!
ನಾವ್ ನೋಡ್ಲಿ ಅಂತ್ಲಿಯ–
ಹಾವ್ನ ಥರ್ವಾಗಿ ನಲೀತಾ ಬತ್ತಾ ಅವ್ನಲ್ಲಾ!
ಬಡ್ಡೇದ್ನಗ ಆ ಹ್ಯಾಂಡಲ್ನೆ ಹಿಡ್ಕಳಕ ಆಗಬಾರ್ದು
ಆ ಥರ್ವಾಗಿ
ಅವ್ನ ಆ ಏಡು ಮುಂಗೈನಿಗ ಕತ್ತರ್ಸಿ
ಅತ್ತಾಗೊಂದು ಇತ್ತಾಗೊಂದು ಎಸ್ದ್‌ಬುಟ್ರೀಗಪ್ಪಾ...”
ಅಂತ ಬಾಯೊಳಗಲ ಹಲ್ಗಳ ನೊರಗುಟ್ಸಿದನು.

ಆಟ ದೊಡ್ಡದು.
ಆ ಮಾತ್ಗ ಪಕ್ಕದವ–
“ನೀನು ಅವನ್ಗ ಮುಂಗೈ ಕತ್ತರ್ಸಿ

ಮಠದ ಬಾಗುಲ್ಗ
ಅತ್ತಾಗೊಂದು ಇತ್ತಾಗೊಂದು ತೋರ್ಣ ಕಟ್ಟಾಗ
ನಾನೂ ಜೊತ್ಗ ಬತ್ತೀನಿಕನ.
ಈಗ ಒಂದ್ ಒಳ್ಳೆ ಎಲ ಹಾಕು ಮತ್ತ" ಅಂದನು.
ಇವ ಆ ನೊರಗುಟ್ಟುತ್ತಿದ್ದ ಆ ಹಲ್ಲುಗಳನ್ನು
ತುಟೀಲಿ ಮುಚ್ಕಂಡು
ಆ ತುಟ್ಗ ನಗೂ ಸವೂರಿ
"ನಿಂಗ್ ಬೇಕಾದಂಥ ಎಲ ಕೊಡ್ತೀನಿ.
ತಕ್ಕಾ ಮೊಗುಚಿ" ಅಂತ
ಆ ಎಲ್ವ ಪಟ್ಟಂತ ಮೊಗಚಿಟ್ಟು
ಆಟ ತೋರಿಸಿದನು.

ಇಸ್ಪೀಟು ಗ್ಯಾಂಗ್‌ನ ಕಣ್‌ತಪ್ಪಿ
ಅಮಾಸನು, ಮಠದ ಇನ್ನೊಂದು ಪಡಸಾಲದ
ಕಾಯಕವ ಊಹಿಸಿದವನಾಗಿ
ಮಿಂಚೋ ಎಂಬಂತೆ
ನಂಜಲಗೂಡ್ಗ ಅವ ಬಂದೂ
ಅಲ್ಲಿ ಹಾಸ್ಟಲು ಆಸ್ಪತ್ರ ಹೊಳದಡ
ಈ ಮೂಲೋಕ್ವ ಸುತ್ತೀ
ದಲಿತ ಸಂಘದ ನಾಗರಾಜುವ ಪತ್ತ ಮಾಡ್ಕಂಡು
ಯಾವಾಗ ಹೋಗಿದ್ದನೋ ಅನ್ನುವಂತೆ
ಊರ್ಗ ಬಂದನು.

ಬಗಲಲ್ಲಿ ದ್ಯಾವರಗುಡ್ಡರ ಜೋಳ್ಗೆ ಅಂಬುವಂತಿದ್ದ
ಬ್ಯಾಗು ನೇತಾಕಿಕೊಂಡೂ
ಅದರೊಳಗ ಕವನ ತುಂಬ್ಕಂಡು
ಯಾವುದೋ ಕಾಲ್ದವ ಈ ಕಾಲದಲ್ಲಿ ಬದುಕವ್ನೆ ಮಾತ್ಕ
ಅಂಬುವಂತೆ ನಡೆದಾಡುತ್ತಿದ್ದ ನಾಗರಾಜುನ ಹಣೆಯೇ
ಆ ಮೊಕದಲ್ಲಿ ಅರ್ಧ ಆವರಿಸ್ಕಂಡಿದ್ದು

ಇನ್ನು ಉಳುಕಲಿಯ ಆ ಬುಡಬುಡಕಾ ಮಾಟದ ಕಣ್ಣೂವಿ
ಆ ಗತಕಾಲದ ವಾಸ್ನನೂ ಹಿಡಿಬಹುದಾದಷ್ಟಿದ್ದ ಮೂಗೂವಿ
ಬಲು ಕಸ್ಟದಲಿ ಜೀವಿಸಿದ್ದವು.

ಆ ನಾಗರಾಜುವು ಮಠದ ಬಾಗಲು ತಲುಪುವುದರೊಳಗಾಗಿ
ಆ ಕಡ ಇಸ್ಪೀಟಾದ್ರ,
ಈ ಕಡ ಪಡಸಾಲದ ಮೇಲೂ ಕೆಳೂಗೆಲ್ಲ ಮುಳುಗಿದ್ದ ಗುಂಪುವು
ಗಾರಸಿದ್‌ಮಾವಗ
ಆಗಲೇ ಎರಡನೆ ರೌಂಡು ಹೊಡ್ತ ಚುಕ್ತ ಮಾಡಿ
ಮೂರನೆ ರೌಂಡುಗ ರೋಷವ ಮೈದುಂಬಿಸಿಕೊಳ್ಳುತ್ತಿತ್ತು.

ಆ ಹಣೆಯು ಒಂದು ಬೆಟ್ಟಿನ ಅಗಲವಿದ್ದರೆ
ಈ ಹುಬ್ಬು ಎರಡು ಬೆಟ್ಟಿನ ಅಗಲವಾಗಿದ್ದ
ಆ ಗಾರಸಿದ್‌ಮಾವನ ಮೈತುಂಬಾ ರೋಮವು ತುಂಬ್ಕಂಡು
ಅವಗ ಏನಾರು ಬೆತ್ತಲು ಮಾಡಿ ನಿಲ್ಸಿದಲ್ಲಿ
ಅವನು ಆ ಗುಂಪಿಗೂ ಮೂಲಪುರುಷನಾದ
ಆದಿ ಮಾನವನಾಗಿ ಕಂಡು ಬರೋ
ಆ ಅವನ ಮುಂದ ಬೇಸರದಲಿ ಬಿದ್ದಿದ್ದ
ಹದ್ನಾರು ಎಳನೀರುಗಳು
ಅವನನ್ನು ಮಠದಾಚೆ ನಿಂತ ನ್ಯಾಯಗಂಬಕ್ಕ ಕಟ್ಟಿಹಾಕಿಸಿದ್ದವು.
ಆ ಕಟ್ಹಾಕಿಸಿಕೊಂಡ ಅವನ ದೇಹವು
ಹೊಡೆದವರ ಕಯ್ಗಳನ್ನು ನೋಯುಸ್ತ
ಹಾಗಾಗಿ ನೊಂದ ಕಯ್ಗಳಿಗೆ
ಇಶ್ರಾಂತಿ ಕೊಡಲೋಸುಗ
ಪ್ರತಿ ಹೊಡ್ತದ ರೌಂಡ್‌ನ ನಡುವೂ
ಡೈಲಾಗ್ ನಡೆಯುತ್ತಿತ್ತು

“ಬಡ್ಡೇದ್ನೇ, ನಿನ್ತಪು ತಪ್‌ನಿಗ ತಕ್ಕಳ್ದೇ ಇದ್ರ...
ನಾನು ನಮ್ಮಪ್ಪನ್ಗ ಹುಟ್ಟಿದ್ ಮಗ್ನೆ ಅಲ್ಲ ತಿಳ್ಕ

ಹೊಡಸ್ಕಂಡು ಸುಮ್ಮಾ ಯಾಕ್ ಸತ್ತೋದಯೀ...
ಸುಮ್ನ ನೂರೊಂದ್ ರೂಪಾಯ ಮಡುಗ್‌ಬುಡು."

"ತಪ್ಪು ಮಡ್ಗಕ ನಾ ತಪ್ಪ ಮಾಡಿರದಾರುವಿ ಯಾನ್ನಪ್ಪ?"

"ಪುನ ಅದ್ನೆ ಅಂದನು? ಆಗಾರ ನಿಮ್ಮಪ್ಪನ
ತೋಟ್ದಲ್ಲುಡ ನೀನು ಎಳ್ನೀರ ಕಿತ್ತಿರದು ಆಗಾರ?"

"ಕುಡಿಯಾಕ ಅಂತ ಎಳ್ನೀರ ಕಿತ್ಗಂಡ್ರೂ
ತಪ್ಪಪ್ಪ ಅದೂವಿ?"

"ಅಡಡೆ ಇದುಕುಡ ಮಾತು! ಕುಡಿಯಾಕ? ಯಾನುಡ
ಯಾನುಡಾ? ಅದೂ ಕುಡಿಯಾಕ! ಒಂದ್ ಕಿತ್ಗಯ್ಯ,
ಸಾಲ್ನಿಲ್ಲ ಇನ್ನೂ ಒಂದು ಕಯ್ಯ. ಅಮ್ಮಮ್ಮಾ ಅಂದ್ರ
ಇನ್ನೂ ಒಂದೂ ಕಯ್ಯ. ನಿಮ್ಮೌನ ಜಾತಿನ ಕೆಯ್ಯ.
ಹದನಾರ್ ಕಿತ್ತರುಡ ಕುಡಿಯಾಕ! ಅದೂ ಹದ್ನಾರ?"

"ಎಲ್ಲನುವಿ ನಿಮ್ಮೆದ್ರುಗ ಕುಡುದ್ರ
ಒಪ್ಪಗಂಡರ್‍ಯಪ್ಪ ಆಗ್ಲಾರುವಿ?"

ಗಾರಸಿದ್‌ಮಾವನ ಈ ಸವಾಲು ಮೊಕಂಡನಿಗ
ತಬ್ಬಿಬ್ಬುಮಾಡೀ ಈಗೇನಾರ ಬಾಜಿಗ ಬಿದ್ದು
ಇರ ಎಳ್ನೀರುವಿ ದಿಕ್‌ತಪ್ಪಿದು ಅಂತ ಮುಂದಕ
ತೋಟದವ ಮಾತು ತಗ್ದು ವರಸೆ ಬದಲಿಸಿದನು–
"ಅಯ್ ನಂ ತೋಟ್ದ ಎಳ್ನೀರು ಯಾರ್ಗಯ್ಯ ಇರದು? ಇವ್ನಗ
ಕುಡಿಯಾಕಕನ ನಾವು ತೋಟ ಮಾಡಿರದು. ಅದ್ಯಾಕ
ಹೇಳು? ಇವರವ್ವಗ ಮಿಂಡ ನಾನು. ಅದ್ಕ...!"

ಅದುಕ ಗಾರಸಿದ್‌ಮಾವ– "ಇದ್ಯಾನಪ್ಪ

ನೀವು ಆಡ ಮಾತು?" ಅಂದು, ಅದುಕ ಗುಂಪಲ್ಲೊಬ್ಬ
"ಐ ಪೆಚ್ ಬಡ್ಡೆತ್ತದ್ದೆ... ಎಲ್ಲಾಬುಟ್ಟು ಅವ್ರ ಅವ್ವನ ತವ್ಕ
ಅದ್ಯಾಕ ಹೋದಯೀ... ಅದೂವಿ ಮುದ್ಕಿ ತವ್ಕ..." ಅಂದೂ,
ಇನ್ನೊಬ್ಬ ಅದುಕ "ಅದ್ಕ್ಯಾನ ತಕ್ಕ..." ಅಂದೂ
ಅದಕ ಆ ಗುಂಪು ಒಂದೇ ಬಾಯಾಗಿ ನಗ್ತಾ,
ಗಾರಸಿದ್ ಮಾವನ ಸದಾ ಬುಟ್ಕಂಡಿರ್ತಿದ್ದ ಬಾಯಿ ಮುಚ್ಕಂಡಿರ
ಕಾಲಕ್ಕ ನಾಗರಾಜುವು ಬೇಕಂತಲೆ ಕೆಮ್ತ ಅಲ್ಲುಗ
ಇಳಿದರು.

ಊರುಗ ಬಂದ ಹೊಸ ವಾಸ್ನನಿಗ ಹಿಡ್ದು ಆ
ಮೊಕಂಡನು ನಾಗರಾಜುಗ "ಬಯ್ಯ ಬಯ್ಯಾ ಮೇಸ್ತ್ರ,
ನಿಮ್ ಜ್ಯಾತವರ್ಗ ನೀ ವಸಿ ಓದ್ದವ ಬುದ್ದಿಗಿದ್ದಿ
ಹೇಳುದ್ರ ಆಗ್ಲಾರು ಕೇಳಿವ್ಯನ. ಅಲ್ಲಾಕಯ್ಯ ಮೇಸ್ತ್ರಾ...
ನಿಮ್ ಜ್ಯಾತವು ಊರ್ಲಿ ಇರ ಮರ್ದಮ್ಯಾಗಲ ಎಳ್ನೀರ
ಒಂದ್ ಮೊಗರ್‍ನೂ ಉಳುಗೊಡ್ಸಲ್ವಲ್ಲಾ...ಅದ್ಯಾವ
ಥರ್ದಲ್ಯೆ ನಾವು ಊರ್ಲಿ ಬಾಳಾಟ ಮಾಡದು?
ಒಂದಾ... ಅವ್ರು ಇರ್ಬೇಕು ಊರ್ಲಿ. ಇಲ್ಲಾ ನಾವ್ ಇರ್ಬೇಕು ಊರ್ಲಿ.
ಆಗ್ಲೆ ನೋಡಪ್ಪ ಒಂದ್ ಹದ್ಕ ಆಗದು ಇದು..." ಎಂದು
ನಾಂದಿ ಬಾಣ್ವ ಬುಡ್ತಿರಲು,
ಅವನ ಸುತ್ತಿದ್ದ ಗುಂಪು ಗುರ್ರೋ ಅಂತ ನೋಡ್ತ
ನಾಗರಾಜುಗ ಮೊದ್ಲ ರೌಂಡ್ ಕಣ್ಣೊಡ್ತ ಹೊಡ್ದು ಆ ಕಣ್ಣುಗ ಇಸ್ರಾಂತಿ ಕೊಟ್ಟು
ನಾಗರಾಜು ಮಾತ್ಗ ಕಾಯ್ತ ಅವರು ಇರಲು
ನಾಗರಾಜು ಕೆಮ್ತಿದ್ದರು.
ಈ ಕೆಮ್ಮು ನಿಲ್ದೇನೆ ಆಗ
ಪುನಾ ಆ ಮೊಕಂಡನೆ ಮಾತು ಬುಡತೊಡಗಿದನು.

> "ಅಲ್ಲಕಯ್ಯ ಮೇಸ್ತ್ರ, ಒಂದ್ ಕೂದ್ಲ ಎಳ ಅಸ್ಟು ನಮ್‌ಕಡ ತಪ್ಪಿದ್ರ ಅದ ಒಪ್ಕತ್ತಿವಿಕಯ್ಯ ನಾವು. ಇವ ಈ ಗಾರಸಿದ್ದ ಅವ್ನಲ್ಲಾ, ಅವ ಕಿತ್ತಿರ ಎಳ್ನೀರು

ನೋಡುದ್ರ ಹದ್ನಾರು. ಹದ್ನಾರು ಕಯ್ಯ! ಅದ್ಕ ತಪ್‌ಕೊಡ್ಡ ಅಂದ್ರಾ... ಅದ್ನಿಗ ಕುಡಿಯಾಕ ಕಿತ್ತಿ ಅಂತಾನಲ್ಲಾ...! ಯಾವ್ ಲಾಯರ್ ತಾನೀಯ ಒಪ್ಪಿನು ಇದ? ಈ ಥರ್ವಾಗಿ ಈ ಗಾರಸಿದ್ದ ಎಸ್ಟ್ ಊರ ಹಾಳ್ಮಾಡಿರಬೌದು ಮೇಸ್ತ್ರ ಇವ?"

ಈ ಮಾತುಗ ನಾಗರಾಜು ಕೆಮ್ಮು ನಿಲ್ಸಿ ಗಂಟ್ಲಲ್ಲಿ ದನಿಯ ಗೊರಗುಟ್ಸಿ ಆಡೋ ಪದ್ವ ಹುಡುಕೀ ತಗ್ದು "ಏನ್ರೀ ಸ್ವಾಮೀ, ಇಷ್ಟಕ್ಕೂ ಕಂಬಕ್ಕಟ್ಟಿ ಹೊಡ್ದಿದ್ದೀರಲ್ಲಾ ನಿಮ್ದೂ ತಪ್ಪಲ್ವ?" ಅಂದು ಕೆಮ್ಮತೊಡಗಿದರು. ಆಗ ಆ ಮೊಕಂಡ ಸುತ್ತೂ ಒಂದ್ಸಲ ನೋಡ್ದನು. ಆ ಸುತ್ಲ ಗುಂಪು ಕಣ್ಲಿ ನಾಗರಾಜುಗ ಎರಡನೆ ರೌಂಡು ಚಚ್ಚಲು ಈಗ ಮೊಕಂಡ ತಾನೂ ಕೆಮ್ತ–

"ಇದ್ನೀಗಪ್ಪ ಅಪ್ಪನಿಗ ಹುಟ್ಟಿದ್ ಮಾತು ಅನ್ನದು. ಶಬಾಸ್‌ಕಯ್ಯ! ನಾನೂವಿ ಆ ಸಕಲೇಸ್‌ಪುರ್ದಗಂಟಾನೂ ಹೋಗಿರೌನೂ. ಇಂಥ ಮಾತ್ನಿಗ ಎಲ್ಲೂವಿ ಕೇಳಿರ್ನಿಲ್ಲಕಯ್ಯ. ನನ್ನ ಈ ಕಿವ್‌ಗ ಬಿದ್ದೆ ಇಲ್ಲಾ ಅಂತೀನಿ. ಅಯ್ಯಯ್ಯಾ ಎಂಥ

ಹೊಸ ಮಾತಯ್ಯ ಇದು! ಆ ಆ ಹೊಸ ಮಾತುಕಯ್ಯ ಇದು. ಈ ದೇಸನೆಲ್ಲ

ಹುಡೀಕಾ ಬಂದ್ರೂನು ಸಿಗಲಾರ್ದು! ಅಂಥ ಮಾತುಕಯ್ಯ, ಹೊಸ್‌ಮಾತು... ಆಯ್ತುಕಯ್ಯ ಮೇಸ್ತ್ರ, ಅದ್ಕೂವಿ ಒಪ್ಗತೀನಿ. ಅದೆ ನಾವು ಸುಮ್‌ಸುಮ್ನ ಕಟ್ಟಾಕಿ ಬುದ್ದಿಲ್ದೆ ಅವ್ನಗ ಹೊಡ್ದೆವಲ್ಲಾ... ಅದು ತಪ್ಪುಕಯ್ಯ. ನಮ್‌ದೆ ತಪ್ಪು

ಅಂತೀನಿ. ಅವ ಎಳ್ನೀರ್ ಕಿತ್ನಲ್ಲಾ... ಅದೀಗ ನೋಡಪ್ಪ ಅಪ್ಪನ್ಗ ಹುಟ್ಟುದ್ ಕೆಲ್ಸ. ಐ ಅದ್ರಲ್ಲಿ ಯಾನಾರೂ ತಪ್ಪಿದ್ದಾ? ತಪ್ಪಿದ್ದದಯ್ಯ ಮೇಸ್ತ್ರಾ?"

ಅಂದವನು, ಊರಗಲ ಕಣ್ಣುಬುಟ್ಟು ನೋಡ್ತ ಸಿಕರೋಟು ಹಚ್ಚಿ ಹೊಗ್ವಬುಟ್ಟು ಕೆಮ್ಮತೊಡಗಿದನು. ಅವ ಅಲ್ಲಿ ಕೆಮ್ಮಲಾರಂಬಿಸಲು, ಇಲ್ಲಿ ನಾಗರಾಜುಗ ಕೆಮ್ಮು ನಿಂತು "ಅದೂ ತಪ್ಪೀಯ. ಅದ್ಕ ನೀವ್ಗಳು ಕಟ್ಟಾಕಂಡು ಹೊಡ್ದಿರದೂ ತಪ್ಪಿಯ. ಆ ಎಳನೀರನ್ನೂ ಅದ ಕಿತ್ತವರನ್ನೂ ಪೋಲಿಸ್‌ಗ ಕೊಡಬೇಕಿತ್ತು. ಅದು ಬಿಟ್ಟು..." ಎಂತಿರಲು,

ಮೊಕಂಡ ನಾಗರಾಜು ಮಾತ ತಡ್ದು– "ಅದ್ಯಾಕಯ್ಯ ಮೇಸ್ತ್ರ ಪೋಲಿಸ್‌ಗ?

ನಂ ಕಯ್ಗ ಬಳ ತೊಟ್ಕಂಡಿದ್ದವ ನಾವು? ಆಗಾರ ನಮ್ಮೂರ್ಲಿ ನ್ಯಾಯವಂತರೆ
ಇಲ್ವಯ್ಯ? ನಿ ಓದ್ದವ. ನೀ... ಮೇಸ್ಟ್ರು. ನಿನ್ನಂಥವ ನ್ಯಾಯನಿಗ ಹೇಳುದ್ರ ಅದ್ನೀಗ
ನಾವು ಕೇಳದ್ರಲ್ಲಿ ತಪ್ಪೇನಯ್ಯ ಇರಾದು? ಈಗಾ... ನಮ್ದೂ ತಪ್ಪು ಅಂತ ತಾನೀಯಪ್ಪ
ನೀ ಅನ್ನದು? ಹಾಗೂ ಬತ್ತೀನಿಕಯ್ಯ... ಮೇಸ್ಟ್ರ, ಸರ್ರ? ಎಲ್ರುಡ ಆ ಗಾರಸಿದ್‌ನ ಕಟ್‌ಬಿಚ್ರುಡ..."

ಅಂತಿದ್ದಂತೆ ಕಟ್ಗಳು ಬಿಚ್ಗಳಲು ಆಗ ಮೊಕಂಡನು ತನ್ನ ಜುಬ್ಬದ ಜೋಬ ಅಲುಗಾಡುಸ್ತ ನೂರೊಂದು ರೂಪಾಯ ತಗ್ದು– "ಈಗ ತಕ್ಕಯ್ಯ ಮೇಸ್ಟ್ರ ನಮ್ಕಡ ತಪ್ಪ. ಇದ ನೀನೆ ಮಠಕ್ಕ ಒಪ್ಪುಸ್‌ಬುಡಯ್ಯ. ಆಮ್ಯಾಲ ಅವನದನ್ನೂ ತಪ್ಪು ಅಂದಿ ತಾನೀಯಾ? ಅವನ ತಪ್ಪನೂ ಮಡುಗ್ಸುಬುಡು ಮತ್ತ ಈಗ. ಎಲ್ರುಗೂವಿ ಒಂದೇ ತಾನೀಯ ನ್ಯಾಯಾ...!?" ಅಂತಂತ.

ಈ ಧರೆಗೆ ಬಿದ್ದಾ ಆ ಗಳುಗೆ ದೆಸವೋ ಏನೋ ಒಂದು ಗಳುಗಾರೂ ಸುಮ್ಕಗಿರದ ಗಾರಸಿದ್‌ಮಾವನು, ಮೊಕಂಡನ ಬೆರುಳತುದೀಲಿ ನಾಗರಾಜು ಮೊಕದ ಮುಂದಲ್ಲಿ ಬೀಳೋ ಥರ್ವಾಗಿ ಆಡ್ತಿದ್ದ ನೋಟ್ಗಳ ತವ್ಕನ ತನ್‌ಕಯ್ಗ ಚಿಮ್ಕಸ್ಗಂಡು, ಒಂದ್ ರೂಪಾಯ ತನ್ನ ಬೆರಳೊಳ್ಗ ಕಾಣ್ದಂಗ ಮಾಡಿ, ನೂರ್ ರೂಪಾಯ ಆ ಮೊಕಂಡನ ಮುಂದಿಟ್ಟು–"ತಕ್ಕಪ್ಪ ಈಗ ನನ್ ಪಾಲ್ನ ತಪ್ಪ. ಉಳುಕ ಒಂದ್ರೂಪಾಯ ಆಮ್ಯಾಕ್ ಕೊಡ್ತೀನಿ. ನಂಗ ನೂರು ಸಾಲ ಕೊಟ್ರ ಅಂದ್ಕಳ್ಳಿ. ನಿಮ್ ಪಾಲ್ನ ತಪ್ಪು ನೂರೊಂದ ನೀವ್ ಬ್ಯಾರಿಯಾಗಿ ಮಠಕ್ಕ ಕಟ್ಗಳ್ಳಿ..." ಅಂದು ನಾಗರಾಜಾದಿಯಾಗಿ ಆ ಗುಂಪುಗ ಬೆರುಗ ಬಡಿಸಿದನು.

ಮೊಕಂಡನಿಗಾಗ ಮಾತು ನಿಂತು ಅಡಡಡೆ ಅಂತಿದ್ದನು. ಗಾರಸಿದ್‌ಮಾವ, ಕಕ್ಕಾಬಿಕ್ಕಿ ತುಂಬಿದ್ದ ನಾಗರಾಜುಗ "ಈಗ ಆಯ್ತಲ್ಲ ಬನ್ನಿ ಸೋಮಿ"ಎಂದು ಎಳ್ದು ತಿರುಗಲು, ಕೆಳಕ್ಕ ದುಮುಕಿದ ಮೊಕಂಡನು:

"ನಂ ದುಡ್ಡ ನಮ್ಗಿಯ ಕೊಟ್‌ಬುಟ್ಟು ಅದೆಂಗುಡ ಅದು ತಪ್ಪುಕಾಣ್ಕ ಆದ್ದು ಗಾರಸಿದ್ದ?"

"ಅವ್ವೆ ನೀವು ಸಾಲ ಅಂತಕಪ್ಪ ನಂಗ್ ಕೊಟ್ಟಿರದು. ಸಾಲ ಅಂತಾದಮ್ಯಾಲ ನಿಮ್‌ದೆಂಗಾದ್ದು ದುಡ್ಡು?"

"ಸಾಲ? ಆಗಾರ ಎಂದುಡ ನೀನು ಸಾಲ್ವ ತಿರುಗ್ಸಿ ಕೊಡಾದು?"

"ಯಂದಾರುವಿ ಕೊಡ್ತಿನಿ ತಕ್ಕಪ್ಪ ಅದ್ಕ್ಯಾನ? ನಾ ಹಿಡ್ದಿರದು ಮೇಳಿ ಅಲ್ಲಕನ! ಕರಣ...! !"

"ಮೇಸ್ಟ್ರಾ ಇದ್ಕ ಇದ್ಕ ನ್ಯಾಯ ಹೇಳು ಮತ್ತ ನ್ಯಾಯ್ವ. ಜೋಳ್ಗ ಒಳಗ ಕಿತ್ಲು ಬೀಜ ಸುಳ್ಳಿನ ಮಳೆ ತುಂಬ್ಕಂಡು ಅದಾ ನೇತಾಕಂಡು ಊರೂರ್ ಮ್ಯಾಲ ತಿರುಗ್ತ ಅಣ್ಣಾ ತಮ್ಮದಿರ ಥರ ಇರೋರ ಎಕ್ಕುಟ್ಸಿ ಊರ ಹಾಳ್ಮಾಡಕ ಅಂತ ಬಂದ್ಯ...?"

ಅಂತ ಅವ ಅಂತಿದ್ದರೂ ಆ ಕೆಮ್ಮೋ ನಾಗರಾಜುನ ಗಾರಸಿದ್‌ಮಾವ ಎಳ್ಕಂಡು ನಡ್ದುಬುಟ್ಟನು. ಆ ಗುಂಪಿಂದ– "ಅವ್ನ ಜೋಳ್ಗ ಕಿತ್ಗಳ್ರುಡ ಜೋಳಗ್ಯ" ಅಂಬೊ ಮಾತೂ, ಗಾರಸಿದ್‌ಮಾವನ ಬೆನ್ನುಗ ಒಂದೆರಡು ಕಲ್ಲೂ ಬಂದು ಬಿದ್ದವು.

ಕೇರಿ ತಲುಪೂ ನಾಗರಾಜುಗ ಕೆಮ್ಮು ಕೆಮ್ಮುತ್ತಿತ್ತು. ಗಾರಸಿದ್‌ಮಾವ ಮಾತ್‌ಮಾತಗೂ "ಕೇಮಿಲ್ದಿಯ ಅದ್ಯಾಕ ಬರಾಕ ವೋದ್ರೀ ಸೋಮಿ ನೀವ್ ಬ್ಯಾರಿಯ" ಅಂತಿದ್ದನು. ಮೈದುಂಬ್ಕಂಡಿದ್ದ ಸುಸ್ತೂನ ನಾಗರಾಜು ಒಂದು ಸ್ಥಿತಿಗೆ ತಲುಪ್ಸಿ, ಆಮ್ಯಾಲ:

"ಅಲ್ಲ ಕನ್ರಿ... ನಿಮ್ಮನ್ನ ಕಟ್ಟಾಕಂಡು ಹೊಡೀತಾ ಇರ್ವಾಗ ಬರ್ದೆ ಇರಾಕ ಆದ್ದ?"

"ಅವ್ವೆ ನನ್ನ ಕಟ್ಟಾಕಂಡು ಹೊಡೀದಿದ್ರ...? ಆ ಬಡ್ಡೆತ್ತವು ಎಸ್ಟ್ ಜನ ಇದ್ದರೂ ನಾ ದಕ್ಕಿನಾ ಸೋಮಿ! ನನ್ನ ಕಟ್ಟಾಕ್ದೆ ಹೊಡೆಯೋ ಗೋರಂಜ್ದ ಗಂಡ್ಸು
ಊರಲ್ಲಿ ಇನ್ನೂವಿ ಹುಟ್ಟಿಲ್ಲ ಅಂದ್ಕಳ್ಳಿ... ಅಮ್ಮಮ್ಮಾ!"

"ಏನ್ರಿ ನೀವು ಆಡ ಮಾತು? ತಪ್ಪೂಕೊಟ್ಟೂ..."

"ಐ ಅದ್ಯಾವ ಸೀಮ ತಪ್ಪ ಸ್ವಾಮಿ ಅದು? ನಾನೇ ಒಂದ್ ರೂಪಾಯ

ತಪ್ಪು ತಕ್ಕ ಬರ್ಲಿಲ್ವಾ?"
"ಸಾಲವಲ್ಲವೇನ್ರಿ ಅದು...?"
"ಎಂಥ ಸಾಲ್ವ ಸೋಮಿ ಅದು? ಅವ ಬಂದು
ನನ್‌ತಪು ತರ್ಕಂದನ..."

ಮಾತಾಡ್ತ ಬರುತಿರಲು, ಚನ್ನನ ಅಪ್ಪ ಯಾತಕು ಸೇರ್ದಂಗ ಕೂತವನು ದುಪ್ಪಟಿ ಒಳಗಿಂದ ಕಯ್ಯ ತಗದು ಚಾಚಿ "ವೊವೊ ಊರ್ಗ ವಸಬ್ರು ಅಂತ ಕಾಣ್ತದ... ಒಂದ್ ಬೀಡಿಗೀಡಿ ಇದ್ರ ಕೊಡಿ ಸೋಮ್ಯೆ" ಅಂದನು.

ಆಗ ಒಂದು ಬೀಡಿ ತಗ್ದು ಗಾರಸಿದ್ಮಾವನು "ಈ ನಮ್ ಚನ್ನನ ಅಪ್ಪನಗ ಬೀಡ್ಯ ಕೊಟ್ಟೂ ಕೊಟ್ಟೂ ನನ್ ತಲ ಕೂದ್ಲೆಲ್ಲ ಉದುರೋಯ್ತುಕಪ್ಪ" ಅಂತ ಕೊಟ್ಟನು. ಆ ಬೀಡ್ಗ ಬಿಂಕಿ ಮುಟ್ಟುಸ್ತ ಚನ್ನನ ಅಪ್ಪ– "ನಿನ್ಯಾರುಡ ಗಾರಸಿದ್ದ ಕೊಡು ಅಂತ ಕೇಳ್ದವರು? ನಾನು ಅವರ್ನ ಕೇಳುದ್ರ ಸುಮ್ನಿರ್ಲಾರ್ದೆ ನೀನೇ ಕೊಟ್‌ಬುಟ್ಟು ಅದ್ನೂ
ಒಂದ್ ಮಾತಾಡೀಯ ಈಗ? ಆಯ್ತುಕಯ್ಯ! ನಿನ್ ಮಾತೀಗೆ ಬತ್ತೀನಿ ಕಯ್ಯ. ನಿನ್
ತಲಲಿ ಇರ ಕೂದಲು ಒಂದೂ ಇಲ್ದಂಗ ಉದುರೋಗಗಂಟಾನೂ ಬೀಡಿ ಕೊಡಯ್ಯ
ಸಾಕು. ನಿನ್ ತಲ ಬೋಳ್ತಗ ಆದಮ್ಯಾಲ ನಿನ್ ಬೀಡಿ ಕೇಳಾದ ನಾನೇ
ಬುಟ್‌ಬುಡ್ತೀನಿ" ಅಂತ ನಗಾಡ್ತ ಇರಲು

ಆಗ ಹೊರಬಂದವ ಚನ್ನಗ ನಾಗರಾಜು ಕಂಡುಬಂದು "ವೊ ವೊ ವೆಲ್‌ಕಂ ಸಾ...
ಬನ್ನಿ ಸಾ" ಅನ್ತ ಬಂದನು. ನಾಗರಾಜು ಎಲ್ರೂ ಅಂಬುವಂತೆ "ಏನ್ರೀ ಜೇಮ್ಸುಬಾಂಡು... ನಿಮ್ಮಂಥವರೆಲ್ಲ ಊರಲ್ಲಿ ಇದ್ದೂವಿ ಇಂಥವ್ಕೆಲ್ಲ ಅವಕಾಶ ಕೊಡ್ತೀರಲ್ಲ" ಅಂದರು.
ಚನ್ನ ಕಣ್ಣೂ ನಗು ಅರಳುಸ್ತ "ಯಾನ ಸಾ, ಯಾನ ಸಾ... ನೀವು
ಆಡ್ತಾ ಇರಾದು ನಂ ಗಾರಸಿದ್ಮಾವ್ನ ಮಾತ? ಅವ್ನ ಕಯ್ಲಿ ಇನ್ನೊಂದ್ಸಲ ಕಂಡವ್ರ ಎಳ್ನೀರ ಮುಟ್ಟಲ್ಲ ಅನ್ಸಿಮತ್ತ..." ಅಂತ್ಲೆ, ತಟಕ್ಕನ ಗಾರಸಿದ್ಮಾವ

"ಇನ್ನು ಮುಟ್ಟಲ್ಲಕಯ್ಯ" ಅಂದನು.

ಆ ಗಾರಸಿದ್ಮಾವನ ಆ ಮಾತು ಚನ್ನಂಗ ಉಕ್ಕುಸ್ದ ಆ ನಗೂಗ ಚನ್ನನಾಗ ಹೊಟ್ಟ
ಹಿಡ್ಕಂಡು ಕುಲುಕುಲು ನಗುತ "ವೊ ವೊ ಮಾವೋ ಯಾನಂದ್ಯ ಯಾನಂದ್ಯ? ಮುಟ್ಟಲ್ಲ ಅಂತ! ಬಸುರಿ ಹೆರ್‍ಗ ಟೈಮ್ಲಿ ಯಾನಂದ್ಕಂಡಳು ಹೇಳು..." ಎಂದು ನಗುತಾನೇ ಇರಲು, ಗಾರಸಿದ್ಮಾವ ತನ್ನ ನಗೂವ ಒಳಕ ನುಂಗ್ತಿರಲು, ನಾಗರಾಜು "ಏನ್ರಿ ಅದು?" ಅಂದರು. ನಗೋ ಚನ್ನ ಆಗ "ಅದಿಯಾ ಸಾ, ಬಸುರಿ ಹೆರ್‍ಗ ಟೈಮ್ಲಿ, ಆ ನೂವ ತಡ್ಕಳಾಕ ಆಗಲಾರ್‍ದೆ, 'ಸಿವಾ, ಈ ಜಲ್ಮದಲ್ಲೆ ಇನ್ನೊಂದ್ಸಲ ಮಾಡ್ಸಕಳಲ್ಲಪ್ಪಾ... ಇದೊಂದ್ ಸಲ ಯಾಗಾರೂ ಮಾಡಿ ಪಾರು ಮಾಡ್‌ಬುಡಪ್ಪಾ...' ಅಂದ್ಕಂಡಳಂತ. ಆಮ್ಯಾಕ ಬಾಣ್ತಿ ಆದ ತಿರ್‍ಗ ನಾಳ್ಕಿಯ ಅವಳ್ಗ ಬೇಕು ಅನ್ನಿದಂತ! ಆ ಥರ್‍ದವ ಈ ನಮ್ಮ ಗಾರಸಿದ್ಮಾವ. ಬೇಕಾರ ಈಗ್ಲಿಯ ಎಲ್ಲಿಂದಾರು ಎಳ್ನೀರ ಕಿತ್ಗಬಂದು ನಿಮ್ ಮುಂದಿಟ್ಟು 'ಗುತ್ತಗ ಮರ್‍ದದ್ದು, ಕುಡೀರಿ ಸೋಮಿ ನಾಚ್ಗಬೇಡಿ' ಅಂತ ನಿಮ್ಗಿಯ ಕುಡಿಸ್ತನ..." ಎಂತಿರಲು,

ಆ ಗಾರಸಿದ್ಮಾವನೂ ಚನ್ನನ ಮಾತ್ಗ ನಗ್ತಾ "ಈ ಚಿಕ್‌ಗಂಡ್‌ನ ಮಾತ್ ಕೇಳ್ಕಂಡು ನೀವೂ
ಆಡರಿ ಬನ್ನಿ ಸೋಮಿ. ನಂ ಮನಲಿ ಇರೋ ಅಂಬಲಿಯೊ ತುಂಬಸೊಪ್ಪೊ ಕುಡ್ಕಂಡು ಬರಾರಿ" ಅನ್ನಲು, ನಾಗರಾಜು "ನಂಗ ಅದೆಲ್ಲ ಬ್ಯಾಡಕನ್ರೀ" ಅಂದಾಗ ಗಾರಸಿದ್ಮಾವ "ಅಂಬ್ಲಿ ಅಂದ್ರ ಅಂಬ್ಲಿ ಅಲ್ಲಕನ ಬನ್ನಿಸೋಮೀ. ಅದ್ಯಾಕ ಹೆದ್ರಕಂಡರಿ! ಅಕ್ಕೀನೆ ಹಾಕಿಸ್ತಿನಿಕನ ಬನ್ನಿ. ಬಯ್ಯ ಚನ್ನರಸು ನೀನೂವಿ" ಅಂದನು.

ಮತದ ಮುಂದಾದುದೇ ಮೊದಲಾಗಿ ಇನ್ನೂ ಒಣಗದಿದ್ದ ನಾಗರಾಜು ಕಕ್ಕಾಬಿಕ್ಕಿಗ ಇದೂ ಸೇರಿ "ಅಯ್ಯೊಯ್ಯೋ ಹಂಗಲ್ಲಕನ್ರಿ ನಾನು ಅಂದುದ್ದೂ..." ಅಂದುದ್ದ ಕಿವಿಗ ಸೇರ್‍ಸದ ಗಾರಸಿದ್ಮಾವನು "ನಿಮ್ಮಾಗ ನಾವೇನ ಸಿಟಿಯವ್ರ ಸೋಮಿ ನಾವು?
ಕೊಂಡು ತಂದ ಅಕ್ಕಿ ಇನ್ಯಾಗಪ್ಪ ಅನ್ನಕ. ಗದ್ದಸೀಮಲಿ ಗೇದ್ಕಂಡು ಬಂದಿರದುಕನ ಬನ್ನಿ" ಅಂತ ನಡದನು ಅತ್ತಗ.

* * * *

## ೧೧ ಅಲಲಾ ಅಂತ ಗೆಲುಗಾಡುತ್ತಿದ್ದವಲಾ

ಅಲಲಾ ಅಂತ ಗೆಲುಗಾಡುತ್ತಿದ್ದವಲಾ
ತೂರಮ್ಮನ ಜೋಪಡಿ ತೆಂಗಿನಗರಿಗಳಾದಿ.
ಅಲ್ಲಿ ತೂರಮ್ಮನ ಕೈಸನ್ನಾಗ ತಕ್ಕಾಗಿ
ಈರೀಯ ಕಯ್ಯಾಡೂತ
ಈಗ ಮಸಾಲಕಾರ ಅರೆಯೂತ
ಅಲ್ಲಿಂದೇಳುತ್ತಿದ್ದ ಆ ವಾಸ್ನಗ
ಆಗ್ತಾನೇ ತಾರ್ಸಿ
ಹಸಸ್ನಾಗಿ ಇನ್ನೂ ನೀರಾಡೊ
ತೊಪ್ಪವಾಸ್ನವೂ ಬೆರೆಯೂತ ಇರಲು
ಅಲ್ಲಿ
ಹುಂಜವೊಂದರ ರುಂಡವು ಮುಂಡದಿಂದ ಬೇರ್ಪಟ್ಟು ಬಿದ್ದಿರಲು
ಕುಯ್ವಾಗ ಆ ಹುಂಜದ ಬಾಯ್ಗ
ನಾಕುಹನಿ ನೀರ ತೊಟ್ಟಿಕ್ಕಿಸಿದ್ದರೂ
ಅದರ ಒಟ್ಟು ಸರೀಲದ ವದರಾಟವು
ಈಗ ವದರಾಟವಾಡದಿರಲು
ಆ ಸರೀಲದ ಒಳಗಲ ಸ್ವತಂತ್ರ ಮಾಂಸಖಂಡಗಳಲ್ಲಿದ್ದ
ಕಿರುಜೀವವೂ ಬುಟ್ಟುಹೋಗ್ತ
ಕೊನೆಯದಾಗಿ ಪಕಪಕವಾಡ್ತ ಇರಲು
ಆ ಮುಂದಿಟ್ಟಿದ್ದ ಬಟ್ಟಲಿಗ ಚೆಲುಮಿಸಿಟ್ಟಿದ್ದ
ರಗುತವು ಹೆಪ್ಪುಕಟ್ಟುತ್ತಾ
ಅದರ ಮ್ಯಾಲ ಉದುರಿಸಿದ್ದ
ನಾಕಾರು ಉಪ್ಪಿನ ಅರಳುಗಳು ಕರಗದೆ ಕೂತಿದ್ದವು.
ಆ ಮುಂದ ಹಚ್ಚಿಟ್ಟಿದ್ದ ಊದುಬತ್ತೀಯು
ಇನ್ನೂವ ಉರಿಯೂತ

ಈ ವಾಸ್ನವೂ ಮಸಾಲ ತೊಪ್ಪ ವಾಸನಗ ಸೇರೂತ
ಯಾವಾಗ ಈರಿಯು ಹುಂಜನ ಪುಕ್ಕವ ತರ್ದು ಬಿಂಕಿಗಿಡುದು
ಸೀಯತೊಡಗಿದಾಗ
ಈ ಮೂಗು ಸೀಳ್ವ ವಾಸ್ನವೂ ಧಾಳಿಮಾಡ್ತ
ಆ ಸುತ್ತಾಲೂ ಆಡೋ ಉಸುರುಗಳುಗ ಮೆತ್ತಿಕೊಳ್ತಾ
ಎಲ್ಲಾವೂ.

ಈ ಬಗೆಯಾಗಿ ವಾಸನಗಳು ಒಂದುಗೂಡಿ ಆಡುತಾ
ಇತ್ತ ಈರಿಯು ತಾನ ಮಡಿಯಾಗಿ
ಹಣೆಯ ತುಂಬಿದ ಈಭೂತಿ ಕುಂಕುಮದಲಿ
ಒಂದೊಪ್ಪತ್ತು ಇದ್ದೂ
ತನ್ನ ತಲಗೂದಲ ಎಂದೂ ಇಲ್ದಂತೆ ಬಾಚೀ
ಆ ಬಾಚಲು ಸುರುದಿದ್ದ ಕಯ್ಯೆಣ್ಣವು
ಅವಳ ಕೆನ್ನೇಯ ನವೂರಾಗಿ ಸವುರೂತ ಇಳಿಯೂತ
ಅವಳು ಬಾಚ್ಕಟ್ಟಿದ್ದ ತುದಿಕೂದಲ ಕೆಂಚೆಲ್ಲವೂ
ಒಕ್ಕಡವಾಗಿ
ಆ ಎಣಗಂಟು ಬಿಂಕಿಕೆಂಡ್ವಾಗಿ ಕಾಣ್ತ
ಈ ಕೆಂಡ್ವಾಗಿ ಇದ್ದುದರ ಮ್ಯಾಲ
ಮೂರು ಹೂಗಳು ನೆಗ್ತ ಕೂತಿದ್ದವು.

ಅವ್ವ ಹೀಗಿರ್ತ
ಮಗನು ಬಿಸಿ ತಾನ್ವ ಮಾಡ್ಸಕಂಡೂ
ದೇಹದ ಮೂಳ್ಗ ಈಭೂತಿ ತುಂಬ್ಸಗಂಡೂ
ಅದಕ ಸುಸ್ತಾಗಿ
ಅಲ್ಲಿ ಓಡಾಡೋ ಅದಾವ ವಾಸನವೂ
ಅವಗ ಮೂಸೂ ನೋಡುತ್ತಿಲ್ಲವೇನೋ ಎಂಬಂತೆ
ತನ್ನಷ್ಟಕ್ಕ ತಾ ಗೋಡಗ ಮೊಕ ಹಾಕಿ ಇತ್ತು.

ಪೂಜ್ಯದಲಿ ಈರಿಯು ಪಿರೀತಿದುಂಬಿ

ಹತ್ತಾಳು ಉಂಬುವಷ್ಟು ತುಂಬೋ ತಾಂಬಟ್ಟಲು ಬೆಳುಗೂತ...
ಬೆಳುಗಾದ ಮ್ಯಾಲ
ಆ ತಾಂಬಟ್ಟಲ ಹೊರಸುತ್ತುಗ
ಮೂರುಗೆರ್‍ವ ಈಭೂತಿ ಎಳೆದವಳಾಗಿ
ಎಳೆದು ಅದಕ ಊದುಗಡ್ಡಿ ಹಚ್ಚಿಟ್ಟು
ಅದಕ ಕಯ್ಯ ಜೋಡ್ಸೀ
ನೆಲಕ ಮುಂದಲೆ ಇಟ್ಟು ಅಡ್ಡಬಿದ್ದಳು.
ಆಮ್ಯಾಲ ಆ ತಾಂಬಟ್ಟಲಿಗ
ತಾ ಮಾಡಿದ್ದು ಮಟ್ಟಿದ್ದನ್ನು
ಕಣ್ಣುಗಳುಗ ಒತ್ತುಕೊಳ್ಳುತಾ ಇಡುತಾ
ಒಂದೊಂದಾಗಿ
ಆ ಅರುಳೀದ ಕುಸುಬಲಕ್ಕಿ ಅನ್ನಾವ ಸುರುದೂ
ಆ ಅನ್ನಾವ ಬಳುಸಿ
ನೆಸೆಯುವಸ್ಟು ಗಮ್ ಎಂಬೋ ಉದುಕ್ವ ಊದೂ
ಮ್ಯಾಲ ಈಲಿ ಗುಂಡ್ಕಾಯ ಮೆದುಖಂಡ್ವ ಸೇರ್‍ಸಿ
ಒಂದು ಒಬ್ಬೆ ಇಟ್ಟೂ
ಪಕ್ಕದಲಿ ಒಂದು ಮುಚ್ಚಲು ತುಳುಕೂವ ಪಾಯಸ್ವ
ಇಡಲಾಗ
ಆ ತಾಂಬಟ್ಟಲು ತುಂಬಿ
ಅಲ್ಲೆ ಅನುಸರಿಸಿ ತಂದಿದ್ದಂಥ
ಬೆಡ್ಡೂಗುಲ್ಕಣ್ಣೂ ತುಂಬೀ

ತುಂಬಾಗಲು
ಅಲ್ಲುಗ ಉರಿಯೊ ಕಯ್ಯಣ್ಣೆ ಸೊಳ್ಳನು
ಅದುವ ತನ್ನೇಡೂ ಕಯ್ಯಲೂ ಹಿಡದು
ಒಂದೇ ದುಡದಲ್ಲಿ ಅದನು
ಆ ತಾಂಬಟ್ಟಲು ತುಂಬಿದ್ದ ಆಹಾರದ ಮ್ಯಾಲ
ಎಲೆ ಅಡಕಾವ ಇಟ್ಟೂ
ಮ್ಯಾಲ ಈ ಉರಿಯೋ ಸೊಳ್ಳನು ಇಟ್ಟೂ...

ಈರಿಯು ಆಡಾಡ್ತ ನೋಡುತಲಿ
ತನ್ನ ಕ್ರಿಯಾವ ಕಲ್ತಿರುವ ರೀತೀಗ
ತೂರಮ್ಮಗ ತಲದೂಗುತಿರಲು
ಈರಿಗದು ಆನಂದ್ವ ಗೆದ್ದಂಥಾಯ್ತು.

ಆಹಾರದುಂಬಿ ಮಿಗಿಲಾಡುತ್ತಿದ್ದ ತಾಂಬಟ್ಟಲುಗ
ಈರಿಯು ಹೊಸ ಕುಕ್ಕ ಕವುಚೀ
ಎದ್ದು ಈರಿಯು
ದೂಪದಾರತಿಗ ಕೆಂಡ್ವ,
ಆ ಕೆಂಡದ ಮ್ಯಾಕ್ಕ ದೂಪ್ವ ಹಾಕಿ
ಆ ದೂಪದ ಹೊಗ ದಾಂದೂಂ ಎದ್ದಾಡಲು
ಆ ದೂಪಾರತಿಯನು ಕಯ್ಯ ಜೋಡುಸಿ ಹಿಡುದು
ಕೆಂಡ್ವ ಕೊಟ್ಟ ಒಲೆಗ ಒಂದ್ಸಲ ಆರುತಿ ಎತ್ತಿ
ತನ್ನ ಮುಂದಲೆಯ ನೆಲಕ ಮುಟ್ಟಿಸಿ ಮುಗುದು
ದ್ಯಾವರ ಜಲ ತುಂಬ್ಕಂಡ
ಅರಿಸನದ ದಾರ್ದ ಅರುವೆಗ
ದೂಪಾರತಿ ಎತ್ತಿ ಮುಗುದು ಅಡ್ಡಬಿದ್ದವಳು
ಎದ್ದು ತಾಂಬಟ್ಟಲುಗ ಬಂದವಳು
ದೂಪಾರತಿಯ ಎತ್ತಿ ಮುಗುದು
ಈರಿಯ ಉಸುರು ಬೆವುರಾಡುತ್ತಿತ್ತು.

ಆ ದೂಪಾರತಿಯನು ತಂದು
ದ್ಯಾವರ ಜಲದುಂಬಿದ
ಅರುವೇಯ ಮುಂದಿಟ್ಟು
ಅಡ್ಡಬಿದ್ದು ಎದ್ದೂ

ಆಗ ತನ್ನ ಕರುಳಬಳ್ಳೀಗ ತಲವ ಸವುರೂತ
ಈರಿಯು 'ಕೂಸಾ' ಅಂದಳು.

ಅದು ಕಣ್ಣುಬುಟ್ಟಿತು.
“ವಸಿ ಆಚ್ಗ ಹೋಗಿದ್ದು ಬತ್ತೀನಿ
ಯಾನಾರ ವಟ್ಟಗಿಟ್ಟ ಅಸುದ್ರ
ಆ ಪುಟ್ಟಿಲಿ ಒಂದೊಸಿ ಯಾನ್ನ ಮುಚ್ಚಿಟ್ಟಿವ್ನಿ
ತಿಂದ್ಕ ನನಕಂದಾ” ಅಂದಳು.

ಅದು ತಲ ಆಡಿಸಿತು.
ಈರಿಯಾಗ ತೂರಮ್ಮನಂತೆ ಮರೆಯಾಗಿ ನಿಂತು
ಕಂದನ ಮ್ಯಾಲ ಕಣ್ಗಳ ನೆಟ್ಟಾಗ,

ಇನ್ನೇನ ಇನ್ನರಗಳುಗ ತಡಮಾಡುದರ
ಈ ಸಣ್ಣ ಹೊಟ್ಟಾಕರುಳಾ
ಆ ದೊಡ್ಡಹೊಟ್ಟಾಕರುಳೇ ತಿಂಬುವಂತಾಡಲು
ಆಗಲೂ ಅವ್ವ ಬಾರದಿರಲು
ಈರಿಗಂಡು ತನ್ನ ತಲ್ವ ಎತ್ತಿತು.
ಆ ತಲಯ ಎತ್ತಾದ ಈರಿಯ ಗಂಡುವು
ಎದ್ದಿತು ಕೂತಿತು.

ಆ ಎದ್ದೂ ಕೂತೂ ಆಗ ಈರಿ ಗಂಡೂಗ
ಆಲಿಸಿದ್ದ ಅವ್ವಾನ ದನಿ ಬಂದೂ,
ಬುಟ್ಗಂಡು ಕಣ್ಣೊಕಿವೀಯಾ
ತವೆಯೂತ ಪುಟ್ಟೀಯ ಬಳಿ ತಾ ಬಂದೂ,
ಆ ಪುಟ್ಟೀಯ ತನ್ನೇಡೂ ಕಯ್ಯ ಬಲದಲಿ
ಎತ್ತಿದಂಥ ಅದರ ಉಸುರುಗ ಸುಸ್ತಾಯ್ತು.
ಆ ಸುಸ್ತುಗು ಆ ತಾಂಬಟ್ಟಲುದುಂಬಿದ ಸಾಮ್ರಾಜ್ಯವು
ಆನಂದ್ವ ತುಂಬಿತು.
ಆ ಇದ್ದ ಕಣ್ಣುಗಳು ಆ ಇದ್ದಷ್ಟೂ ಅಗಲವಾಗಿ
ಅಗಲಾದ

ಕಣ್ಣೊಗ ಆ ಸಾಮ್ರಾಜ್ಯದ ಮ್ಯಾಲ
ಎಲೆಯನು ಹಾಸ್ಕಂಡೂ
ಅದರ ಮ್ಯಾಲ ಕೂತ್ಗಂಡೂ
ಉರಿಯುತವಳೆ ಜೋತಮ್ಮ !

ಇನ್ನೂ ಕಿತ್ತೂ ಅಗಲವಾತು ಕಣ್ಣು
ಆ ಬೆವುರು ಮಯ್ಯಿಂದ ಎಲ್ಲಿತ್ತೊ ಬೆವುರೂ
ಕಿತ್ತು ಚೆಲ್ಲಾಡ್ತು ಬೆವೂರು.
ಆ ಹೈದನು ಕಣ್ಣಾಗಿ ನೋಡ್ತ
ಬೆವೂರು ಕಿತ್ತೂ ಚೆಲ್ಲಾಡ್ತ
ತಾಂಬಟ್ಟಲುದುಂಬಿದ ಆನಂದವು ಆ ಹೈದನ ಕಣ್ಣೊಗ ತುಂಬೂತ.
ಕಣ್ಣೊಗ ತುಂಬಿದಾನಂದವು
ಆ ಸರೀಲಕು ತುಂಬೂತ.
ಆನಂದಾವು ಆ ಹೈದನ ಮೊಕವಾಗಿ,
ಅದೇ ಉಸುರು ಹಿಡ್ದು ನಿಂತ
ಅವ್ವತೂರಮ್ಮಜ್ಜೀರ ನೆಟ್ಟಿದ್ದ ಕಣ್ಗಳಗೂ ತಲುಪೂತ
ಇದರಂತೆ ಅದಾಗುತ
ಆ ಸರೀಲಗಳಲ್ಲೂ ಆನಂದವು ಆಡುತಾ

ಆ ಆನಂದಕ
ಈ ಮುಂದಲ ಸಾಮ್ರಾಜ್ಯವ
ಅದಾವ ಬಗೆಯಲಿ ಉಣ್ಣಬೇಕೋ ಉಡಬೇಕೋ
ಅದರ ಕಣ್ಣುಗಳ ಅಗಲವೋ ಅದೆಸ್ಟೊ
ಅನುಭೋಗಿಸಲು ತ್ರಾಣವಿಲ್ಲದ ಆ ಸರೀಲವು ನಡುಗೂತ
ಆ ನಡುಗೂವ ಬೆರುಳೂವು ಬಾಡ ಉದುಕಾಕ ಅದ್ದಾಲು
ಬಾಡ ಉದುಕಾದ ಬೆರುಳಾಗ ನಾಲುಗವ ತಲುಪಾಲೂ
ಈ ನಾಲುಗವು ನೆಕ್ಕಂಡು ಆ ಬೆರುಳ ಪಾಯಸಕ ಕಳುಸಾಲೂ
ಅಂಟು ಬಂದಂಥ ಪಾಯಸವ ಅದು ನಗುನಗುತ ನೆಕ್ಕಂಡೂ
ಈ ಗುಲ್ಕಣ್ಣುಗ ಬೆರುಳ ಕಳ್ಸಿ ಅದನೀಗ ತರುಸ್ಕಂಡೂ

ಆ ಬಂದಂಥ ಗುಲ್ಕಣ್ಣ ನೊಣ್ಕಂಡೂ ಮುಂದಾಕ
ಈ ಈಲಿ ಗುಂಡ್ಯಾಕಾಯ ತರ್ಸಿ ಅದ ಚೀಪ್ಗಂಡು ಆಮ್ಯಾಲ
ಆಗ ಆ ಮೂಳಾಲೂ ಜೀವಾವು ಚಂಚಾರ ಕೈಗೊಂಡೂ
ಮುಂದೇನು ತಿಂಬುವುದೋ ಮುಂದೇನೂ
ಅರಿವಾಗದಿರಲಾಗ

ಅರಿವಾಗದಿರಲಾಗ
ಆ ಸರೀಲವು ತನ್ನ ಅರಿವ ಕಳ್ದುಕೊಂಡೂ
ಕಳ್ದುಕೊಂಡ ಆ ಸರೀಲವು ಒಕ್ಕಡ ವಾಲ್ಕಂಡು ಬಿತ್ತು
ತೂರಮ್ಮ ತಡಕಾಡುತ ಧಾವಿಸಲು
ನೋಡ್ತ ಈರಿಯು ನೋಡುತ್ತ
ಹಾಗೆಯೇ ನೋಡ್ತ ನಿಂತಿದ್ದಳಲ್ಲಾ ನಿಂತಳು.

ಕಾಯುತ್ತಿದ್ದಂತೆ ಸಾವೂವು
ಆ ಹೈದನ ಮೂಳ್ಗಳು ಬಗೆಬಗೆಯ ತಿಂದು
ಆ ಮೂಳಲೂ ವಸಿ ರಸವಾಡುವುದ
ಕಾಯುತ್ತಿದ್ದ ಸಾವೂವು
ಈಗ ಆ ರಸವ ಚೀಪ್ಕಂಡು ನಡೆದಿತ್ತು.

ಆ ನಡೆವಾಗ ಸಾವೂವು,
ಆ ಮೊಕದಲ್ಲುಂಟಾಗಿದ್ದ ನಗೂವ
ತಾಂಬಟ್ಟಲುದುಂಬಿದ ಸಾಮ್ರಾಜ್ಯವು
ಆ ಕಣ್ಣೊಗ ಇಳ್ದೂ
ಈರಿ ಹೈದನ ಮೊಕವಾದ ನಗೂವ
ಬೇಕಂತಲೇನೊ ಅದು ತಕ್ಕಂಡು ಹೋಗದೆ
ಆ ನಗೂವ ಆ ಮೊಕದಲ್ಲೆ ಉಳುಸಿ
ಅದು ಆ ಅರಳೀದ ಆ ಕಣ್ಣೂಬಾಯ ಮುಚ್ಚಿಸಾದೆ
ನಡೆದಿತ್ತೂ ಆಗ

ಆ ಬಂದವರು ಯಾರ?
ಹೋದವರು ಯಾರ?
ಯಾರೊ ಬಂದರು
ಯಾರೊ ಆ ಮೂಳ್ವ ಗೋರ್ಕಂಡರು
ಯಾರೊ ಆ ಮೂಳ್ಗ ತಾನ ಮಡಿ ಮಾಡಿಸಿದರು
ಯಾರೋ ಹೊತ್ಕಂಡರು
ಹೆಗಲು ಬದುಲುಸ್ತ ಯಾರಾರೊ ನಡದರು
ಯಾರೋ ಹೂತರು
ಯಾರೋ ಹೂತು ಬಂದರು!
ಬಂದವರು ಯಾರೋ
ನಗುಲೇಪಿಸಿದ ಮೊಕದ ಈರೀಯ ಮುಂದುಕ
ಜಲ ತುಂಬಿದ ಕಳಸ ಇಟ್ಟರು
ಯಾರೋ ಆ ಕಳಸಕ ಊದುಬತ್ತಿ ಹಚ್ಚಿದರು
ಹೊಗವು ತೇಲುತಾಲಿರಲು
ಯಾರೋ ಕಳಸದ ಪಕ್ಕದಲ್ಲಿ ಕನ್ನಡಿ ಇಟ್ಟರು.

ಆ ಕನ್ನಡಿಯು
ಈರೀಯ ಆ ನಗೂವ ಲೇಪಿಸಿದ ಮೊಕವ
ಆ ಕನ್ನಡೀಲಿ ಆ ನಗೂವ
ಕಾಣೀಸೂತಲಿತ್ತು ಆ ನಗೂವ.

* * * *

## ೧೨ ಆ ಗಾರಸಿದ್ಮಾವಗ ಬಿದ್ದ ಏಟುಗಳನ್ನು ಬೀಜ್ವಮಾಡಿ ನೆಟ್ಟು

ಆ ಗಾರಸಿದ್ಮಾವಗ ಬಿದ್ದ ಏಟುಗಳನ್ನು
ಬೀಜ್ವಮಾಡಿ ನೆಟ್ಟು
ಊರಲ್ಲಿ ದಲಿತ ಸಂಘವ ಚಿಗುರಿಸತಲಿದ್ದ
ನಾಗರಾಜುವಿನಿಂದ ತಪ್ಪಿಸಿಕೊಳ್ಳಲೇನೊ ಎಂಬಂತೆ
ಆಗ ಇನ್ನೂ ಕೊಲೆಯಾಗದ ಚನ್ನನು
ಕೈಲೊಂದು ಹಳ ಇಂಗ್ಲೀಷ್ ಪೇಪರ್ ಹಿಡ್ದು
ಬಸ್ಸಗ ಕಾಯ್ತ ಅರಳೀಮರದ ಕೆಳೂಗ ನಿಂತಿದ್ದನು.

ಆ ಬಸ್ಸು ಶ್ರಿಲಕ್ಷ್ಮಿಗೇ ಕಾಯ್ತ
ಚನ್ನಂಗ ಅಆಇಈ ಕಲಿಸಿದ
ಗುರು ಮಾಧ್ವಾಚಾರ್ಯರು
ಪಿಂಚುಣಿ ಲಕ್ಷ್ಮಿ ತರಲೋಸುಗ
ನಂಜಲಗೂಡ್ಗ ಹೋಗಿ ಬರಲಾ ಕಾರಣವಾಗಿ
ಒಂದು ಕಾಲು ಊರಬಹುದಾದಷ್ಟು ಇರೊ ಪಿಂಚುಣಿ ಮ್ಯಾಲ
ತಮ್ಮ ಆ ಒಂದು ಕಾಲನ್ನು ಊರಿ
ಉಳುದ ಆ ಪಿಂಚುಣಿ ನೆಲದಲ್ಲಿ
ಒಂದು ತುದಿ ಇಡುವಷ್ಟಿದ್ದ ತಳದಲ್ಲಿ
ತಮ್ಮ ಛತ್ರಿ ತುದಿಯ ಇಟ್ಟು
ಹೆಗಲ ಮ್ಯಾಲ ಮೂವತ್ತಕ್ಕೆ ನಾಕು ಕಮ್ಮಿಯ
ಮೋಹಕ ಮಗಳು ಭಗವತಿಯ ಭಾರವ ಹೊತ್ತು
ಭಗವತಿಯ ಮಾಟವಾದ ಬೆರುಳಾಡಿ

ತಂದೆಯ ಹರಿದ ಬಿಳಿಬಟ್ಟೆಯ ಹರುಕು
ಅರಿವಾಗದಂತಿರಲು
ಬೆಳ್ಳಗೆ ತತ್ತರಿಸೊ ನಗೂಲಿ
ಆ ಅರಳೀಮರದ ಕೆಳೂಗ ಅವರೂ ನಿಂತಿದ್ದರು.

ಆಚಾರ್ಯರ ಮುಖದ ಬಿಳಿಗೂದಲ್ಗಳು
ಚಾಚ್ಕಂಡು ಬಿಸಲು ಕಾಯ್ತ
ಅವರ ಈಗಲ ಕಣ್ಣು ಕಿವಿಯು ನೆಟ್ಗ ನಿಂತು
ಯಾಕಂದರ ಅವರ್ಗ
ಬೇಕಾದಾಗ ಕೇಳಿಸೋ ಕಿವಿಯು ಬೇಡವಾದಾಗ ಕಿವುಡಾಗಿ
ಬೇಕಾದಾಗ ಕಾಣಿಸೋ ಕಣ್ಣು ಬೇಡವಾದಾಗ ಕುರುಡಾಗ್ತ
ಸ್ಥಿತಿಗೆ ಅನುಗುಣವಾಗಿ

ಈಗ ಕಾಣೋ ಅವರ ಕಣ್ಗಳ ಮುಂದೆ:
ಶಿಷ್ಯನಾದ ಚನ್ನನು
ಏನೋ ಅಚಾನಕ್ ತಮ್ಮನ್ನು ನೋಡದೆ ನಿಂತಿದ್ದಾನೆ ಅಷ್ಟೇ
ನೋಡಿದ್ದಲ್ಲಿ ಅವನೆಂದಾರು ಹಾಗೆ ನಿಲ್ಲುತ್ತಿದ್ದನ್ಯೆಃ
ಅಂಥವನಲ್ಲಾ ಅವನು.
ನೋಡಿದ್ದಲ್ಲಿ ಎರಡೂ ಕೈಗಳನೂ ಜೋಡ್ಸಿ
ನಮ್ರವಾಗಿ ತಲೆಬಾಗಿಸುತಲಿದ್ದ ಚನ್ನನಲ್ಲವೆ?
ಆತ ಹೊಲೆಯನಾದರೂ ಅತ್ಯಂತ ಯೋಗ್ಯನಲ್ಲವೆ?
ಆತ ಆ ಹೊಲೆ ಜಾತೀಲಿ ಹುಟ್ಟಬಾರದಿತ್ತಲ್ಲವೆ? ಆತ...

ಆತ ಚನ್ನನು ನಾಕಕ್ಷರ ಕಲ್ಸಿದ್ದ
ಗುರುವಿನ ಕಣ್ತಪ್ಪಿಸಲು ಕಾರಣವು, ಒಂದು–
ಗುರೂಗ ಬಸ್‌ಚಾರ್ಜನ್ನು
ತನ್ನ ಸಾಲದ ದುಡ್ಡಲ್ಲಿ ಹಾಕಬೇಕಾಗಿ ಬರೋ ಪರಿಸ್ಥಿತಿಯು
ಹಾಗೂ ನಾಯಕಸಾನಿ ಸಂಸ್ಕೃತಳ ಎಂಜಲುಗಳಾದ
ಶಷಗಳು ನಾಲುಗದಲ್ಲಿ ಆಡದ ಭೀತಿಗಾಗಿ!

ಇರಲು ಆ ಮನೆಹಾಳ ಬಸ್ಸು ಬಾರದಿರಲೂ ಇನ್ನೂ
ಆಗ ಆಚಾರ್ಯರು ಚನ್ನನ ದಿಕ್ಕುಗ ದನಿ ಏರಿಸಿದವರಾಗಿ
"ಏನಯ್ಯಾ ಚನ್ನಃ ಸಪ್ಪರ್ ವೋವರ್ಯೆಃ" ಅಂದರು.
"ಆಯ್ತು ಸಾ" ಅಂತ ಚನ್ನನು ನಾಲುಗುವ ಪಳುಗುಸ್ತ
ಪಳುಗುಸ್ತ ಬಂದನು.

"ಏನಯ್ಯಾ ಚನ್ನಃ ಹೇಗೆ ನಡೆಯುತ್ತಾ ಇವೆ
ಕೆಲ್ಸಕಾರ್ಯ, ಕ್ಷೇಮವೋ?"

"ಕ್ಷೇಮ ಸಾ"

"ಅಲ್ಲಪ್ಪಾ ಚನ್ನಃ ಈ ಬಸ್‌ಗೆ ಬಂದಿರುವಂಥಃ
ಕೇಡನ್ನಾರು ನೋಡು. ನಾನು ಬಂದೇ ಗಂಟೆ ಮೀರಿತಲ್ಲಯ್ಯಾ!"
"....."
"ಹಾಗೇ ಇನ್ನೊಂದು ಮಾತು ಚನ್ನಃ ಆ
ಕಂಡಕ್ಟರನು ಇದ್ದಾನಲ್ಲಾ ಅವನಿಗೆ ಹೇಳೂ... ಏನೆಂದರೆ
ನಾನು ಪಿಂಚಣಿ ತಗೊಂಡು ಪುನಃ ಹಿಂದಿರುಗುವಾಗ ಆ ಕಡೆ
ಚಾರ್ಜನ್ನೂ ಕೊಟ್ಟು ಹಾಗೆಯೇ ಈ ಕಡೇದು ಚಾರ್ಜನ್ನೂ
ಉಪಾದ್ಯಾಯರು ಆಗಲೇ ಕೊಡುತ್ತಾರೆ ಅಂತ. ಇದು
ಆಗಬಹುದಲ್ಲಃ?"

"ಈ ಕಡೇದ ನಾನೇ ಹಾಕತ್ತೀನಿ ಬುಡಿಸಾ..."

"ಅಯ್ಯಯ್ಯೋ ಉಂಟೇನಯ್ಯ ಚನ್ನಃ, ಪುನಃ
ನೀನು ಸಿಗುವುದು ಅಮಾವಾಸ್ಯೆಗೊ ಅಥವಾ ಪೂರ್ಣಿಮೆಗೋ!
ಋಣಭಾರ ಏಕಪ್ಪಾಃ? ಈ ದೇಹ ಋಣಭಾರ ತಡೆಯಲಾರದಪ್ಪಾಃ!"

"ಪರವಾಗಿಲ್ಲ ಸಾ"

"ಅಂದ ಹಾಗೆ ಚೆನ್ನಃ ಆ ನಮ್ಮ ಪಕ್ಕದ
ಮನೆಯ ಶಾಸ್ತ್ರಿಗಳ ಮಗಳು ಸಾವಿತ್ರಿಃ ಮೈಸೂರು
ಪಟ್ಟಣದಲ್ಲಿ ಇದ್ದಾಳಲ್ಲಃ ಅವಳ ಬಗ್ಗೆ ಕೇಳಬಾರದ್ದ
ಕೇಳಿದೆನಯ್ಯಃ ನಿಜವೇನಪ್ಪಃ?"

"ನಿಜಸಾ ನಮ್ ಜಾತ್ಯವರ ಮದ್ವಾಗಿಮಡಿಕಂಡು
ಈಗೊಂದು ಕೂಸೂ..."
"ನಿಲ್ಸಪ್ಪಃ ಚನ್ನಃ ನಿಲ್ಸಯ್ಯ ಚನ್ನಃ
ಆಗೇ ಬಿಟ್ಟಿತ್ಯೆಃ? ರಾಮರಾಮಾಃ ಕೇಳುವುದು ಉಂಟ್ಯೆ?
ನಾನು ನನ್ನ ಈ ಕಿವಿಗಳಿಂದ ಕೇಳಲಾರೆನಪ್ಪಃ ಉಂಟ್ಯೆ?
ಈ ಲೋಕ ನಡೆಯುತ್ಯೆ?"

"ಊ್ಞ ಸಾ"

"ಇಲ್ಲಾ ಚನ್ನಃ ನನಗ್ಯಾಕೋ ಡೌಟಪ್ಪಃ
ಅಂದಹಾಗೆ ಚೆನ್ನಃ ನಾನು ನಿನಗೆ ಚೆನ್ನಾಗಿ ಗೊತ್ತಲ್ಲಃ
ನೀನು ಕಂಡ ಹಾಗೆ ನನಗಂತು ಜಾತಿಭೇದವು ಇಲ್ಲಪ್ಪಃ
ನಾನು ನಿನ್ನನ್ನು ಮುಟ್ಟಿಸಿಕೊಳ್ಳಬಾರದು ಅಂತೇನಿಲ್ಲವೋ.
ಆದರೆ ನನಗೆ ವಯಸ್ಸಾಯ್ತು ನೋಡು, ಯಥಾರ್ಥ
ಈ ಇಳಿವಯಸ್ಸಲ್ಲಿ ಪದೇ ಪದೇ ತಣ್ಣೀರು ಸ್ನಾನವು
ಆರೋಗ್ಯಕೆ ವ್ಯತಿರಿಕ್ತ ಅಲ್ಲವೇನಪ್ಪಃ?"

ಅಂತಿರಲು ಆಚಾರ್ಯರು, ಬಸ್ಸು ಬರ್ರೋ ಅಂತ
ಚನ್ನನ ರಕ್ಷಕನಂತೆ ಬರಲು, ಆದರೂ ಮಾತುಗಳು
ಆಚಾರ್ಯರ ಬುಡದವುಗಳಾಗಿರಲು –"ಆ್ಞ ಚನ್ನಃ
ನೋಡಪ್ಪಾ ಒಂದು ಮಾತು, ನನ್ನ ಮಗಳು ಭಗವತಿ
ಇದ್ದಾಳಲ್ಲಃ ಅವಳಿಗೊಂದು ವರ ಯಾರಾದರೂ ನಿನ್ನ
ಪರಿಚಯದಲ್ಲಿ ನಮ್ಮ ಮತದವರು ಯಥಾರ್ಥ ಕಂಡು
ಬಂದಲ್ಲಿ ಹೀಗೆ ಹೀಗೇ ಅಂತ ವಿಚಾರವ ಮುಟ್ಟಿಸು

ಅಷ್ಟೆ. ಅವಳ ಚೆಲುವೇನು? ಅವಳ ಗುಣವೇನು?
ಆಕೆ ಸಾಕ್ಷಾತ್ ನಮ್ಮ ಹಿಂದೂಧರ್ಮ ದೇವತಾ ಸ್ವರೂಪಳಯ್ಯ!
ಅವಳ ಒಂದು ಕಣ್ಣು, ಕಂಡೂ ಕಾಣದಷ್ಟು ಸ್ವಲ್ಪ
ಮಾಲು ಅಷ್ಟೆ. ಮಾಲುಗಣ್ಣು ಅದೃಷ್ಟವನ್ನು ಆ ಪರಮಾತ್ಮನು
ಕೋಟಿಗೆ ಒಬ್ಬರಿಗಲ್ಲವೇನಯ್ಯಃ ನೀಡುವುದು? ಯಾರಾರು
ಸೂಕ್ತರು ಸಿಕ್ಕಲ್ಲಿ ಮರೆಯದೇ ಹೇಳ್ತೀಯಲ್ಲ? ಅ್ಞ
ಮರೆತಿದ್ದೆ ನೋಡು... ಯಥಾರ್ಥ ಅವಳಿನ್ನೂ
ಋತುಮತಿಯಾಗಿಲ್ಲವಪ್ಪಃ!"

ತಂದೆ ಮಾತಿನಂತೆ ಋತುವತಿಯಾಗದ ಆ ಹಿಂದೂಧರ್ಮ
ಸ್ವರೂಪಿಣೀ ಭಗವತಿಯು ಭಗದ ಆ ಧರ್ಮಕ್ಕನುಗುಣವಾಗಿ
ಮುಟ್ಟಾಗಿ ಒಂದ್ಸಲ ಆಚ ಮಲುಗಿರುತಾ ಆ ನಿದ್ದಾವು
ತೂಕಡಿಸೋ ವ್ಯಾಳದಲ್ಲೂ ಅವಳಿಗ್ಯಾಕೋ ನಿದ್ದಾವು ಕಣ್ಣುಗ
ಹತ್ತದೆ ಇರುತಾ ಆ ಚಣದಲಿ ತನ್ನ ಪಂಚಾಂಗದ
ಪ್ರಕಾರವಾಗಿ ಬಂದು ಮರೆಯಾದ ಅಮಾಸನನು ಕಂಡು
ಭಗವತೀಗ ಉಸುರು ನಿಂತದು ಅಂದುಕೊಂಡಿತು– "ಎಲಾ
ಇಲ್ಲಿಯವರೆಗೂ ಬಂದ ಚಿಃ ಹೊಲೆಯನ ಕೊಬ್ಬೇ. ಚಿಃ ಚಿಃ
ಆ ಹೊಲೆಯನ ನೀಚಕಾರ್ಯವೇ ಚಿಃ ಸೂರ್ಯನಿಲ್ಲದೆ
ಹೊಲೆಯನ ನೆರಳು ಸೋಂಕದೆ ಬದುಕಿದೆನಲ್ಲಾ..." ಅಂತಂತ
ಆ ಭಗವತೀಗ

ಬೆಳಗಲು ಜಾಮದ ತೂಕಡಿಕೇಲಿ
ಅಮಾಸ ಅಪ್ಪಿಕೊಂಡಂತಾಗಿ
ಬೆಚ್ಚೆದ್ದು
ಸಖೇದ ಆಶ್ಚರ್ಯದಲಿ ಕೂತಳು.
ಅವಳ ಮನಸ್ಸೋ ಕುಪಿತವಾಗಿರಲು
ಆ ಮಯ್ಯೋ ಪುಳಕಿತವಾಗಿರಲು
ಆಗ ಎಲ್ಲವೂ ಮಾಯವಾಗಿ ಶುಕ್ರಗ್ರಹವು
ಮಾತ್ರವು ಆ ಒಂದು ಕಾಣುತ್ತಿತ್ತು.

ಇಡೀ ದೇಹವ ಕಣ್ಣು ಮಾಡಿ
ಭಗವತಿಯು ಶುಕ್ರಗ್ರಹವ ನೋಡುತ್ತ
"ಅಲ್ಲವೆ? ಈ ಮೂರುದಿನ ಇದೂ ಹೊಲೆಯು
ಆತನೂ ಹೊಲೆಯನು
ಎರಡೂ ಹೊಲೆಯಾಗಿರುವ ಪ್ರಸಂಗವಿರುವಾಗ
ಹೊಲೆಗೆ ಹೊಲೆಯು ಕೂಡಿದರೆ ಆಗುವ ಅಧರ್ಮ ಅದಾವುದು?"
ಎಂಬಾ ಆ ಧರ್ಮಸೂಕ್ಷ್ಮತೆಯಲ್ಲಿದ್ದ ಪ್ರಶ್ನೆಯನು
ಅನಂಗನು ಬಂದು ಚಿವುಟಿ ಹಾಕಿದನಲಾ!

* * * *

## ೧೩. ಅದಾಗಿ ಇದಾಗಿ ಈರಿ ಹೈದನ ಜೀವವು

ಅದಾಗಿ ಇದಾಗಿ
ಈರಿ ಹೈದನ ಜೀವವು
ಹಸುರು ಬೇಲಿ ಮ್ಯಾಲ
ಹನ್ನೇಡು ಜಿನಗಂಟಾನೂ ನೆಗ್ತ ಕೂತಿದ್ದು
ಆಮ್ಯಾಲದು ತನ್ನ ದಾರಿ ಹಿಡುದುದಾಗಿ

ಅದಾಗಿ ಮೋಕಪ್ಪಲಿ
ಚನ್ನನ ಕೊಲೆಯೂ ಕಳ್ದು ತಿಳಿಯದಾಗಿ

ಆಗಿ
ಆಮ್ಯಾಲ ತೂರಮ್ಮನ ಹಟ್ಟೀಲಿ
ಕೆಂಪೀಯು ಹೆತ್ತಂಥ
ಮಾಂಸಾದ ಮುದ್ದೆಯು
ಕಿರ್ರ್ರೋ ಅಂತಿದ್ದಂತೆ
ಆ ಕಿರ್ರ್ರೋ ಅಂಬುದ ದ್ಯಾನುಸ್ತ
ಮೂರುಕಾಸು ನುಗ್ಗುಸೊ ಕಿವಿ ತೂತ್ಗ
ಕೆಂಬಣ್ಣದ ವಾಲಗರಿ ಹಾಕ್ಕಂಡೂ
ಆ ಕಿವಿ ಮ್ಯಾಗಲ ಚೊಟ್ಟಗ
ಚಿನ್ನದ ನೀರು ಹುಯ್ಸಿ ಮಾಡ್ಸಿದಂಥ
ಮೇಟಿ ಕೊಳವನಿಗ ಧರುಸಿದ್ದಂಥ ತೂರಮ್ಮನ ಕಿವಿಗದು ಮುಟ್ಟಿತು.

ಆ ಚಣದಲವಳು
ಒಳ್ಳೆ ಗಳುಗಾಲಿ ಹಿಡ್ದು ಆ ಜೀವಾಡ್ತುಸ್ತಿದ್ದ ಆತಹುಳ್ವಾ
ತತರಪಿತರನ ನೆಲ್ಕ ಇಟ್ಟು

ಎಡಗೈ ಹೆಬ್ಬೆಟ್ಟನ್ನು ಅದರ ಸರೀಲದ ಮ್ಯಾಗಿಟ್ಟು
ಅದುಮ್ತ ಚಿಮುಕೀ
ಆ ಸರೀಲದಿಂದ ಆ ಅದರ ಜೀವ್ವ ತಗುದೂ–
'ಈ ಜೀವ್ವೇ ಆ ಜೀವಕ ನಡೀ' ಅಂತಂತ ಮೂರ್ಸಲ
ತನ್ನ ಸರೀಲವ ಒಂದು ಮನಸ್ಸುಮಾಡೀ
ಅದ ಒಂದು ದುಡದಲ್ಲಿ ನಿಲ್ಸೀ
ತನ್ನ ಕಪ್ಪುಹಲ್ಲುಗಳ ಬಿಗಿಲಿ–
'ಈ ಜೀವ್ವೇ ಆ ಜೀವಕ ನಡಿ' ಅಂತಂತ ಮೂರ್ಸಲ ಅನ್ತ
ಅದೇ ದುಡದಲಿ ಬೆನ್ನು ಎತ್ತಿದವಳಾಗಿ ಎದ್ದು ತೂರಮ್ಮ
ದ್ಯಾವಿಗ ಕಾಣ್ಕಕೊಟ್ಟು
ವಾದಿಸಿ ತಂದಿದ್ದ ನಾಗಬೆತ್ತ್ವ ಬಲಗಯ್ಗ ತಕ್ಕಂಡು,
ಕಂಕುಳಲ್ಲಿದ್ದ ಮರುಜವಳಿ ಕಡ್ಡೀಯ
ಆ ಕಂಕುಳಲಿ ಬಿಗಿಹಿಡ್ದು,
ಆಗತಾನಾದ ಕೂಸಾದಲ್ಲಿಗ
ಬಂದಳು ತಾ ಉಸುರಾಗಿ

ಈಗ ತನ್ನ ರಗುತಾವ ಕೂಸುಗ ಹಂಚಿ
ಬಿಳುಚೋದ ಕೆಂಪಿಯೂ
ಆ ಅವುಳ ತುಟಿ ಒಣಗಿ
ಅವಳು ಮಲುಗಿದ್ದಳು.
ಅಲ್ಲಿ ವಕ್ಕಳಬಳ್ಳಿಯ ಕುಯ್ದು ಕುಡುಗೋಲು
ರಕುತವಾಡುತ ಇನ್ನೂ
ಬಳ್ಳಿಯಿಂದ ಕುಡಿ ಕತ್ತರ್ಸಿ
ಎರಡು ಜೀವಾವ ಮಾಡಿತ್ತು.

ಅಲ್ಲುಗ ಬಂದಂಥ ತೂರಮ್ಮನು
ಆ ಮಾಂಸಾದ ಮುದ್ದೂಗ
ಹಿಡಿದಂಥ ನಾಗಬೆತ್ತದಲ್ಲಿ ಮೂರೇಟು ಸವುರಿದಳು
ಮೂರೇಟು ಸವುರೀದಾ ತೂರಮ್ಮನಾಗ

ಆ ನಾಗಬೆತ್ತಕ ಸರಣೆಂದು,
ಕಂಕೂಳ ಬಿಗಿ ತಗುದು ತೂರಮ್ಮ ಹಿಡಿದಾಳು ಏನನ್ನು?
ಮರುಜವುಳೀ ಕಡ್ಡೀಯ!

ಆ ಮರುಜವುಳಿ ಕಡ್ಡೀಯ ಹಿಡಿದಂಥ ತೂರಮ್ಮನಾಗ
ಆ ಜೀವಾಡೋ ಕಂದನಿಗ ನೀವಳಿಸಿ ಸವುರೂತ
ಆ ಕೂಸದು ಕಾಲ್ಬೆರಳೊ ಕೈಬೆರುಳೋ
ಹವಳವೋ ಅವು ಮುತ್ತೊ!
ಒಂದು ಉಸುರಾಗಿ ಬಂದ ತೂರಮ್ಮಗ
ಉಸುರು ಬಂದಂತಾಗಿ,
ಅಲ್ಲಿ ತನ್ನೇಡು ಕಂದಮ್ಮಗಳ ಮುಂದೂ
ಉಸುರಾಗಿ ಕೂತವಳು
ಉಸುರಾಡ್ತ ಆನಂದವು ಐಭೋಗದಲಿ ಇರುವಾಗ

ಕೂಸು ಹುಟ್ಟೋದಕು
ಮೂರ್ಡಿನಕ ಮುಂಚಿತವಾಗಿ
ಸೈಕಲ್ಲೂ ಆ ಸೈಕಲ್
ಕ್ಯಾರಿಯರ್ನಲ್ಲಿ ಸಕ್ಕರ ತುಂಬಿದ ಬ್ಯಾಗಲ್ಲಿ ಇಳಿದಿದ್ದ
ಕಿಟ್ಟಯ್ಯನಿಗಾಗ ಗಂಡ್ಹೊಗಸಾದ ಸಂಭ್ರಮವು
ತುಳುಕಾಡ್ತ ತುಂಬಿ
ಆ ಸೈಕಲ್‌ನಿಗ ತೀಡ್ತ ತೀಡ್ತಾ
ಅದ ಥಳಥಳ್ವ ಮಾಡ್ತ ಮಾಡ್ತಾ
ಅದು ಥಳಗುಟ್ವಾದ ಮ್ಯಾಲ
ಇನ್ನೇನೂ ಮಾಡಲೂ
ಇನ್ನೆಂತೂ ಮಾಡಲೂ
ಕಯ್ಯು ಬಂದರೆ ಕಾಲು ಬಾರದೂ
ಕಾಲು ಬಂದರೆ ಕಯ್ಯುಬಾರದು
ಅಂತಾಗಿತ್ತಲ್ಲ!
ಆಗ ಕಿಟ್ಟಯ್ಯನು

ತೊಲಮ್ಯಾಕ್ಕ ತಂದೇರಿಸಿ ಇಟ್ಟಿದ್ದಂಥ
ಆ ತುಂಬಿದ ಸಕ್ಕರ ಬ್ಯಾಗನ್ನೀಗ
ನಿಗುರಿ ಹಿಡ್ದು ಆತು ನೆಲಕ ಇಳುಸಿದವನು ಮಾಡುತಲಿದ್ದ
ದಡಗು ಬಡುಗು ಸದ್ದುಗಳ ಅರ್ಥವು ನಡುದು ಬಂದು
ಕೆಂಪೀ ಕಿವುಗ ಪಿಸುಗುಟ್ಟಿತು.
ಆ ಒಣಗಿದ ಗಂಟಲು, ಅಂಗಳು, ನಾಲುಗ, ತುಟಿಗ
ಜಲ ಬರ್ಸಕಂಡು ಕೆಂಪಿಯು
ತನ್ನ ಮುಂದ ಕೂಸಾಗಿ ಕೂತೀರೊ ತನ್ನ ಅವ್ವಗ–
“ಅವ್ವೈ... ಆ ಮೂದೇವಿ
ಬ್ಯಾಗಿನ ತುಂಬಾ ಇರೋ ಸಕ್ಕರನಿಗ
ಒಂದರಳ್ನೂ ಬುಡ್ದೆ ಹಂಚ್ಬುಟ್ಟು ಬತ್ತದ
ಒಂದು ಬೊಗಸನಾರು ಎತ್ತಿಟ್‌ಗ” ಅಂದಳು.
ಈ ಮಾತು ತೂರಮ್ಮಗ ಬೆಚ್ಚೆಚ್ಚರ ಉಂಟುಮಾಡಿ
“ನೀ ತೆಪ್‌ಗ ಮಲಿಕಮ್ಮಿ” ಅಂದಳು.
ಕೆಂಪಿಯು ತೆಪ್ಪಗಾದಳು.

ಆಗ ತೂರಮ್ಮಗ ಅಂಟ್ಕಂಡೇ ಕುಂತಿತ್ತಲ್ಲಾ
ಆ ಚಿಂತ್ಯ
ಅದು ತೆಪ್ಪಗಿತ್ತ?
ಅದು ಮಾತು ತಗೀತು:

“ಇನ್ಯಾನ ಮುದ್ಕೀ... ನಿನ್ ಕೆಲ್ಸ ಆಯ್ತುಲ್ಲಾ!
ಈಗ್ಲಾರುವಿ ನನ್ ಬುಟ್ಬಾಯ?”

“ಯಾನಮ್ಮೀ? ನೀನು ಬೋ ದೊಡ್ಮನಸಿ ಅಂತ
ಸುಮಾನ್ಕ ನಿನ್ ಕಟ್ಟಾಕ್ಕಂಡಿದ್ದನಾ ನಾನೂ...”

“ಅದ್ಕೂವ ಯಾಕ ಈಪಾಟಿ ಜಬರದಸ್ತು
ಮಾಡೀಯ ತಕ್ಕ...!”

“ಮತ್ತ ಒಗಟ ಅದೂ... ಬುಡುಸಿ ಹೇಳಾಕ?”

“ಕೇಳೂ ಅಯ್ಯೋ ಪೆಚ್ಚುಮುದ್ಕೀ ಕೇಳೂ...
ಆ ಇದಿಯಮ್ಮ ನಿಂಗ ಸಿನೇತಗಾರಳಂಗಲ್ವ?
ಅವಳ್ಯಾಕ ನಿಂಗ ಅನ್ನಾಯ ಬಗದಾಳು?
ಇದೇನಿದ್ರೂ ಇದಿಯಮ್ಮ ಹುಟ್ಟಿದ್ ರಾತ್ರಕ
ಹಣಬರ ಬರ್ದುಬುಟ್ಟು ಹೋದ ಮ್ಯಾಲ
ಇದೆಲ್ಲೋ ಅವ್ನ ಮಗಳು ಅವ್ನಲ್ಲಾ
ಆ ರಾಂಗ್‌ಕೋರಿ ಬೆಡ್ಗಿಬೇತೂರಿ ಇದಿದೇವಿ ಅಂಬೋಳೂ
ಅವ್ನ ಯಾನಾರು ಹಣಬರವ ತಿದ್ದಿ
ಹೆಚ್ಚೂಕಮ್ಮಿ ಮಾಡೋಥರ್ವಾಗಿ ಕಾಣ್ತದಲ್ಲಾ...!”

ತೂರಮ್ಮಗ ಕಂಡ್ತು: ಆಹಾ!
ಇದು ಇದಿದೇವಿ ಕೆಲ್ಸವಿಯ!
ಮಂತ್ರಿಸಿದ ದಾರ ಮನಯ ಸುತ್ತಿದ್ದು ಕಾಯ್ವಾಗ
ಹಳಕೆರವೂ ಮಂತ್ರಿಸಿದ ಲಿಂಬಹಣ್ಣೂವಿ
ಬಾಗಲಲ್ಲಿ ಚುಚ್ತ ತಡೆವಾಗ
ಇನ್ನು ಒಳಗ ಈ ತೂರಮ್ಮ ಇರ್ವಾಗ...
ಅದಾವ ಗಾಳಿಗರಾವ್ಗ ತಾನೀಯ
ಒಳಕ ಇಣುಕಿ ನೋಡೋ ಗೋರಂಜ ಇದ್ದೂದು.
ಆಹಾ ಇದೇನಿದ್ರೂ ಆ ಇದಿದೇವಿ ಕೆಲ್ಸವಿಯ
ಆ ಚೆಂಗೂಲಿ ಮೂದೇವೀ...
ನನ್ ಮಗಳು ಕೆಂಪಿ ಥರ ಮಿಷ್ಟಿಕ್‌ಗಾತಿ ತಾನೀಯ ಅವ್ನೂನೂ?
ಅವ್ವನ ಮಾತ ಕೇಳೀಳಾ...?
ಇರ್ಲಿ ಇರ್ಲೀ... ಈ ತೂರಮ್ಮನ ಮುಂದ
ಅದ್ಯಾವ ಸೆತ್ತಕನ
ಮದ್ದಿಲ್ವ ಅದಕೂ?

ಆಗಲಾಗ ತೂರಮ್ಮನು

ಮಾನವರಲ್ಲದವರು ಒಳಗಣ್ಣುಗ ಕಾಣ್ವ ಅಂಜನವ
ಕಣ್ಣುರೆಪ್ಪಗ ಎಳ್ದು
ದಿಟ್ಟುಸ್ತ ಪರಾಣ ಕಾಯ್ವಂಥ ಆ ರಾತ್ರಗ
ಅದೇನೇನೂ ಮಾಡಬೇಕೊ ಆ ಕೆಲ್ಸ ಕಾರ್‍ಯವ ನಿಚ್ಚಯಿಸಲು
ತನ್ನ ಪಕ್ಕದಲಿ ಸಪ್ಪಗ ಕೂತಿದ್ದ ಚಿಂತ್ಯಗ ವಹಿಸಿ
ತಾನು ಕಂದನಿಗ ಕಣ್ಣಿಟ್ಟು ಕೂತಳು.

ದಿಲ್ದಾರನಾದ ಕಿಟ್ಟಯ್ಯನು
ಸೈಕಲ್ಲ ಥಳಗುಟ್ಟುಸ್ತ ಕೇರಿ ತುದಿ ತಲುಪಿ
ಕೇರ್‍ಗ ಕಾಲಿಟ್ಟಾಗ ಮೊದುಲ್ಗ ಸಿಕ್ಕೋ ಜೋಪ್ಡಿ ಮುಂದಾಗ
ರೈಟ್ ಎಬೌಟರ್‍ನಾದನು.
ಆಗಲು,
ಅವು ಕಚ್ಚಿಕಡಿಯೋ ಇರುವೆಯೋ
ಅಥ್ವಾ ಅವು ಏನಾರು ಹೈಕಳೋ ಅಂಬುದ
ಬಿಚ್ಚಿಬಿಸುಡಲಾಗದ ಆ ಸಮೂಹವು
ಆ ಸೈಕಲ್ಲುಗು ಆ ಕಿಟ್ಟಯ್ಯಗು ಆ ಸಕ್ಕರಗು ಘೇರವೋ ನಡೆಸಿ
ಈ ಕಿಟ್ಟಯ್ಯನು ತನ್ನ ಏಡು ಬೆರುಳ ಮಡುಚಿ
ಉಳುಕ ಮೂರು ಬೆರುಳ ಬ್ಯಾಗ್ಗ ಎಟ್ಟಿ
ಅಲ್ಲಿಂದ ಸ್ಟಯಲಾಗಿ ಸಕ್ಕರವ ತಗದವನಾದರ ಸಾಕೂ
ಆ ಸಕ್ಕರ ಬೆರುಳುಗ ಮುತ್ತುತ್ತಿದ್ದ
ಕೇವಲ ನಲವತ್ತಾಗುವ ಆ ಹೈಕಳು
ನೂರಕ್ಕೂ ಮಿಗಿಲಾಗಿ ಕೈಚಾಚ್ತ
ಪವಾಡ್ವ ಮಾಡ್ತ
ಆ ಚಾಚೆಟ್ಟುತ್ತಿದ್ದ ಯಾವುದಾದರೂ ಒಂದು ಕಯ್ಗ
ಕಣ್ಮುಚ್ಚಿ ಬುಡುವುದರೊಳಗ
ಈ ಸಕ್ಕರವ ರವಾನಿಸಿದರ ಮಾತ್ರ
ಈ ಕಿಟ್ಟಯ್ನು ಆ ಮೂರು ಸಕ್ಕರದ ಬೆರುಳಾಗಲೀ
ಚಾಣಾಕ್ಷವಾಗಿ ಮಡುಚಿದ್ದ ಉಳುಕಾ ಏಡು ಬೆರುಳಾಗ್ಲಿ
ಅಥವಾ ತಳಂಗು ಬಳಂಗು ಮಾಡ್ತ

ಹುಣಸಬೇವ್ನ ಬಿತ್ವ ಅಳ್ದು ಸುರ್ಕತ್ತಿದ್ದ
ಅವನ ಹಸ್ತವಾಗಲಿ ಬಚಾವಾಗುತ್ತಿತ್ತೇ ಹೊರತು
ಒಂದು ಚಣ ತಡವಾದಲ್ಲಿ
ಅವನ ಹಸ್ತಕ್ಕೇ ಹತ್ತಾರು ಕೈಗಳು
ಜಂಪ್ ಮಾಡ್ತ
ಹೊಡ್ತಕೊಡ್ತ ದೋಚಲಾಗುತ್ತಿತ್ತು.
ಇದು ಅಲ್ಲೊಬ್ಬ ಚುಲ್ಪಾರಿಗ
ಜಂಪ್ ಮಾಡಿಯೂ ಗುರಿಮುಟ್ಟಲು ಆಗದು ಎಂಬ
ಸತ್ಯವ ಅರಿವಾಗಿಸಿ
ಆಗ ಆ ಪತಂಗಪಿಳ್ಳೆಯು
ಆಗಾಗ ಸಂಭವಿಸೋ ಅಂಥ ಒಂದು ಜಂಪ್ ಜರುಗಿದಾಗ
ಆ ಗಾಳಿಬೀಸ್ವ ದಿಕ್ಕುದೆಸ
ಹಾಗೂ ಈ ಜಂಪ್ ಮಾಡ್ದವನ ಬಲ
ಅವೆರಡನ್ನೂ ಆ ಚಣದಲ್ಲಿ ಅಂದಾಜಸ್ಕಂಡು
ಸಕ್ಕರವು ಚೆಲ್ತ ಬೀಳ್ವ ಸಾಧ್ಯತೆಯ ಆ ನಿಗದಿತ ತಾವ್ನಲ್ಲಿ
ತನ್ನ ಬಾಯ
ತನ್ನ ಸಕ್ತಿಮೀರ್ಸಿ ಅಗುಲಿಸಿ
ಕನಿಷ್ಟವೆಂದರೆ ಐದಾರು ಸಕ್ಕರ ಅರಳುಗಳಾದರೂ
ಸ್ವಯಂ ಅವೇ ಬಂದು
ಅವನ ಅಗಲಿಸಿದ ಬಾಯ್ಗ ಬೀಳ್ವಂಥ ವಿಧಾನವನ್ನು
ವಸ್ತುಸ್ಥಿತಿಯು ಅಲ್ಲೆ ಕಲಿಸಿ ರಕ್ತಗತ ಮಾಡ್ತ
ಹೀಗಾಗ್ತ ಇದರಿಂದೆಲ್ಲಾಗಿ
ಶ್ರಿ ಕಿಟ್ಟಯ್ಯನ ಕಯ್ಗಳು ಕಟ್ಟಲ್ಪಟ್ಟಿದ್ದವು
ಅವನ ಚಲನವಲನ ನಿಲ್ಲಲ್ಪಟ್ಟಿದ್ದವು.
ಹಾಗೂ–
ಈಗ ಹೊಸ ದಂಡಾಗಿ ಧಾಳಿ ಮಾಡ್ದ
ಮುದ್ಕೀರೂ ಮೋಟೀರ ಕಯ್ಗಳೂ!
ಅವು ಕಿಟ್ಟಯ್ಯನ ಮೊಕಕ್ಕ ತಿವಿಯುತ್ತಿರಲು,
ಸಾಲದೊ ಎಂಬಂತೆ

ನಾಚ್ಕಂಡು ಹೊರಬಾರದ
ಯಮ್ಮ ಬಾಣ್ತಿ ಬೆಂಮನ್ನೀರು
ತಂತಮ್ಮ ಪ್ರತಿನಿಧಿಗಳ ಕಳುಸ್ತಾ
ಆಗ ಕಿಟ್ಟಯ್ಯನ ಚತುರಬುದ್ದಿಗೂ ಮಂಕು ಹಿಡ್ದೂ
ತಳಂಗು ಬಳಂಗಿನ ಮಾಯ್ದಲಿ
ಅಳೆಯೊ ಅಂಥ ಅವನ ಕಯ್ಯೂಗ
ಚಾಲೋಕು ನಿಂತೂ
ರಾತ್ರಾವೂ ಆಯ್ತುಲ್ಲಾ.

ರಾತ್ರ್ಯಾಗಿ ಈ ನರಲೋಕ್ದ ಯಾಪಾರ ಸಾಪಾರ ಮುಗುದೂ
ಅದೂ ಮಲಗುವಂತಾಯ್ತುಲ್ಲಾ.
ಆಗ ತೂರಮ್ಮನ ಸರೀಲದಲ್ಲಿದ್ದಂಥ
ರಂದ್ರಾದಿ ನರನಾಡಿಗಳೆಲ್ಲವೂ ಬಾಯಬುಟ್ಗಂಡು
ಅವು
ಕಣ್ಣುರೆಪ್ಯ ಮಿಟುಕಿಸದೆ ಎಚ್ಚರಾಗಿ ಕೂತಿದ್ದವು
ಅವು
ಯಾನಾರೂ ವಾಸ್ನಾ ಯಾನಾರೂ ಸದ್ದೂ
ಯಾನಾರೂ ಸುಳಿವು ಅಂತ ಅವೂ

ಅಳಿಯ ಒಪ್ಪಿಸಿದ್ದ
ತಿಂಗಳಿಗಾಗೋ ಎಲಕಟ್ಟು
ಒಂದ್ಹಾವು ಅಡಕ ಹೊಗಸೊಪ್ಪು
ಕಡ್ಡಿಪುಡಾದಿಯ ಸಿರಿಯು ತೂರಮ್ಮನ ಮುಂದಾ ಅವು ಇರಲು
ತೂರಮ್ಮ
ಕಂಕೂಳ ಮರುಜವುಳೀ ಕಡ್ಡೀ
ಕಯ್ಯ ನಾಗಬೆತ್ತದಲಿ
ಬಾಣ್ತಿ ಕೂಸಿದ್ದ ಆ ಕಿರುಮನೆ ವಸ್ತುಲೂ ಇದ್ದಷ್ಟೂ
ಕಾಲುಗಳ ಚಾಚೀ ನೀಟೀ

ಅದ ವಸ್ತುಲಗ ತಾ ಅಂಟುಸಿ
ಒಳಕ ಬರುವುದು ಏನಾದರೂ ಸುಳಿಯುವುದು
ತೂರಮ್ಮಗ ಅರಿವಾಗಲೇಬೇಕು
ಅದು ಅಂತಿರುವಾಗ

ಆ ಕಯ್ಯಣ್ಣ ಸೊಳ್ನ ಬೆಳುಕಲ್ಲಿ
ತೂರಮ್ಮನ ಕಂದಮ್ಮನೂ
ಆ ಕಂದಮ್ಮನ ಕಂದನೂ
ನಿದ್ರೂಸ್ತ
ಬೆಳುಗ್ತಾ ಇರೋ ನಾಗಬೆತ್ತವು
ತಾನೇ ಸೂರ್ಯದೇವನಂತಾಡೂತಾ
ತೂರಮ್ಮನ ಕಿವಿಮ್ಯಾಲ
ವಾಲಾಡೋ ಚಿನ್ನದ ನೀರಾಕ್ಸಿದ ಮೇಟಿ ಕೊಳವವೂ
ಆ ಬೆಳೂಕಲಿ ಹೆಚ್ಚುಗಾರ್ಕ ನಡೂಸ್ತ ಅದೂ
ಅಂದು ತಾನಮಡಿ ಮಾಡ್ಕಂಡು ಬೆಳುಗೋ ಆ ಕಡಗಗಳೂ
ಆ ಕಡಗದ ಕಯ್ಗಳು
ಎಲ ಅಡುಕ ಸುಣ್ಣ ಹೊಗೆಸೊಪ್ಪೊಡನ ಆಡಾಡ್ತ
ಆಡೋ ಆ ಕಡಗಗಳ ಬೆಳಕೂವು ಸೇರ್ಕಂಡಂತಹ
ತೂರಮ್ಮಗ
ಆ ಬಾಬ್‌ಕಟ್ಟಿನಂತಿದ್ದ ಬಿಳಿಗೂದಲ ರೂಪಕ್ಕ
ವಸಿ ಟಚ್ ಮಾಡಿ
ತಲಗೊಂದು ಕಿರೀಟನಿಗ ಇಟ್ಟುಬುಟ್ಟರ ಆಗ
ಅವಳೋ
ರಾತ್ರನಗ ಕಂದಮ್ಮಗಳ ಕಾಯ್ವ
ಆ ತಾಯಿದೇವತೆಯಂತೆ
ಇರಲು ತೂರಮ್ಮ
ಅವಳಾಚ್ಗ
ಘೋರಂಧಕಾರ ಕತ್ತಲ ಸಾಮ್ರಾಜ್ಯದ ಪಿಸುನಾಟವೂ
ಅದರಾಚ್ಗ ನಾಯ್ಗಳ ಊಳಿಡುವಿಕೆಯೂ

ಅದು ತೂರಮ್ಮನ ಕಣ್ಮುಂದ
ನಾಯಿ ರೂಪ್ವಾಗಿ ನಿಂದು
ಆ ನಾಯಿರೂಪವು ಆಕಾಸಕ ಕತ್ತೆಟ್ಟಿ ನೋಡ್ತ
ಬಾಯ್ದೆರದು ಊಳಿಡುವಾಗ
ಆಗ ಆ ಆಕಾಸಮಾರ್ಗದಿಂದಿಳಿದು
ನರಮನುಸರಲ್ಲದವರು ಭೂಮಗ ಇಳುದು
ಚಂಚಾರ ಕೈಗೊಂಡಂತೂ

ಇನ್ನೇನೂ ಇನ್ನರ ಚಣವು
ಆ ಚಣವೂ ಮುಗಿದಂತಾದರ ಆಗ
ಕೋಳ್ಕೋಗಿ
ಪಸು ಪಕ್ಷಾದಿ ಪ್ರಾಣಿ ನರಮನುಸರು
ಓಡಾಡುವಂತಾಗ್ವ ಕಾಲಾವು
ಆ ಗಳುಗಲ್ಯಾಕೊ ಒಂದ್ಸಲ ಕಣ್ಮುಚ್ಚಿ ಆ ಗಳುಗ
ಆ ವಾಲಾಡಿ
ಆ ಗಳುಗಾಲೇ ವಾಲಾಡ್ತಲೇ ಬೆಚ್ಚಿ ತೂರಮ್ಮ
ಬೆದುರಿ ಅವುಳು
ಸರ್ವ ಕಣ್ಣೂಗಳ ತೆಗೆಯಾಲೂ
ಆ ಕಣ್ಮುಚ್ಚಿದ್ದ ಅರಗಳುಗಾಲಿ
ಅವಳ ಚಾಚಿದ್ದ ಕಾಲ್ದಾಟಿ ಹೋದಂತಾಗಿ ಏನೊ
ಎತ್ತೊ
ಆ ಅದು ತೂರಮ್ಮನ ಯಾವ ದಿಸ್ಟಿಗು
ಕಂಡು ಬಾರದಿರಲೂ
ತೂರಮ್ಮ
ತನ್ನ ಕಪ್ಪು ಹಲ್ಲುಗಳನ್ನಾಗ ನೊರಗುಟ್ಸುತಾ
ಇರಲು ತೂರಮ್ಮ

ಹಾಲ್ಗೂಸ್ನ ಕಯ್ಬೆರಳ ಕವುರಲು
ಬಂದಿದ್ದ ಇಲಿಸುಂಡದಿಂದಾಗಿ

ಎಚ್ಚರವಾದ ಕೆಂಪೀಗ
ಆಗ
ತನ್ನವ್ವನ ಆ ರೂಪ್ಪ ಕಂಡೂ

“ಅವ್ವೈ ಇನ್ನಾರು ಸುಮ್ನ ಮಲಿಕ್ಕ...”

“ಅದ್ಯಾನಕನಿ ವೋದಂಗಾಯ್ತುಕನ್ ತಾಯೀ
ನಿಂಗಾದ್ರೂ ಯಾನಾರೂ ಕಂಡ್ತಾ...?”

“ಅಯ್ ಕಂಡಿಕನ
ನಿನ್ ಕಾಲ ದಾಟ್ಗಂಡು
ಓಡ್ದ ಇಲಿ ಸುಂಡ್ವ
ಈಗ ಸುಮ್ನ ಮಲಿಕ್ಕ”

“ಹಹಾ ಆಗಾರ ಇಲಿ ಸುಂಡ್ದ ರೂಪ್ದಲಿ
ಆ ಮುಂಡ ಬಂದಿದ್ಲಕನೀ...”
ಎಂಬುದು ತೂರಮ್ಮಗ ಹಿಡ್ಕಂಡೂ–
ಅದು ಬುಡದು ಅದು
ಕೋಳ್ಕೂಗಿ ಪಸುಪಕ್ಸಾದಿ ನರಸಂಚಾರ ಉಂಟಾಗೂ
ತೂರಮ್ಮನ ಚಿಂತ್ಯವೂ
ತೂರಮ್ಮನ ಘಟಕ್ಕಿಂತಲೂ
ತೂರಮ್ಮನ ಚಿಂತ್ಯಾವೂ ಬೆಳುದು
ಆ ಚಿಂತ್ಯಾವು
ಬೆನ್ನು ಬಗ್ಗುಸ್ಕಂಡೂ
ಅವುಚೀ ಕಂಕುಳಲಿ ಮರುಜವುಳೀ ಕಡ್ಡೀ
ಹಿಡುದುದಾಗಿ ನಾಗಬೆತ್ವ ಬಲಗೈಲೀ
ತನ್ನ ಮನಯ ಸುತ್ತಾಲೂ ಸುತ್ತೂತ
ಸುತ್ತ ಉಗ್ದ ಎಲ ಅಡಕ ಸುಣ್ಣದಾ
ಆ ಕೆಂಪೂನ ಎಂಜುಲೂ

ಆಗಿ
ತಾನೇ ಅದು ರತನೀರಾಗಿ
ಅದು ಆ ಮನಯ ಸುತ್ತಾಲೂ

* * * *

## ೧೪ ಸುತ್ತಾಲೂ ಅಕ್ಕರೆಯು ಅರಳೂತ

ಸುತ್ತಾಲೂ ಅಕ್ಕರೆಯು ಅರಳೂತ
ಹೊಲಗೇರೀಲಿ
ಗಳುಗ್ಗ ಒಬ್ರು ದಲಿತ ಸಂಘದವರು
ನಾಳಿನ ಜೀತವಿಮೋಚನಾ ಮೆರವಣುಗ್ಗ
ಮಾರಿಗುಡಿಗ ತುಂಬುತ್ತಿದ್ದರು.

ಮಾರಿಗುಡಿ ನೆಲಕ
ಸಂಪೂರ್ಣ ಮುಂಡವ ಅಂಟುಸಿ
ರುಂಡ ಮಾತ್ರವ ಎತ್ತಾಡಿಸೊ
ಕುರಿಯಯ್ಯನ ಮ್ಯಾಲ ಚಿಂದಿ ಕಂಬಳೀ
ಅದರ ಮೇಲೂ ಕೆಳೂಗೆಲ್ಲ
ಮೋಟು ಬೀಡಿರಾಶಿಗಳೂ ಬೂದಿಯೂ
ಕಾಲಾನುಕ್ರಮದ ವ್ರತವಾಗಿ ಶೇಖರಿಸಲ್ಪಟ್ಟು
ಅದನ್ನು ಅಲುಗಾಡಿಸದ ಕುರಿಯಯ್ಯನು
ಎತ್ತಲು ಆಗುತ್ತಿದ್ದ ಬಿಳಿಗೂದಲುಮಯ ರುಂಡವ ಎತ್ತೂತ
ಬಂದವರ ದಿಕ್ಕುಗ ಕಣ್ಣು ಬುಡುತ್ತಿದ್ದನು.

ಮೊದಲಾಗಿ
ಕೋಲಾರದ ಹಿಂಡು ಇಳುದು
ಅವರು ಹಾಡೋ ಹಾಡ್ಗೂ
ಕುಣಿಯೊ ಕುಣ್ತಗೂ
ಆ ಕುಣ್ತದ ಬಾವ್ಕಗೂ
ಅಲ್ಲಿ
ಅದ್ಯಾರ ಆ ಕಡೇವ ಯಂಕ್ಟೇಸ ಅಂಬವ

ಆ ದುಕ್ಕದ ಸಮುದ್ರ
ಈ ಮನುಸ್ನ ರೂಪ್ವ ತಾಳ್ಕಂಡೂ
ಪದ್ವ ಧಂ ಎಳ್ಕಂಡು ಕಿರುಚ್ತೂ
ಅಂದ್ರ
ನಿಂತವರು ಓಡುತ್ತಿದ್ದರು.
ಆ ಕಿರುಚಾಟಕೂ ತನಗು ಸಂಬಂಧ ಇಲ್ಲ ಅನ್ನುವಂತೆ
ಕೇರಾಂ ಅಂಬವ
ಧರ್ಸಿದ್ದ ಬುಸ್ಸರ್ಟ್ಟ ತಾತ್ಸಾರದಲಿ ಕಳಚಿ
ಮಾರಿಗುಡಿ ಗಳೂಗ ನೇತಾಕ್‌ಬುಟ್ಟು
ಬರಿಮಯ್ಲಿ
ಆ ಪ್ಯಾಂಟಲೆ
ಚಕ್ಕಲಮಕ್ಕಲಗಾಲಾಕಿ
ತನ್ನೇಡೂ ಕಯ್ಯುನುವಿ
ಆ ತನ್ನೇಡೂ ಕೆಕ್ಕಗಳಿಗ ಕೊಟ್ಟುಬುಟ್ಟು
ಮುನಿಸ್ಗಂಡವ್ನ ಥರವಾಗಿರಲೂ

ಈ ಕೇರಾಂಗ
ವಸಿ ಅಮಾಸನ ಬಟ್ಟಬರಿ ತೊಡ್ಸಿ
ಆ ಗೋಣಿಚೀಲ್ದ ಬಾಡ್ಗಸೈಕಲ್ಲು ಹಿಡುಸಿ
ನಿಲ್ಸುಬುಟ್ಟರ
ಅಮಾಸಗ ಅಣ್ಣನೋ ತಮ್ಮನೋ ಅನ್ನುವಂತೂ
ಅದು ಬ್ಯಾಡ ಅಂದ್ರ
ಅವ ಹೆಂಗೂವಿ ಬರಿ ಮಯ್ಲಿ ಇದ್ದನಲ್ಲಾ
ಅದುಕ
ಸಿಕ್‌ಸಿಕ್‌ದ ಕಡ ಈಭೂತಿ ಬಳ್ದು
ಕತ್ತುಗ ರುದ್ರಾಕ್ಷಿ ಸರ್ವ ತೊಡ್ಸಿ
ಕಯ್ಯಗ ತ್ರಿಶೂಲ ಹಿಡೂಸಿ
ಅವ್ನ ತಲ್ವ ಬೋಳ್ಸಿ
ಅದ್ಕ ಕಾವಿಬಟ್ಯ ಧರಿಸಿಸಿ

ಆಮ್ಯಾಲ ನನ್ನ ಮಗ್ನದ ಅವನ ಎತ್ಕಂಡ್ ಬಂದು
ಹುಲಿವಾನದ ಮ್ಯಾಲ ಕೂರ್‍ಸುಬುಟ್ಟರ
ಇದ್ಯಾನಪ್ಪ ಸಿವಾ
ಆ ನಮ್ಮಪ್ಪ ಸೋಮಿ ಮಲೆಮಾದೇಶ್ವರ
ಧರಗ ಇಳ್ದವರೆ ಅನ್ಸಂಗಾ ಇದ್ದರೆ
ಆ ಸೀಯಂನದೇ ಒಂದು ವೈಖರಿಯಾಗಿ
ಈ ಥರಾವರಿಯಾಗಿದ್ದ ಕೋಲಾರದ ಗುಂಪೂಗ
ಉಳುದ ದಿಕ್ಕವರೂ ಬಂದೂ ಬಂದೂ ಸೇರ್‍ತಾ ನಿಧಾನವಾಗಿ

ದಾನದಾನಕ್ಕಿಂತ ಹೆಚ್ಚಾದ ನಿಧಾನದಲ್ಲೆ
ತಮ್ಮ ಮಯ್ಯನ್ನೂ ಮಾಡ್ಸಗಂಡಿದ್ದ ತ್ಯಾಗಪ್ಪನವರು
ಹಾಸನದ ದಿಕ್ಲಿಂದ ಮಾರಿಗುಡಿಗ ಇಳಿಯುತಲೆ
ಅಲ್ಲೊಂದು ದೊಡ್ಡ ತಂಬಿಟ್ನಮುದ್ದೆ ಇಟ್ಟಂಗಾಯ್ತಲ್ಲಾ
ಅದರ ಪಕ್ಕದಲ್ಲೇ ಕೋಟೆಯಹುಲಿ
ಬೆಟ್ಟಯ್ಯ ಕುಂತ ಗತ್ತಲ್ಲೆ
ಹುಲಿಬಾವ ಹುಟ್ಟಿಸುತ್ತಿರಲೂ
ಅದರ ಅಕ್ಕಪಕ್ಕ
ಮೂಗಬಸಪ್ನ ಥರ್‍ವಾಗಿದ್ದ ರಾಕಪ್ಪನೂ
ಹಸೂನಂಥ ಗಂಗಪ್ಪನೂ ಕೂತಿರಲೂ

ಆ ನೂರಾರು ಕತ್ತಿವರಸೆಯಾಡಿದಂತೆ
ಕೆನ್ನೇಲಿ ಬಿಗುಮಾನದ ಗುರುತಿನ
ಸಂಘದ ಮೊಕಂಡರು ಹೆಸರು ಕಿಸ್ನಪ್ಪರು
ಮೈಸೂರಲ್ಲಿ ರಾತ್ರ ಮೊಕ್ಕಾಂ
ಬೆಳಗೆದ್ದು ತಾನಮಡಿಯಾಗಿ
ಬತ್ತಾ ಇರೋ ಅವರ ಈಕಡಗ–
ಬಿಳಿ ಪಂಚ್ವ ಉಟ್ಗಂಡೂ
ಕಾವಿ ಬಣ್ಣದ ಜುಬ್ಬದಲಿ ಬುಟ್ಟಗಣ್ಣ ಅರುಳ್ಸಕಂಡು
ದ್ಯಾವಯ್ಯ ಅಂಬುವರೂ,

ಆಕಡಗ ಕರಿ ದೂಂಧೂಂತಗ
ಅದ್ಯಾರಕನಿ ದಾಕ್ಟರಂತ
ಮದ್ದುಗುಳಗ ಚೀಲ್ವ ಹಿಡ್ದವರು ಕುಲುಗುಡ್ತ
ಅವ್ರ ಹೆಸ್ರು ಚಂದ ನಾಲುಗ ಹೊರಳ್ದು
ಹೊಲಾರಲ್ಲಿ ದಾಸ್ ಒಕ್ಕಲು
ಈಗೇನೊ ಕಮುನಿಸ್ಟಂತ
ಕಾಲಿಡಲು ಕೇರಿಗ ಅರ್ಧಧೈರ್ಯವು ಬಂತಲ್ಲಾ

ಇನ್ನು ಉಳುಕಾ ಧೈರ್ಯವು
ಕರಿಕೋಟ್ನುವಿ ಕರಿಬೂಟ್ನುವಿ ಕರಿಟೋಪಿನುವಿ
ಹಾಕಂಡೂ
ಆ ಮಲೆಯಾಳ ದೇಸ್ದವರೂ
ಬೆಂಗಳೂರು ಸಿಟಿಲಿ ಲಾಯರು
ಹುಸೀನಗೂವ ನಗುತ ನಗುವೋ ಎಂಬಂತೆ ಬರುತ್ತಿರಲು
ಆ ಲಾಯರ್ ಅನುಸರಿಸಿ
ಹಣಕಾಸಲ್ಲಿ ದಕ್ಷತ್ತಾಗಿದ್ದ ಓರಾಜಣ್ಣರು
ತಂ ತಲಮ್ಯಾಲ ತಪ್ಪಿಸ್ಗಂಡ ಕವಿ ಸಿದ್‌ಲಿಂಗ್‌ಡಾಂಗೆಯ
'ಹೆಲ್ತ್‌ಗ್ರೌಂಡ್ ಕಾರಣ್ವ' ಹೊತ್ಗಂಡೂ
ಸಂಸಾರ ಸಮೇತರಾಗಿ
ಬಣ್ಣಬಣ್ಣದಲಿ ಒಟ್ಟು ಡಜನ್ನು ಬರಲು
ಬಂತು

ಬತ್ತಾ ಬತ್ತಾ ಮಾರಿಗುಡಿಯು ಹೆಜ್ಜೇನುಗೂಡಾಗಿ
ದೀಪ್ದ ಬತ್ಯ ಎತ್ತರಿಸಿದರೂ
ಒಬ್ಬರ ಮೊಕ ಒಬ್ಬರ್ಗ ಕಲ್ಸಗಂಡಂತಾಗುತ

ಇಲ್ಲುಗ ಮೂರ್ಜಿನಕ ಮುಂಚಿತವಾಗಿ ಬಂದಿದ್ದರೂ
ನಾಗರಾಜುವು ಸಭೆ ಮರ್ತು
ಯಾರ್ದೋ ಹಟ್ಟೀಲಿ ಟೀ ಸೇವೂಸ್ತ ಕೂತವರ್ಗ,

ಪೂರ್ವೀಕರು ಮಾಡಿಮಟ್ಟಿದ
ಪುಣ್ಯದ ಫಲವಾಗಿ ನೆಪ್ಪುಗ ಬಂದೂ–
"ಇದೇನ್ರೀ ನನಗ ನೆನಪು ಮಾಡಬಾರ್ದ?" ಅಂತ
ಆ ಟೀ ಕೊಟ್ಟವರಿಗೆಯ ಬಯ್ದು
ಬಿರುಸಾಗಿ ಮಾರಿಗುಡಿಗೆ ಬಂದರೆ
ನಾಗರಾಜುಗ
ತಂ ದೊಡ್ಡ ತಲವ ಇಡಲು ಜಾಗವು ಸಾಲ್ದೇ

ಆಗಾಗಲೇ ಅದೆಸ್ಟೋ ಜನವು ಮಾತಾಡಿಯಾಗಿ
ಈಗ ದ್ಯಾವಯ್ಯ ಅಂಬೋರು
ತೂಕಡಿಕೆ ಜಯುಸಿ
ಹಸನ್ಮುಖವಾಗಿ ನಿಂತೂ
ನೆನ್ನೆ ತಾನೇ
ಗಂಡೊಂದು ಜಾತಿ ಹೆಣ್ಣೊಂದು ಜಾತೀದು ಮದ್ವ
ಮಾಡ್ಸಗ ಆಡಿದ್ದ ಮಾತ್ಗಳ
ಏನೆಂದರೆ– 'ಗಂಡ ಹೆಡ್ತಿಯರಾಗಿ
ಏನ್‌ಬೇಕಾರೂ ಎಷ್ಟ್ ಬೇಕಾರೂ ಜಗಳವಾಡಿರಿ.
ಆದರೆ ಇಂತಿಂಥ ಜಾತಿ ನೀನೂ
ಅಂತಂತ ಹೇಳ್ತ ಮಾತ್ರ ಜಗಳಮಾಡಬೇಡಿರಿ
ಅಂತ
ನಾನಾದರೂ ನಿಮ್ಮಲ್ಲಿ ವಿನಂತಿಸುತ್ತೇನೆ'
ಅಂಬುದ ಇಲ್ಲಿ ಹೇಳ್ಬುಟ್ಟು–
ಅವ್ನೆ ಇದ ಇಲ್ಯಾಕಪ್ಪ ಹೇಳ್ದಿ ಅಂತ
ತುಸುವೇ ಕಕ್ಕಾಬಿಕ್ಕಿಯಾದರೂ
ಮುಂದಲ ಮಾತಿನ ಮೋಡಿ ಹಾಕಲು
ಕಣ್ಗಳ ಅರಳಿಸಿಕೊಂಡಿರಲೂ

ಅಸ್ಟಕ್ಕೇನಾಯ್ತೊ
ಕಲ್ಲೊನೀರೂ ಕರಗೂವ ಹೊತ್ತು ಮೀರಿಯೂ

ಹೊಲಾರ ಮಾರಿಗುಡಿ ಜೋತಮ್ಮನು
ತಂ ಸಭಗ ಬಾರದಿರಲು ಸಿಬ್ರಿಯಾಗಿ
ತೊರಾರ ಜೋತಮ್ಮನು ಹೊಲಾರ ಮಾರಿಗುಡಿಗ ಬಂದೂ
ಕಂಡು ಆ ತುಂಬಿದ್ದ ಜನ್ವ
ಅವಳ್ಗೊ ದಂಗಾಯ್ತು.
ಆ ಉಸೂರ ಹಿಡ್ಕಂಡೂ
ಮೆಲ್ಲುಗ ಬಂದೂ
ಈ ಜೋತಮ್ಮಗ 'ಅಕ್ಕೈ' ಅಂದಳು.
ಅದ್ಕ ಮಾರಿಗುಡಿ ಜೋತಮ್ಮ–
"ನಾ ತಾನೇ ಯಾನ್ನ ಮಾಡ್ಲವ್ವ
ಇವ್ರು ಈ ಥರ್ವಾಗಿ
ಗುಡ್ಗು ಸಿಡ್ಲು ರಾಕ್ಸರ ಥರ್ವಾಗಿ ಕೂತಿರ್ವಾಗ..."

"ಅಕ್ಕೈ ಅದಿರ್ಲಿಕನ, ಇಲ್ಲಿ ಕುಂತಿರೋ ಹೈಕಳು
ಯಾನ್ನೋ ಓದಿ ಬರ್ದು ಕೆರ್ದಾಕಿದವರು ತಾನೀಯಾ?
ನಾನು ಯಾರ್ದಾರ ಮಯ್ದುಂಬಿ
ಸಾವಿರಾರ್ ವರ್ಸದ ತಲತಲಾಂತರದ
ನನ್ನಿ ನುಡಿಸಿ
ವಸಿ ಚಿಟುಕುಮುಳ್ಳ ಆಡಿಸ್ಲ್ಯ?"

"ಅವ್ವವ್ವಾ ನೀನೀಗ ಬೆಡಗುದುಲ್ಲಿಕವ್ವ..." ಅಂತ
ಹೊಲಾರ ಜೋತಮ್ಮನು
ತೊರಾರ ಜೋತಮ್ಮನ ಕೆಕ್ಕಗ ತಿವಿಯುವುದರೊಳಗ
ತೊರಾರ ಜೋತಮ್ಮ ನೆಗಾಡ್ತ
ಕುರಿಯಯ್ಯಗ ಮೈದುಂಬಿಕೊಂಡಳು.

ಆಗಲೀಗ ಆ ಮೋಟು ಬೀಡ್ಗಳ ಮ್ಯಾಲ
ಮಲುಗಿದ್ದಂಥಹ ಕುರಿಯಯ್ಯನು
ತನ್ನ ಬಿಳಿ ಗಡ್ಡ ಮೀಸ್ವ ರಾರಾಜುಸ್ತ

ಸೇದೋಗಿದ್ದ ಕಯ್ಯ ಎತ್ತಿ
ಸ್ಟಯ್‌ಲಾಗಿ ಆಡುಸ್ತಾ
"ನಿಲ್ಸು ಕೂಸೂ ನಿನ್ ಮಾತ,
ಎಲ್ಲಿದ್ದದೂ ಜಾತಿ?" ಅನ್ನಲು
ಎಲ್ಲರೂ ಕಕ್ಕಾಬಿಕ್ಕಿ ತುಂಬ್ಕಂಡು ಚೆಲ್ಲಾಡ್ತ,
ಆ ಕರಿ ದೂಂಧೂಂತಗಲ ದಾಕ್ಟರು
'ಇಲ್ಲೊ ಸಿಐಎ ಏಜೆಂಟಲ್ಲಾ' ಅಂದ್ಕತ್ತ
ಕುರಿಯಯ್ಯಗ ನೋಡಲು,
ಆ ಕುರಿಯಯ್ಯನೂ
'ಆ ದಾಕ್ಟರ ಆಕಾಸದುದ್ದ ಇದ್ದಂಥ ಜಲ್ಮಕ್ಕ
ತನ್ನದೊಂದು ಬಿಳಿಗೂದಲು ಸಮಾನ' ಎಂಬಂತೆ
ತಾನೂ ನೋಡಿ ಕಿರುನಕ್ಕು "ನೋಡ್ರಪ್ಪ ಕೂಸ್ಗಳ...
ಕೇಳೀ, ನಾನು ದಿಕ್ಕುದೆಸ ಇಲ್ದವ, ಬಿದ್ದಿರೋ ಅನಾದ್ರೀ... ಹಿರೀಕ.
ಅಂಥಾ ನಾನೇ ಜಾತ್ಯ ಕಂಡಿಲ್ಲ ಅಂತೀನಿ.
ನಂಗ ಆ ಜಾತ್ಯ ಅರ್ತಮಾನ ಮಾಡ್ಸಿ
ನೀವು ಮುಂದ್ಕ ಮಾತಾಡಿ..." ಅಂತಂದು
ಒಬ್ಬೊಬ್ಬರನ್ನಾಗಿ ನೋಡತೊಡಗಿದನು.

ಆ ಹುಸಿನಗೂವ ಬುಡದವರಾಗಿ
ಲಾಯರು ನೋಡುತಿರಲೂ,
ಅರೆಮೂರ್ಚ್ಛಾಲಿದ್ದ ಕಿಸ್ನಪ್ಪರು
ಕಷ್ಟದಲಿ ಎಚ್ಚರಗೊಂಡವರಾಗಿ
ಸೆಖಿಕ ಗಾಳಿಯ ಬೀಸ್ಕಳ್ತಾ ಗಾಳ್ಯ
ಏನಂದರು– "ನೋಡಿ ತಾತಯ್ಯ,
ನೀವು ಕಷ್ಟ ಉಂಡು ಬದುಕಿಬಾಳಿದಂಥವರು
ನಿಮ್ ಬಗ್ಗೆ ಇರೋ ಕಥೇನ ಓದಿದ್ದೀನಿ.
ಅಂಥ ನೀವೂ ಇಂಥ ಮಾತುಗಳ ಆಡಬಾರದು
'ಹೊಲಮಾದುಗ' ಅಂದ್ರ
ಬೇರೆಯವರ ರಕ್ತ ಕುದಿಯೋದು ನಿಚ್ಚಳವಾಗಿ ಕಾಣ್ತದಲ್ಲಾ...
ಇದಕ್ಕೆ ಕಾರಣ ಏನು? ಇದಕ್ಕೆ..."

ಕುರಿಯಯ್ಯ ಮಾರಿಗುಡಿನೆ ಬೆಳುಗೋ ಥರ್‍ವಾಗಿ
ಒಂದ್ಸಲ ನೆಗಾಡಿಬುಟ್ಟನು. "ಐ ಅದಾ ಕೂಸೂ?
ತಾಳೂ... ಗಿಲೀಟ್ನದಲ್ಲ ನನ್ ಮಾತು ತಿಳ್ಕ.
ನೋಡು ಮೊಗ,
ಯಾರಾರು ಈಗ ಬಂದು
ನನ್ ಹೆಡ್ತಿಯ ಹೊತ್ಕಂಡು ಹೊಂಟೋದ್ರ
ಹೇಳೂ ಹೆಂಗಾಗ್‌ಬೇಕು ನಂಗ?"

ಅದು ಎಲ್ಲಾರಿಗೂ ಆಗುವುದು ಅದೂ...
ಅದ್ಯಾಕ ಕೇಳೀನು ಇವ ಅದ ಈಗಾ...
ಅದಾ ರಕ್ತಾವು ಕುದೀತಾ

"ಅದ್ ತಾನಿಯಪ್ಪ ಆಗದು? ಯಾನ?
ರಗ್ತ ಕುದೀತದ.
ಬ್ಯಾರೆ ಜ್ಯಾತಿಯವರಿಗೂ ಆಗದುವಿ ಅದೇ ಕಯ್ಯ.
ನಮಗೊಂದು ನ್ಯಾಯಾ...
ತಾಳೂ, ಅವರ್‍ಗೊಂದು ನ್ಯಾಯ ಅಂತಿದ್ದದಯ್ಯ ನ್ಯಾಯ?
ಯಾನಾರೂ ನಂ ಜಾತಿ ಬಡ್ಡೆತ್ತವುಗಳು
ನಿಯತ್ತಗಾರ್‍ರು ಅಂದ್ಕಂಡಿದ್ದೀರಯ್ಯ ಯಾನಾರುವ್ವಿ?
ನಂಬೀರಿ ಜೋಕೇ... ಗೊತ್ರಯ್ಯಾ ನಿಮ್ಗಾ?
ಸಾವಿರಾರು ಋತುಮಾನಗಳ ಹಿಂದ್ಲ
ನಡೆನುಡಿ ಗೊತ್ತಾ ನಿಮ್ಗಾ? ಗೊತ್ತಾ?
ಆಗ ನಂ ಜಾತಿ ಬಡ್ಡೆತ್ತವು
ಮಾಡ್ತಿದ್ದ ಕೇಮಿ ಯಾನ ಅಂತ ಗೊತ್ರಯ್ಯಾ...?"

ಈ ಮೋಡಿಗ ಮಾರಿಗುಡಿ ಮಯ್ಯು ಕಿವಿಯಾಗಿ ಆಲಿಸುತ:

"ಗೊತ್ರಯ್ಯಾ? ಕೇಳೀ...
ನಂ ಜಾತಿ ಮೂಲದ ಬಡ್ಡೆತ್ತವು

ಕಾಯ್ಕಂಡಿದ್ದು
ತಂ ಕಣ್ಣುಗ ಬೇಕ್‌ಬೇಕಾದ
ಉತ್ತಮರ ಹೆಡ್ತೀರ ಹೊತ್ಗಂಡು ನಡ್ದುಬುಡೋರು
ಎಲ್ಲಿಗ್ಯ?
ಬೆಟ್ಟದ ಕಿಬ್ರಿಗ. ಆಯ್ತಾ?
ವಸಿ ದಿನಗಂಟ ಅಲ್ಲೆ ಇರಾರು. ಆಯ್ತಾ?
ಆಮ್ಯಾಕ ಕೇಳೀ
ಆ ಬಡ್ಡೆತ್ತವು ತಿರ್ಗಾ ತಂ ಊರ್ಗಿಯ ಬರೋವು.
ಯಾನೇ ಆಗ್ಲಿ
ಆಗ ಉತ್ತಮಜಾತಿ ಮೂಲದ ಜನ
ಒಳ್ಳೆವರಾಗಿದ್ರುಕಯ್ಯ. ತಾಳ್ಕತ್ತ ಇದ್ದರು.
ಅದ್ಕೀಯ ಅವ್ರುಗ ಉತ್ತಮ ಜಾತಿ ಅಂತ ಹೆಸ್ರು ಬಂದು
ನಿಂತಿರೋದು.
ಸುಮ್ಗ ಬಂದದ ಅಂದ್ಕಂಡಿದ್ಯರ?
ಕೇಳೀ, ಆ ಉತ್ತಮರು
ಬೆಟ್ಟದ ಕಿಬ್ರಿಯಿಂದ ಬಂದವರ್ಗ ಏನ್ ಅಂತಿದ್ರು ಅಂದ್ರ:
'ನೋಡ್ರಯ್ಯ ಆದ್ದು ತಿರುಗ ಬರಲ್ಲ
ಯಾನ ಆಯ್ತು. ಯಾನ ಹೋಯ್ತು
ನೀವ್‌ಗಳು ಕಟ್ಟುಕಟ್ಟಳ ಮುರ್ದು ಮಾಡ್ದ ತಪ್ಪುಗ
ಈಗ ನೀವ್‌ಗಳು ಊರಾಚ್ಗ ಇದ್ಕಂಡು
ನಾವು ಹೇಳ್ದ ಕೆಲ್ಸವ ಮಾಡ್ಕಂಡು...
ಹೆಂಗೊ ಇದ್ಕಳ್ಳೀ...' ಅಂತ ಅನ್ನವರು.
ಈ ನಂ ಜಾತಿ ಬಡ್ಡೆತ್ತವ್ಕ ಬೇಕಾಗಿದ್ದೂ ಅದೀಯ
ಆ ಉತ್ತಮರು ಕಾಲಲ್ಲಿ ತೋರ್ಸಿದ್ದ
ಇವ್ರು ಕೈಲಿ ಮಾಡ್ಕಳರು. ಇರಾರು..."

ಕುರಿಯಯ್ಯನ ಈ ನುಡಿಯು ಮೋಡಿಯಾಗಿ ಒಡಮೂಡೀ
ಆ ಮೋಡಿಯು ಬೆಳುಕಾಗಿ–
"ಈಗ ಅಂಥಾ ಒಳ್ಳೆಕಾಲ್ವ ಕೂಸೂ?

ಈ ಕಾಲ ಕೆಟ್‌ಕಾಲ ತಿಳ್ಕ.
ಈಗ ನಂ ನೋಡ್ದಾಗ ಏನಾಯ್ತದ?
ಯಾರಗ್ಯ?
ಈಗಲ ಉತ್ತಮ ಜಾತ್ಯವರ್ಗ– ಕೇಳೀ!
ಅವರ ಒಳ್ಗ ಆಗುವುದರ ಅರ್ತಮಾನದ ಅರಿವು
ಅವ್ರಿಗ್ಗಿಯ ಅರಿವಾಗ್ತ ಇರಲ್ಲ.
ಆದ್ರೂವ ಅವರ ರಗ್ತಕ?
ರಗ್ತಕ ತಲತಲಾಂತರದ ನೆಪ್ಪಿರ್ತದ... ತಿಳ್ಕಳ್ಳೀ!
ಅವರು ಸುಮ್ನಿದ್ರೂ
ಅವರ ರಗ್ತ ಸುಮ್ನಿದ್ದುದಾ?
....ಹೆಂಗ್ ತಾನೀಯಾ... ಸುಮ್ನಿರಕ ಆದ್ದು?
ಅದರ ತೆಪ್ಪಾ ಅದೂ?
ನಂ ಜಾತ್ಯವರ ಕಂಡೇಟ್ಗಿಯ
ಉತ್ತಮ ಕುಲ್ದವರ ರಗ್ತ ಏನಚಿದ್ಕತ್ತದ:
'ಓಹೋ! ಈಗ ಕಾಣ್ಹೋ ಈ ಹೊಲಮಾದುಗಾದಿ ಪೂರ್ವಿಕನು
ನಮ್ಮ ಉತ್ತಮ ಕುಲ್ದ ಮೂಲಾದಿಗೆ ಸೇರ್ದ ಹೆಡ್ತ್ಯ
ಹೊತ್ಗಂಡು ಹೋಗಿದ್ದವನ ಆ ವಂಶದ ಕುಡಿ
ಈ ಹೊಲಮಾದುಗಾದಿ...' ಅಂತ
ಅಂದ್ಕತ್ತದ. ಯಾನ? ಈಗಲ ಉತ್ತಮನ ರಗ್ತ.
ಈಗಲ ಈ ಉತ್ತಮನ ರಕ್ತಗ
ಆ ಅದೆಲ್ಲವಿ ಪಿಚ್ಚರ್ ಬುಟ್ಟಂಗ ಕಾಣುಸ್ತದಕಯ್ಯ!
ಆ ನೆಪ್ಪಗ
ಉತ್ತಮರ ರಕ್ತ ಕುದೀತದ
ನಮ್ಗಾದ್ರೂವಿ ಹಂಗೆ ತಾನಿಯಪ್ಪ ಆಗದು?
ಅವ್ಯೆ... ಈ ಥರ್ವಾಗಿ ಇರ್ವಾಗ
ಕಾರಣ್ವ ಕೇಳ್ತೀಯಲ್ಲಪ್ಪಾ ಕೂಸೂ..."
ಸಂಘದ ಮೊಕಂಡ ಕಿಸ್ನಪ್ಪಾದಿ ಕೂಸ್ಗಳೂ
ತಾಯ ಎದ ಹಾಲ್ಗಾಗಿ
ಲವ್ವೊಲವ್ವೊ ಅಳೂತ ತೊದಲ್ತಿರಲು

ರಾತ್ರ ತುಂಬಾವು
ಇದೇ ಥರವಾಗ್ವ ಭೀತಿ ಉಂಟಾಗಿರಲು
ಒಂದೇ ದುಡದ ದೊಡ್ಡಣ್ಣ ಅಂಬುವವ
ಎದ್ದು ನಡುದು ಕುರಿಯಯ್ಯನ ಕಾಲುಗಳ್ಗ
ಹಣೆಮುಟ್ಟುಸಿ ಸರಣುಮಾಡಿ
ನಿಂತು ಕೈಜೋಡ್ಸಿ ಪ್ರಾತಿಸುತ–

"ತಾತಯ್ಯನೋರೇ, ಇಂಥ ಮಾತ್ಗಳ
ಆ ದ್ಯಾವನ್ನೂರ ಮಾದೇವಪ್ಪರು ಬಂದಾಗ
ಅವ್ರ ಜೊತಲಿ ಆಡೀ ಚಂದಾಗಿರ್ತದ"
ಅಂದನು.

ಅದ್ಕ ಕುರಿಯಯ್ಯ– "ಯಾರ?
ಒಚ್ಚೋರಿ ಮೂಲ ಹಿಡ್ಕಂಡು
ಬೀಡಿ ಸೇಯ್ತ ಕೂತ್ಗಳ್ತದಲ್ಲಾ ಆ ಮೂದೇವ್ಯ?
ಐ ತಗಾ! ಅದಿನ್ನೂ ಹಾಲ್ಕೂಸುಕನ" ಅಂತ್ಲೆ

ಅನ್ನುಬುಟ್ಟು ತೊರಾರ ಜೋತಮ್ಮನು
ಕುರಿಯಯ್ಯನ ಮಯ್ಯುಬುಟ್ಟು
ಗಲುಗ್ತಾ ಇಳುದು ಕಿಲಕಿಲ ನೆಗ್ತ
ಹೊಲಾರ ಜೋತಮ್ಮನ ಪಕ್ಕಕ್ಕ ಬಂದು
ನಿಂತ್ಕಂಡಳು ಕಿಲಕಿಲ್ನ!

ಆಗ ಅಮಾಸನು
ಬಿಲ್ಲುಬಾಣ್ವ ಹಿಡ್ದವನಂತೆ ಎಗರಿ–
"ಯಾನಯ್ಯ?
ಯಾನ ನೀನು ನಂ ಮಾದೇವಣ್ಣನ್ಗ ಅನ್ನದು?"
ಅಂತ ಡಬಾಯುಸ್ತ ಹೊಡೆಯುವನಂತೆ ಕೈ ಎತ್ತಲು
ಆ ಎತ್ತಿದ ಕಯ್ಯನ್ನು

ಗಾರಸಿದ್ಮಾವ ಹಿಡ್ದು ತಿರುಚ್ತಾ–
"ಓಹೊಹೋ ವಸಿ ಸುಮ್ಕಿರು ಜಗದೇಕವೀರೋ"
ಅಂತ ತಿರುಚ್ತ ಅಮಾಸ್ನ ಮೊಕ್ವ
ಕಿವುಚುಸುತ್ತಿರಲು,
ಇತ್ತ
ಕುರಿಯಯ್ಯ ಬೆಚ್ತ–
"ನಾನೇನ್ ಅಂದ್ನಪ್ಪಾ ಮಾದೇವಪ್ಪನ್ಗ!?
ಒಂದ್ ಬೀಡಿ ಕೊಡ್ರಪ್ಪ ಅಂದ್ರ
ಆ ಪುಣ್ಣಾತ್ಮ ಒಂದು ಕಟ್ನಿಯ–
'ತಕ್ಕ ತಾತ' ಅಂತ ಬಾವ್ಕದಲಿ ಕೊಡ್ತಾನ.
ಆಮ್ಯಾಕ ನನ್‌ತವೂ ಈಸ್ಗತ್ತನ ಅನ್ನು.
ಆಮ್ಯಾಕ ಅವ್ರ ಅಪ್ಪನ್ಗ
ಪೋಲಿಸ್ ಚಾಕ್ರಿಗ ಸೇರಿಸಿದವರು
ಯಾರೂ ಅಂತ ಅಂದ್ಕಡಿದ್ದೀರೀ..." ಅಂದನು.

ಹೊತ್ತು
ಕಲ್ಲೂ ನೀರ್ಲೂ ಕರಗ್ಲಿ ಹೊಂಟೋಗಿದ್ದೂ
ಆ ಮುಗಿಯದ ತೂಕಡಿಸೊ ಸಭವು
ತಲಾ ಮೂರು ಬಾಟ್ಲು ಹಾಕಂಡ ಥರ್ವಾಗಿ
ತಲ್ವ ವಾಲಾಡುಸ್ತ–
ಯಾರು ಮಾತಾಡೀರು? ಲಾಯರ್ ಸೋಮ್ಗಳು
"ಏನ್ ಬುಟ್ಗೊಟ್ರೂ ಶಿಸ್ತನ್ನು ಮಾತ್ರ
ಯಾರೂ ಬುಟ್ಟುಗೊಡಬಾರದು ಸ್ವೋಮಿ" ಅಂದರು.
ಲಾಯರ್ ಕಿವೀಲಿ ಪಿಸುಗುಟ್ಟಿ
ಆಮ್ಯಾಲ ಓರಾಜಣ್ಣ ಜೋರಾಗಿ
"ದಾರಿ ಉದ್ದುಕ್ಕೂ ಊಟದ ವ್ಯವಸ್ಥೆ ಮಾಡಲಾಗಿದೆ"
ಎಂಬ ಅವರ ವಾಕ್ಯ ಮುಗಿಯುವುದರೊಳಗಾಗಿ,
ಆ 'ಊಟ' ಎಂಬ ಏಡಕ್ಷರವ
ತವಕನ ತನ್ನ ಹೊಟ್ಟಗ ಹಾಕಂಡು

ಕಾಯುತ್ತಿದ್ದನೇನೋ
ಪಕಾಳಯ್ಯನು ಎದ್ದೂ ನಿಂತೂ
ಹೊದ್ದಿದ್ದ ದುಪ್ಪಟ್ಯ ಬಿಗಿ ಹಿಡೂದು
"ನನ್ನೂವಿ ಬರ್‍ಕಳ್ಳಿ ಸೊಮ್ಮೆ" ಅಂದನು.
ಅವನ ದಿಕ್ಕುಗ ಎಲ್ರೂವಿ ತಿರುಗ ಥರವಾಗಿ
ಆಗ ಗಾರಸಿದ್ಮಾವ ದನಿ ಮೊಳಗಿಸುತ
"ಇಲ್ಲಿಗಂಟಾ ಎಲ್ಲಿದ್ನಪ್ಪಾ...
ಇವ್ನ ಮನ ಹಾಳಾಗ!
ಇವ ಯಾನಾರೂವಿ ನಂ ಮೆರುವಣುಗ್ಗ ಬಂದುಬುಟ್ಟೂ....
ಆ ಮೆರುವಣುಗ್ಗ ಯಾನಾರೂ ಸುಂಟ್ರಗಾಳಿ ಬಂದೂ
ಅದು ಪಕಾಳಯ್ಯನ ದುಪ್ಪಟ್ಯ
ಹಾರ್‍ಸಗಂಡು ಹೊಂಟೋಗಿ ಅತ್ತಗ,
ಇತ್ತಗ ಇವ ಹುಟ್ಟಿದ ನಿರ್‍ವಾಣದಲಿ ನಿಂತ್ಗಂಡು
ಆ ನಮ್ಗ ಕಾಣುಸ್ತ...
ಎಲ್ರೂವಿ ಆ ಮೆರುವಣುಗನಿಯ ಬುಟ್‌ಬುಟ್ಟು
ದೌಡ್ ಒಡೀಬೇಕೂ
ಆ ಥರವಾಗಿ ಆಗುಬುಟ್ಟುದು ಎಲ್ಲಾರುವಿ..." ಅನ್ನಲು

ಪಕಾಳಯ್ಯ ಅದ್ಕ ಆಗ
"ಐ ಐ ಯಾನುಡ ಗಾರಸಿದ್ದ
ನೀ ಆಡ ಮಾತು ಐ ಐ" ಅಂತಿರಲೂ
ಎಲ್ಲರೂ ನಗುತಿರಲೂ
ನಿದ್ದೂವಿ ನಗುತಾಲೆ ಬಂದು ಆವರಿಸಿತಲ್ಲಾ!

* * * *

## ೧೫ ಆಗಿ, ಹೊತ್ತು ಮೂಡುವ ಮೊದಲಾಗಿ

ಆಗಿ,
ಹೊತ್ತು ಮೂಡುವ ಮೊದಲಾಗಿ
ರಾತ್ರ ಸಂಘದವರು ಹಾಡ್ದ ಪದಗಳು
ರಾಗಿಬೀಸೊ ರಾಗ್ವಾಗಿ ಬಂದು
ಮುಖ್ಯರಾದ ಕಿಸ್ನಪ್ಪರ ಎಬ್ಬಿಸಿತು.
ಎದ್ದು ನೋಡ್ತಾರೆ
ಎಲ್ಲಾ ಸೇನಾನಿಗಳೂ
ಮಾಭಾರತದ ಸಮರ ಮಾಡ್ವಾಗ
ಯಾರಕನಿ ತಗದು ಪೋಟ್ವ
ಮಾರಿಗುಡೀಲಿ ಹಾಸಿಟ್ಟ ಥರವಾಗಿ ಮಲಗವರೆ ಎಲ್ಲಾರು!
ಒಬ್ಬನ ಕತ್ತುನ ಮ್ಯಾಲ ಒಬ್ಬುನ ಕಾಲೊ
ಇನ್ನೊಬ್ಬನ ಹೊಟ್ಟಮ್ಯಾಲ
ಇನ್ನಿಬ್ಬರ ಕತ್ತೋಕಾಲೋ
ಈ ಪ್ರಕಾರವಾಗಿ.
ಆ ಬಂದು ಗುದ್ದುತ್ತಿದ್ದ ಗೊರುಕಾ ಸಬುದಾಕೆ ಬೆಚ್ಚ
ಪರಸ್ಥಳವಾಗಿ ನಿದ್ದಬಾರದ ದಾಕ್ಟರು
ತಮ್ಮ ಬುಟ್ಟಕಣ್ಣು ಬುಟ್ಕಂಡಿದ್ದರಲ್ಲಾ!
ಆಗ
ಕಿಸ್ನಪ್ಪರು ಎಲ್ಲರಗೂ ಏಳ್ರೋ ಏಳ್ರೋ ಅಂದರು.
ಅಂದರೂ
ಯಾರೂ ಏಳದಿರಲೂ
ಆಗ ಆ ಸಳಿಲಿ ಒಂದ್ನಿಮಿಸದ
ತಣ್ಣೀರು ತಾನವ ಮಾಡ್ಕಂಡು ಬಂದರು.
ಎಲ್ಲಾರೂ ಮಲುಗಿರಲು

ಹಾಗಾಗೆ ಎಲ್ಲಾರೂ. ಆಗ ಮಾಡಲೇನೂ ತೋಚದಾಯ್ತು.
ಆಗ ದಾಕ್ಟರಗ ರನ್ನಿಂಗ್‌ಗ ಎಬ್ಬಿಸಿದರು.

ಆ ಎದ್ದವರು ಕೇರೀಲಿ
ಸರಿಯಾಗಿ ನಡುದು ಊರಾಚಲು ಸಿಗಲು
ಆಗ ಈ ಈರ್ವರೂ ಒಬ್ಬರೊನ್ನೊಬ್ಬರು ನೋಡ್ಕಂಡರು
ಆಮ್ಯಾಲ ಕಣ್ಗಳಲ್ಲಿ ಮಾತಾಡ್ಕಂಡರು
ಆಮ್ಯಾಲ ಧಾಂಧೂಂ ಅಂತ ಹೆಜ್ಜ ಹಾಕಂಡೂ
ದಸ್‌ಪುಸ್ ಅಂತ ಉಸ್ಸುರ ಮೂಗ್ಲೆ ಬುಟ್ಗಂಡೂ
ಆ ರನ್ನಿಂಗ್‌ನ್ನು ಈ ಒಂದು ಚಂದದಲಿ ಮಾಡುತಿರಲೂ

ಆ ಟೇಮಲ್ಲಿ
ಊರ ಯಮ್ಕಗಳೆಲ್ಲಾ ಒಟ್ಟಾಗಿ ಆಚ್ಗ ಬಂದು
ಒಬ್ಬರ ಮೊಕವು ಒಬ್ಬರ್ಗ ಕಾಣ ಒಳಗಾಗಿ
ಆಚ್ಗ ಬಂದು ಕೂರುವ ಟೇಮು ಅದು.
ಈ ಕುಂತ ಯಮ್ಕಗಳ ಸಾಲುಗ
ಆ ಒಂದು ಚಂದದ ರನ್ನಿಂಗು ಕಂಡುಬಂದೂ
ಇದ್ಯಾನಪ್ಪ ಸಿವ ಊರ್ಗ ಈಪಾಟಿ ಸುತ್ತುತಾ ಇರೋದು ಅಂತ
ಅವರು ನಡುಗೋಗಿ
ತಂ ಸೆರುಗಲಿ ತಂ ಮೊಕ್ವ ಮುಚ್ಗಂಡು
ಕವಕನ ನಿಂತ್ಗಂಡೂ
ಇನ್ನು ನಿಂತ್ಕಂಡ ಕೆಲವರ್ಗ ಆದ ಬೆದುರಿಕೆಗೆ
ಅಲ್ಲೆ ಕುಂತ್ಗಳೊ ಥರವಾಗ್ತ ಅತ್ತಗಾ

ಇತ್ತಗಾ ಅದಾವುದನ್ನೂ ನೋಡದ
ಈ ಈರ್ವರೂ ನ್ಯಾರವಾಗಿ ತಮ್ಮ ರನ್ನಿಂಗ್ ಮಾಡ್ತ ಇರಲು
ಈ ಕವಿಯಂಥವರಾಗಿದ್ದರ
ವಸಿ ಆ ಈ ಕಡ್ಗ ನೋಡ್ತಿದ್ದರೇನೊ
ಇರಲಿ.

ಈ ಒಂದು ಚಂದದಲಿ ರನ್ನಿಂಗ್ ಮಾಡಿದವರು
ಮಾರಿಗುಡಿಗ ಬಂದುಬಿದ್ದು
ಅವರು ನಡೆಸಿದಂಥ ಉಸುರಾಟದ ಬಗೆಯು
ಒಂದಿಬ್ಬರ ಬುಟ್ಟು ಎಲ್ಲರನ್ನೂ
ಎಬ್ಬುಸಿಬುಟ್ಟಿತು.

ಅಲ್ಲುಗ
ಆ ಎದ್ದವರೆಲ್ಲಾ ಒಬ್ಬೊಬ್ಬರಾಗಿ
ಮೆರುವಣುಗ್ಗ ನಿಲ್ಲತೊಡಗಿ
ಅಲ್ಲೆ ಪಕಾಳಯ್ಯನು ತನ್ನ ದುಪ್ಪಟ್ಯ ಬಿಗಿ ಹಿಡ್ದು
ಮುಂದಾಗಿ ನಿಂತಿದ್ದನು.

ಇನ್ನು ಮೆರುವಣುಗ ಹೊರಡಬೇಕೂ
ಆಗ ತನ್ನ ಹುಬ್ಬುಗಳ ನಡುವೂ ತಳಮಾಡಿ
ಕುಂಕುಮ್ವ ಧರಿಸಿದ್ದ ಗಾರಸಿದ್ಮಾವನು
ಅಂಬೇಡಿಕರ್ ಫೋಟೊಗ ಸರಣುಮಾಡಿ
ತಟಕನ ತನ್ನ ಮಲ್ಲುಜುಬ್ಬದ ಮರೆಲಿರಿಸಿದ್ದ ತೆಂಗ್ನಕಾಯೆತ್ತಿ
'ಏಳುಮಲೇ ಎಪ್ಪತ್ತೇಳು ಮಲೇ
ನಮ್ ಎತ್ತಪ್ಪಸೋಮಿ ಮಾದಪ್ಪಗ ಉಘೇ ಅನ್ನೀ...' ಅನ್ತ
ಪಟಾರನ್ಸಿ ಚಲ್ಲಾಡ್ಸಿದನು.
ಐಕಳು ಪೈಕಳು ಕಾಯ್ಚೂರ್ಗ ಮುತ್ಗಂಡು
ಉಘೇ ಅಂತ ಬಿದ್ದಿರೋವಾಗ
ಸಂಘದ ಮೊಕಂಡರು ಬೆಚ್ಚಿಬಿದ್ದೆದ್ದೂ
ಇತ್ತಗ ಮಂದಗವಿ ಗೋವಿಂದು
ಚಲ್ಲಾಡ್ತ ಹಾರ್ದ ಕಾಯ್ಚೂರ ಬಾಯ್ಗ ಬರ್ಸಕಂಡು ತಿಂತಾ
ಮಿ॥ ಕೇಬಿಯು ನೆಗಾಡ್ತ, ಅಲ್ಲುಗ ನಾಗರಾಜುವು ಬಂದು–
"ಇದ್ಯಾಕ್ರಿ ಹಿಂಗೆಲ್ಲಾ ಮಾಡುದ್ರಿ?" ಅಂತ್ಲೆ
ಗಾರಸಿದ್ಮಾವ ಅದ್ಕ "ಒಳ್ಳೇದಾಯ್ತುದಕನ
ನಡೀರಿ ಸೋಮೀ

ಇದ್ಯಾವ ಕಾಯ್ನೊಡದಾಟ ಅಂದ್ಕಂಡಿದ್ದೀರಿ
ತಲಲೆ ಸಾವ್ರ ಚಚ್ಚಾಕ್ತೀನಿ ಬೇಕಾರ"
ಅಂದನು.

ಸಂಘದ ಮೊಕಂಡರು
ತಂತಂ ಮೊಕ್ವ ಬಿಕ್ಕಂಡಿದ್ದರು
ಗಾರಸಿದ್ಮಾವಗ ಇದರ ಅರುತಮಾನ ಸಿಗದಿರಲು
ಮೆರುವಣುಗಲಿ ಢಿಕಾವಾಗಿ ಸೇದಲು ತಂದಿದ್ದ
ಪ್ಯಾಸಿಂಗ್‌ಸೊ ಸಿಕರೋಟಲಿ
ಹೊಗ್ವ ಎಬ್ಬಿಸತೊಡಗಲು ಹೊಗ್ವ
ಕಿಸ್ನಪ್ಪರು "ಯಾರೂ ಬೀಡಿಸಿಗರೇಟು ವಗೈರೆ
ಸೇದಕೂಡದು" ಅಂದರು.
ಇದೊಳ್ಳೆ ಕತ ಆಯ್ತಲ್ಲಾ ಅಂದ್ಕಂಡು
ಗಾರಸಿದ್ಮಾವ ಮೆರುವಣುಗ ಹಿಂದ್ಕ ಬಂದು
ಸಿಕರೋಟ್ನ ಹೊಗ್ವ ಎಬ್ಬುಸ್ತ ಬತ್ತಿರಲಾಗ
ಆ ದಾಕ್ಟರು
ಅಲ್ಲಿಂದ್ಲೆ ಬೀಡ್ಯ ಬಾಯ್ಗ ಕಚ್ಚುಗಬಂದು
"ವಸಿ ಬೆಂಕಿಕೊಡ್ರೀ" ಅಂತ ಅಬ್ಬರಿಸಿದರು.
ಬೆಚ್ಕಂಡು ಗಾರಸಿದ್ಮಾವ–
"ಸೋಮಿ ಸೋಮಿ! ಇದ್ಯಾನ ಸೋಮಿ ನೀವು ಮಾಡ ಕೆಲ್ಸ?
ಅಪ್ಪಪ್ಪಾ ನಂ ಜಾತಿಮಾನ್ವ
ಊರೊಳ್ಗ ಅತ್ತಗ ತಗ್ದ್‌ಬುಡ್ತಿದ್ದರೆಲ್ಲ್ಯಪ್ಪ"
ಅಂತ ದಾಕ್ಟರ ಬಾಯ್ಲಿದ್ದ ಬೀಡ್ಯ ಕಿತ್ತೆಸೆದು
ಆ ಬಾಯ್ಗ ಸಿಕರೋಟು ಇಡಲು
ಆಗ ಈರ್ವರೂ ಆ ಮೆರುವಣುಗ್ಗ
ಹಿಂದ್ಲಗೋಡೆಗಳಂತಾಗಿ
ಹೊಗಬುಟ್ಗಂಡೂ
ಆ ಒಂದು ಗಳುಗಾರೂ ಸುಮ್ಮನಿರಲಾರದ
ಗಾರಸಿದ್ಮಾವ

ಮಾತ್ಗಬಿದ್ದನು– “ಆ ಬದ್ರವತಿ ದಿಕ್ಲ ಕಿಸ್ನಪ್ಪರು
ಸಾಮುಗೀಮು ಮಾಡಿರಕನಿ...?”
ಅಹಹಾ ದಾಕ್ಟರು ನಕ್ಕರು.

“ನಂಗುವಿ ಸಾಮೂಗೀಮೂ ಅಂದ್ರ ಪ್ರಾಣಕನ್ನಿಸೋಮಿ!
ದಸರ್ಕ ಕುಸ್ತಗ ಬಂದಿದ್ದಿ. ಅಲ್ಲೆನಾರ ನನ್ನ
ನೋಡ್‌ಗೀಡಿದ್ದಿರ್‍ಯಕನೀ?”

ಓಹೊಹೊ ದಾಕ್ಟರ ಮಯ್ಯಿಡೀ ನಕ್ಕಿತು.

“ನಾ ಮಾಡದು ಗಾರಕೆಲ್ಸಕನ್ನಿ ಸೋಮಿ.
ಈ ಕರ್ಣ ಹಿಡ್ಕಂಡು ನಾನೂವಿ
ಆ ನಿಮ್ಮ ಸಕಲೇಸಪುರ,ಇರಾಜಪೇಟಾ, ಆ ಮಡಕೇರಿ...
ಆ ಮಡ್ಕೇರಿ ಅಂತ್ಲಿಯ ನೆಪ್ಪಗ ಬಂತು ನೋಡೀ...
ಹೀಗಿಯ ಒಂಜಿನ ಅಲ್ಲಿ
ಬಸ್ಟಾಂಡ್ಲೆ ಮಲಿಗಿವ್ನಿ ನಾನು
ಇನ್ನೂವಿ ಬೆಳುಕರಿದಿರಲಿಲ್ಲಾ
ಇದ್ರಾ
ಅದ್ಯಾನ, ಅದ್ಯಾನಾ ಸೋಮಿ ಅಲ್ಲಿ ಯಮ್ಮಾ!
ಮೂರ್ಮಕ್ಕಳ ಹೆತ್ತವರಂಥವ್ರಿಯಾ
ಮೂರುಬೆಟ್ಟಿನ ಅಗುಲಕ ಚಡ್ಡೀ ಇಕ್ಕಂಡೂ...
ಯಮ್ಕ ಚಡ್ಡಿ ಇಕ್ಕಂಡುಕನ್ನಿ ಸೋಮಿ
ಅದೂವಿ ಮೂರ್ಬೆಟ್ಟಿನ ಅಗಲ್ಕ...
ಅಯ್ಯಯ್ಯಪ್ಪಾ...
ಆ ಯಮ್ಕ ಆಪಾಟ್ಗ ಓಡೋ ಆ ಥರಕಾ
ನಾನೇ ಬೆವುತೋಗೀ...
ಕವಕನ ನಂಗ,
ಅವ್ಯೆ... ನಾ ನಿದ್ದಲಿದ್ದಾಗ
ಯಾವಳೋ ಸ್ತ್ರೀಮಲೆಯಾಳ ದೇಸ್ದವಳಗ

ನನ್‌ಮ್ಯಾಲ ಗ್ಯಾನಗೀನ ಬಿದ್ದು
ತವಕನ ತನ್ ರಾಜ್ಯಕ
ಎತ್ಗ ಬಂದು
ಇಳ್ಸುಕಬುಟ್ಟಿದ್ದಳಕನೀ... ಅನ್ನುಸ್ತಿರದು..."

ಅಹಹಾ ಓಹೊಹೋ ದಾಕ್ಟರ ಮಯ್ಯಿಡೀ
ಕುಲುಗಾಡ್ತ ನಕ್ಕಿತು.

"ಅದ್ಯಾನ ಸೋಮಿ ರಾತ್ರ
ನಿಂ ಮಾತ್ನ ತಲಬುಡ ಒಂದೂವಿ
ನಂಗಿಯ ತಿಳಿನಿಲ್ವಲ್ಲಾ"–

ಅಹಹಾ ಅನ್ನದ ದಾಕ್ಟರು ಅಂದರು ಗಂಭೀರವಾಗಿ
ಏನಂದರ "ನಾನು ಹೇಳ್ತಾ ಇದ್ದುದು ಏನಪ್ಪ ಅಂದ್ರೇ...
Contradictionnu" ಅಂದಂಥ ದಾಕ್ಟರುಗ
ಆ 'nnu' ಉಚ್ಚಾರ ಮಾಡ್ವಾಗ
ಹೊರುಳದ ನಾಲಗ ತುದಿ ಕತ್ತರ್ಸಿ
ರಕ್ತ ಚಿಲುಗುಟ್ತಾ ನರಳ್ತಾ...
ಇತ್ತಗಾ ಈ ಗಾರಸಿದ್ಮಾವ
ಮಯ್ಯಿಮುಲ್ಲುಜುಬ್ಬವ ಕುಲುಕುಸ್ತ
"ಐ ಅದಾ? ಗೊತ್ತುಕನ ಬುಡೀ...
ಯಾನೋ ಬ್ಯಾರೆ ಇರ್ಬೇಕೇನ ಅಂದ್ಕಂಡಿದ್ದೀ ನಾನು..."
ಅಂದನು.

ಆ ತುದಿ ನಾಲುಗದಲಿ ರಗುತವಾಡ್ಸುತ ದಾಕ್ಟರು
ನಗಲಾರದವರಾಗಿದ್ದರು.

ಅದಾಯ್ತಾ ನಡೀತಾ ಮೆರುವಣುಗ
ಏಡುಸಾಲುಗಳ ನಡಾಂತರದಲ್ಲಿ

ಅಮಾಸನು
ದೇವರದಯದಿಂದ ಗೋಣೀಚೀಲರಹಿತ
ಬಾಡುಗ ಸೈಕಲ್‌ಬುಡ್ತ
ಸಾಲು ಸರಿಯಾಗುಸ್ತ ಬರುತ್ತಾ
ತೂರಮ್ಮನ ಹಟ್ಟಿಮುಂದ
ಅಲ್ಲಿ ಬಾಣ್ತಿ ಕೆಂಪಿ
ಮಂಡಿಮ್ಯಾಕ್ಕ ಸ್ಯಾಲ್ವ ಎತ್ಗಂಡೂ
ನವಲು ಲೇಸ್ನ ಲಂಗವ
ಮೊಣ್ಕಾಲು ಕಾಣ್ಸುವಂಗ ಇಳಿಬುಟ್ಗಂಡೂ
ಕಾಲ್ಬೆರಳಲ್ಲಿ ಕಣ್ಣುಗೊತ್ತುಗೊಳ್ಳುವಸ್ಟು
ಚಂದದ ಪಿಲ್ಲಿ ಹಾಕಂಡೂ
ಪಾತ್ರಪಗಡ್ವ ಬೆಳುಗ್ತಿರೊ
ಅರುಸಿನದ ಮಯ್ಯ ಅವಳ ಕಂಡು
ಮೆರುವಣುಗಲಿದ್ದ ಕೆಲುವರ ದುಡ ಕೆಟ್ಹೋಯ್ತು.
ಉದಾಹರಣೆಗೆ–
ವರದಾ ಕೇವಲ ಕೆಮ್ತಾ
ಸಿಂಗು ತುಟಿ ಮುಚ್ಗಂಡು ಮೂಗ್ಲಿಯ ನಸಗುಡ್ತಾ
ಹೆಬ್ಲಿಂಗೂಗ ಆಧ್ಯಾತ್ಮವ ದರ್ಶಿಸಿದಂತಾಗಿ ನಿಂತುಬುಡಲು
ದೊಡ್ಡಣ್ಣಗ ಪರಿಸ್ಥಿತಿಯು ಅರುವಾಗಿ
ಹೆಬ್ಲಿಂಗೂಗ ತಿವ್ದ “ಸಾರ್ ಸಾರೂ...
ಈಗ ಗಳುಗಾ ಸರಿಯಾಗಿಲ್ಲ
ದೊಡ್‌ದೊಡ್ಡವರೆಲ್ಲಾ ಬಂದಿರೋ ಟೇಮು ಇದು
ಈಗೊಸಿ ಅನ್ಸರಸ್ಕಂಡು ಬನ್ನೀ” ಅಂತ
ಬಾಯ್ತುಂಬ ಜೇನುಸುರುಸ್ತ ಅನ್ನಲು
ಹೆಬ್ಲಿಂಗು ನಡೆಯಲು
ಮೆರುವಣುಗ ನಡೆದು
ಚನ್ನನ ಹಟ್ಟೀ ಮುಂದಕ ಬಂತೂ!

ಆ ಕೂತ್ಗಳ ತಳದಲ್ಲಿ

ಚನ್ನನ ಅಪ್ಪನು ಕೂತೂ
ವಸ್ತುಲಿಗಂಟಿ ಚನ್ನನ ಅವ್ವ ನಿಂತೂ
ತಮ್ಮ ಮಗನ ಥರವ ಕಾಣೋ ತವಕವಾಗಿ ಇರಲೂ

ಮೆರುವಣುಗಲಿ
ಗಾರಸಿದ್ದ್ಮಾವ ಕಾಣ್ತಲೆ
ಚನ್ನನ ಅಪ್ಪ
"ಅಡಡೇ ಗಾರಸಿದ್ದ!
ಇತ್ತಗ ನೋಡ್ದೆ ಹೋಯ್ತನಲ್ಲಪ್ಪಾ
ನೋಡ್ದಿಯಾ ಅವ..." ಅಂತ್ಲೆ
ಬಂದಂಥ ಗಾರಸಿದ್ದ್ಮಾವನ ಎಳ್ದು ಕೂರ್ಸಗಂಡು
ಅವನ ತಲ ಸವುರ್ತಾ
"ಇನ್ನೂವಿ ನಿನ್ ತಲಲಿ ಕೂದ್ಲವಕಯ್ಯ
ಮಾತ್ನ ಪರಕಾರ ಬೀಡಿ ಮಡ್ಗುಬುಟ್ಟು
ಮುಂದ್ಕ ನಡೆಯಯ್ಯ" ಅಂದನು.

ಗಾರಸಿದ್ದ್ಮಾವ ನಗಾಡ್ತ–
"ಎಲ್ರೂವಿ ದನಕುರಿ ಮೇಯುಸುದ್ರ
ನೀನು ನರಮನುಸರ್ನೆ ಮೇಯಿಸ್ತಿಯ್ರಕಪ್ಪಾ" ಅಂದು
ನಾಕಾರು ಬೀಡಿ, ಒಂದು ಸಿಗರೋಟ್ನು ಮುಂದಿಡಲು,
ಚನ್ನನ ಅಪ್ಪ – "ಈ ಟೇಮ್ಲಿ
ನಂ ಚನ್ನ ಇದ್ದಿದ್ರ..." ಅಂತ್ಲೆ,
ಗಾರಸಿದ್ದ್ಮಾವ "ಐ ಅದ್ರ ಖದರ್ರೇ
ಬ್ಯಾರೆ ಥರವಾಗಿರ್ತಿತ್ತುಕನಾ" ಅನ್ತ
ಎದ್ದು ಮೆರುವಣುಗ್ಗ ಕೂಡುಕೊಂಡನು.

* * * *

## ೧೬ ಇತ್ತಗ ಚನ್ನನ ಅಪ್ಪನ ಕಣ್ಗಳಲಿ

ಇತ್ತಗ ಚನ್ನನ ಅಪ್ಪನ ಕಣ್ಗಳಲ್ಲಿ
ಮಗನ ರೂಪವು ಎದ್ದು ಬಿದ್ದಾಡುತ
ಮುಂದಿದ್ದ ಬೀಡ್ಗಳು ಹೊಗೆಯಾದವು.
ಆಗ ತಲಹುಳಾ ಪತರಗುಟ್ಟಲು
ಬೀಡಿಯಾಚ್ನೆಗೆ
ಶಿವಾಚಾರದ ಅಂಗಡಿ ಮುಂದಕ ಚನ್ನನ ಅಪ್ಪ ಬಂದು ನಿಲ್ಲುತ್ತಲೆ
ಅಲ್ಲಿ ಕುಂತು ನಿಂತ ಶಿವಾಚಾರದವರು
'ಬನ್ನಿ ಬುದ್ಯೋ' 'ಬನ್ ಬನ್ನಿ ಸೋಮೋ' ಅಂತಂತ
ತಲಗೊಂದು ಮಾತು ಎಸೀತಾ ನಗಾಡತೊಡಗಿದರು.
ಚೆನ್ನನ ಅಪ್ಪ ಬೆಚ್ಗಂಡು
"ಇದ್ಯಾಕ ಧಣಿಗಳ ಈ ಥರವಾದ ಮಾತ್ಗಳೂ..." ಅಂತ್ಲೆ
ಆಗ– "ಇನ್ಯಾನ ಮಾಡೋದು ಬುದ್ಯೋ.
ನಿಂ ಜಾತ್ಯವರೆಲ್ಲಾ ನಾಳಕಿಂದ್ಲಿಯ ಜೀತ ಬುಟ್‌ಬುಟ್ಟರಂತಲ್ಲಾ..."
ಅಂತ ಒಬ್ಬ ಅಂದು ನಿಲ್ಲುಸುದ್ರ
ಇನ್ನೊಬ್ಬ "ಜೀತ ಬುಟ್‌ಮ್ಯಾಲ
ಹೊಲಾರ್ನೇನ ಮಾತಾಡ್ಸಕ ಆದ್ದಯ್ಯ!
ಯಾನಾರೂ ನೊಡಕ್ಕ ಆದ್ದಯ್ಯ!
ಆಗ ಹೊಲಾರ್ರು
ಅನ್ನತುಪ್ಪನಿಯಕಯ್ಯೋ ಉಣ್ಣಾದು..." ಅಂದನು.

ಆ ಮಾತ್ಗ ಬಿದ್ದೂಬಿದ್ದು
ಚನ್ನನ ಅಪ್ಪ ನೆಗಾಡ್ತ
ಈ ನಗೂಗ ಯಾರೂ ಮುಂದ್ಕ ಮಾತಾಡಕ ಆಗದಂತೆ
ನಗಾಡಕ ತೊಡಗಿದನು.

ಆಗ ಅವರು ಬಾಯ್ತೆಗೆದರೂ
ಅವ ನಿಲ್ಸದೆ ನಗೂವ,
ಅಲ್ಲಿ ಕುಂತಿದ್ದ ಮೆಡರುಗಣ್ಣಿನ ಹೆಳವನೂ ವದುರಾಡ್ತ
ವಾಲಿ ನಿಂತ್ಕಂಡು "ನಿಲ್ಸುಡ ಸಿದ್ದಿಮಗ್ನ ನಿನ್ ನಗೂವ
ಚಂದ ಅಂತ ನಗ್ತಾನ ನಗೂವ
ಈಗ್ಲಾರೂ ತಿಳ್ಕ ಬಡ್ಡೇದ್ನೇ...
ಇಲ್ಲಿಂದ ಓಟ್ ತಕ್ಕಂಡು ಗೆದ್ಕಂಡು ಹೋಯ್ತರಲ್ಲಾ...
ಆ ನಿಮ್ ಜ್ಯಾತವರ
ಆ ಇಂದ್ರಾಗಾಂದಿ ಅಂಬವ್ವೇ ಜೀತ್ಕ ಇರ್ಸಿಗಂಡಿದ್ದಾಳಂತ!
ಆ ಥರವಾಗಿ ಅವ್ವೆ ಇರಬೇಕಾರ
ಇನ್ನು ನಿಂಮ್ಗಳ ಜೀತಬುಡ್ರೋ ಅಂದಾಳ?
ಇಲ್ಲಿ ನಾಕ್ ಐಕ ಕೂಕ್ಕಂಡ್ರ
ದಿಳ್ಳಿಗ ಕೇಳ್ಸ ಮಾತುಡ ಅದೂ?" ಅಂದನು.

ಆಗ್ಲೂವ ಚನ್ನನ ಅಪ್ಪ ನಗ್ತಾಲೇ ನಗೂವ:

"ಬುದ್ಯೆ, ಇದು ಯಾವ್ ಥರ್ವಪ್ಪಾ ಅಂದ್ರ–
ಗುಳ್ಳನರಿ ಲಿಂಗ ಕಟ್ಟಿಸ್ಗಂಡ ಥರಾ... ಕೇಳೀ,
ಒಂದ್ಸಲ ಸರಣರೆಲ್ಲ ಲಿಂಗಧಾರಣ ಮಾಡ್ಸಕಳ್ತಾ ಇರ್ವಾಗ
ಅದ್ನೀಗ ಒಂದು ಗುಳ್ಳನರಿ ನೋಡ್ಕಬುಡ್ತಂತ
ಆ ನೋಡ್ದ ಗುಳ್ಳನರಿ
ನೋಡ್ಕಂಡು ಸುಮ್ನಾರೂ ಇತ್ತ?
ತಾಡೂ, ನಾನೂವಿ ವಸಿ ಲಿಂಗ ಕಟ್ಟುಸ್ಕಳವು
ಅಂದ್ಕಂಡ್ ಬಂದು "ನಂಗೂವಿ ಲಿಂಗಕಟ್ಟಿ ಸೋಮ್ಯೆ"
ಅಂತ ಕೇಳ್ತಂತ...
ಆ ಲಿಂಗ ಕಟ್ಟವರು
ಅದ್ರ ಮಾತನಿಗ ಕೇಳ್ಸಕಂಡು
ಗುಲ್ಲಂತ ನೆಗಾಡ್ತ
'ನೀನು ಬಾಡುಬಳ್ಳನಳ್ಳಿಗಿಳ್ಳಿ ತಿಂನವ್ನು,
ನಿಂಗ ಬ್ಯಾಡ' ಅಂದ್ರಂತ.

ಅದ್ಕಾರೂ ಸುಮ್ನಾಯ್ತು ಅದೂ?
ಸುಮ್ನಿರಲಾರ್ದೆ
'ಅದ್ನೆಲ್ಲಾ ತಿಂಬುದ ಬುಟ್‌ಬುಡ್ತಿನಿಕನ
ಕಟ್ಟೀ ಲಿಂಗಾ' ಅಂತ
ಆಣೆ ಬಾಸ ಮಾಡಿ
ಗೋಗರ್ಕಂಡು
ಲಿಂಗಧಾರಣ್ವ ಮಾಡ್ಸಗಳ್ತದಂತ ಕೊನಗೂ!

ಮ್ಯಾಲ ಇದ್ನೆಲ್ಲಾ ನೋಡ್ತಾ ಇರೋ ಆ ದೇವೇಂದ್ರಾಯ
ಅವ್ನಾರೂ ಸುಮ್ಗಿದ್ನಾ?
ಸುಮ್ನಿರ್ಲಾರ್ದೆ ಏನ್ಮಾಡ್ದ?
'ನೋಡೌ, ಇದರ ದುಡ ಪರೀಕ್ಸ್‌ವು' ಅಂದ್ಕಂಡು
ಮಳ ಬರ್ಸಿದನಂತ ಮಳ್ವ. ಆ ಮಳ್ಗಾ ನಳ್ಳಿಗಳು ಎದ್ದೂ
ಪಿತಪಿತ್ನಾ ಓಡಾಡ ಥರವಾಗಿ ಓಡಾಡ್ತ
ಇದ ಕಣ್ಣಾರ ನೋಡ್ಕಂಡೂ
ಲಿಂಗ ಕಟ್ಸಗಂಡಿರೋ ಈ ಗುಳ್ಳನರಿ
ಎಸ್ಟ್‌ಕಾಲ ಅಂತ ತಡ್ಕಂಡಿದ್ದುದೂ?
ಆಗ ಆ ಗುಳ್ಳನರಿ ಏನ್ಮಾಡ್ತು... ಕೇಳೀ...
ತನ್ನ ಕುತ್ತಿಗೇಲಿ ಕಟ್ಟಿದ್ದ ಲಿಂಗ್ವ ತಗ್ದು
ಕಳ್ಳಿ ಬೇಲಿಗ ನ್ಯಾತಾಕ್‌ಬುಟ್ಟೂ...
ಆ ಓಡಾಡೋ ನಳ್ಳಿಗಳ ಓಡಾಡ್ಸಕಂಡೂ
ಅವುಗಳ ಮ್ಯಾಲ ದಬ್ಬಾಕಂಡು ಬಿದ್ಕಂಡೂ
ಸಿಕ್‌ಸಿಕ್ಕಿದ್ನೆಲ್ಲಾ ತತರಪಿತರ್ನ ಹಿಡ್ಕಂಡೂ
ಸಂಪತ್ತಾಗಿ ತಿಂತಾ ಇತ್ತಂತ. ಆಗ ಇದು..."

ಆಗ, ಅವೇ ಬಂದು
ಮುಂದ್ಕ ಬಿದ್ದ ಬೀಡ್ಗಳ ಆಯ್ಕಂಡೂ
ಆ ಆಯ್ಕಂಡ ಚನ್ನನ ಅಪ್ಪ
ತನ್ನ ತಳಕ ಬಂದು ಕೂತನು.

* * * *

## ೧೭ ದಲಿತ ಸಂಘದ ಓಡಾಟ ಕೂಡಿದ ಅಮಾಸಗ

ದಲಿತ ಸಂಘದ ಓಡಾಟ ಕೂಡಿದ ಅಮಾಸಗ ತಿಂಗಳ ಕಾಯಕದಲ್ಲು ಮೂರ್ಜಿನ ಖೋತವಾಗ್ತ ದುಡ್ಡುಕಾಸು ಓಡಾಡುವುದು ನಿಲುಗಡೆಯಾಗಿ ಅಮಾಸನ ಆರ್ಥಿಕ ಸ್ಥಿತಿಯು ಡಲ್ ಹೊಡೀತಾ ಬೀಡಿಗೂ ಭಂಗ ಪಡಬೇಕಾದ ಸ್ಥಿತಿಗ ತಲುಪಿದನು. ಆ ಬರಬೇಕಾದ ಹಳ ಬಾಕಿಯ ಸಾಬರು ಆ ಊರು ಈ ಊರು ಕಾಣುಸ್ತ ಆ ಸಿಗದ
ಸಾಬರ ಪತ್ತೆಗಾಗಿ ಅಮಾಸ ನಂಜಲಗೂಡ ಲೋಕ್ವ ಸುತ್ತೀಸುತ್ತಿ ಸುಣ್ಣವಾಗ್ತ ಅಂತೂ
ಒಂಜಿನ ಕಣ್ಣುಗ ಬಿದ್ದಾಗ ಆಗ ಓಡೋಡ್ತ ಬಂದು ಸಾಬರು ಅಮಾಸನ ಏಡೂ ತೋಳ್ನೂ ಬಿಗಿಹಿಡ್ದು ಅಲ್ಲಾಡುಸ್ತ:

"ಅರರೆ ಅಮ್ಮಾಸ... ಎಲ್ಲಿ ಹೋಗಿದ್ದೋ ಮಾದರ್‌ಚೊತ್. ನಿನ್ದು ಮಾಲು ಯಾಕ್ಲ ಈಗೀಗ ಕಾಣ್ತಿಲ್ಲಾ ಬೋಸುಡಿಕೆ. ಬ್ಯಾರೆಯವರ್ಗೆ ಬಿಕರಿ ಮಾಡ್ತ ನಮಾಕ್‌ಹರಾಮ್‌ಗಿರಿ ಮಾಡ್ತಿದ್ದೀಯೇನ್ಲೆ ನಿನ್ನೌನ ಬೋಸುಡಿಕೇಯ. ನಮ್ದಕೆ ಗೊತ್ತಾಗಲ್ಲ ಅಂದ್ಕಂಡಿದ್ದೀಯೇನ್ಲೆ ನಿನ್ನಕ್ಕನ್? ಈಗ ಅಡ್ವಾನ್ಸ್ ದುಡ್ಡ ಮಡ್ಗುಬುಟ್ಟು ಮುಂದ್ಕ ಇಸ್ಟೆಫ್ ಇಡು..."

ಅಂತಂತ ದಬಾಯುಸ್ತ ಸಾಬರೂ ಆ ಬಾಯ ಬುಡಲೂ ಅಮಾಸಗ ಬುಡದ ಸಾಬರೂ:

"ಥತ್ ತೇರಿ ನಿಂಗ ಹೇಳೋದ ಮರ್ತಿದ್ದೆ ನೋಡು. ನಾನು ಬೊಂಬಾಯ್‌ಗೆ ಹೋಗಿದ್ದು ನಿಂಗ್ ಗೊತ್ತಲ್ಲಾ! ಅಲ್ಲಿ ನಿಮ್ದು ಚೊಕ್ರ ಚನ್ನಂಗೆ ನೋಡ್ದೆ ಕಣ್ಲೇ. ಏನ್ ಅಂದ್ಕಂಡಿದ್ದೀಯಾ ಈಗ ನಿಮ್ದು ಚನ್ನನ್ನ ಅಲ್ಲಿ! ಇಡೀ ಬೊಂಬಾಯ್ ಮೇಲೇನೆ ಅವ್ನು ಏಓನ್ ದಿಲ್‌ದಾರ್ ಅವ್ನೆ ಅವ್ನು..."

ಸಾಲದೊ ಅಮಾಸಗ, ಮುಂದ್ಕ ಹೇಳಲು ಸಾಬರೂ:

> "ತಿಳ್ಕೋ... ಈ ಬಂಚೊತ್ ನೆಲ್ದಮ್ಯಾಲ ಕಾಲು ಇಡಲ್ಲ ಅವ್ನು. ಕಾರ್ನಲ್ಲೆ ಅವನು ಓಡಾಡದೆಲ್ಲಾ. ನಾನು ರಸ್ತೇಲಿ ನಿಂತಿದ್ದವನು 'ಅರೇಬಯ್ಯಾ ಚೆನ್ನಾ!'
> ಅಂದೆ ನೋಡು. ಅಷ್ಟರೊಳಗೇನೆ ನನ್ಮಗಂದು ಬೇವರ್ಸಿ ಕಾರು ಒಂದ್‌ಮೈಲಿ ದೂರ ಹೊಂಟೋಗ್ ಬುಡಾದ!"

ಸಾಲದೊ ಅಮಾಸಗ, ಮುಂದ್ಕ ಉಸುರಾಡ್ತ ಸಾಬರೂ:

"ಕಾರು ನಿಂತಿದ್ದ್ರ ನಿನ್ ಇಚಾರಾನೂ ಮಾತಾಡ್ತಿದ್ದೆ ತಿಳ್ಕೊ. ಅದ್ಕೇನು
ದುಡ್ಡುಕೊಡಬೇಕಿತ್ತೇನ್ಲೇ? ಎಸ್ಟ್ ಆದ್ರೂ ಚೆನ್ನ ನಮ್ದುಕಡೆ ಚೊಕ್ರ ತಾನೆ?
ಅರೆಬಯ್ಯಾ ಅನ್ನುವಷ್ಟಕ್ಕೇನೆ ಆ ಬೆಂಚ್‌ಕಾರ್ ಒಂದ್‌ಮೈಲಿ
ಹೊಂಟೋಯ್ತಲ್ಲಾ! ನೀನಾಗಿದ್ದರೂ ತಾನೇ ಏನ್ಮಾಡ್ತಿದ್ದೆ?"

ಸಾಲದೋ ಅಮಾಸಗ, ಏದುಸುರಾಡ್ತ ಸಾಬರೂ:
ಬೊಂಬಾಯ್‌ಮೆ ಚೆನ್ನ ಏನಾಗವ್ನೆ ಗೊತ್ತೇನ್ಲೇ ಬೋಸುಡಿಕೇ. ತ್ರಿ ಇಸ್ಟಾರ್
ಹೊಟಲ್‌ಮೆ ಮೇನೇಜರ್ರು ಗೊತ್ತ? ಅವನ್ದು ದಿಲ್‌ಗೆ ನಿಮ್ಮೂರ್ ಸಾವ್ಕಾರ
ಒಂದು ಸ್ಯಾಟ ತಿಳ್ಕಾ..."

ಎಂದರೋ ಸಾಬರೂ

ಬಾಕೀ ಮಾತು ಇರಲೀ ಅಮಾಸಗ, ಅಮಾಸನೇ ಅಮಾಸನ ಮರುತೂ
ಊರ್ಗ ಅಮಾಸನು ಹರಿಯೂತ ಬಂದೂ ಅದು ಆ ಸಂಜ ಆ ಗಡಂಗುಗೂ
ಬಂದೂ

ಗಾರಸಿದ್ಮಾವನು ಮತ್ತಾಗಿ ಕೂತು ವಾರ್ದ ಬಟವಾಡೆ ಹತ್ತತ್ ರೂಪಾಯ
ಒಂದಾದ
ಮೇಲೊಂದ ಎಸೀತಾ ಆ ಸುತ್ತಲವರಿಗೂ ಏರುಸ್ತ ಚಾಕ್ನಬೋಟಿ ಕಯ್ಮಾದಿಗಳ್ಗ

ಹೆಂಡ್ವ ಕಲ್ಸಿ ನೆಸದಾಡುಸ್ತ ಆ ದೇಹಗಳು ಮರ್ತು ಉರುಳಾಡ್ತ ಜೀವ ತಾವಾಗಿರುವಾಗ ಇನ್ನೇನು ಇದ್ದೂದು ಇನ್ನೇನೂ.

ಗಾರಸಿದ್ಮಾವ ಮೊಕದಿಂದ್ಲೆ ಬೆವುರು ಜಲ್ವ ಒಂದು ಬೊಗಸ್ವ ಬಳ್ದು ತಗ್ದು ಏನಂದ:

"ಅಯ್ ಕೇಳೀ ಬಡ್ಡೆತ್ತವೇ... ನಂ ಚನ್ನ ಈಗ ಆ ತ್ರಿ ಇಸ್ಟಾರ್ ಹೋಟ್ಲ ಬುಟ್‌ಬುಟ್ನಂತಕನ. ಚನ್ನರಸ ಅಂತ ತಾನಿಯಪ್ಪ ಅವ ಹೆಸ್ರ ಚೇಂಜ್ ಮಾಡ್ಕಂಡಿದ್ದೂದು? ಅದ್ಕ ಆ ಬೊಂಬಾಯ್‌ದೊರ, ಚನ್ನರಸ ಅಂದ್ರ ಓಹೋ ತಂ ಜಾತಿಯವ್ನೆ ಇರ್ಬೇಕು ಅಂದ್ಕಬುಟ್ಟು ಆಮ್ಯಾಲ ನಂ ಚನ್ನನ ಚಂದ್ಕಿಯ

ಸೋತ್ಬುಟ್ಟು 'ಈ ಚಣದಿಂದ್ಲೆ ನಮ್ಮತಪ್ಕೆ ಕೆಲ್ಸಕ ಬಂದ್ಬುಡಯ್ಯ' ಅಂದ್ನಂತ..."

ಅಲ್ಲಾ ಅಂತನ್ನವರು ಅಲ್ಲಿ ಯಾರು ತಾನೇ ಯಾರೂ. ಆ ದೇಹದರಿವು ಇಲ್ಲದ ಆ ಜೀವ್ಗಳು ಕೇಳ ಕಿವಿಯಾದ್ವು:

"ಕೆಲ್ಸ ಅಂದ್ರ ನಂ ಥರ್ದ ಕೆಲ್ಸ ಅಂದ್ಕಂಡರೀಕಾ ಎಡ್ಡ ಬಡ್ಡೆತ್ತವ! ಎಸ್ಟೇ ಆದ್ರೂ ಹಳ್ಳಿಗಮಾರ್‌ಗಳು ನೀವೂ... ಒಂದು ಊರ್ನಾರು ನೋಡಿದ್ದೀರಾ? ಹೋಗ್ಲಿ ಒಂದು ಕೇರಿನಾರೂ ನೋಡಿದ್ದೀರಾ? ನಂ ಚನ್ನ ಇರಾ ಕೆಲ್ಸ ಎಂತದು ಅಂತಾ ಗೊತ್ರಯ್ಯಾ ನಿಮ್ಗಾ?"

ಗೊತ್ತು ಯಾರ್ಗ ತಾನೀಯಾ ಗೊತ್ತು?

"ಆ ಬೊಂಬಾಯ್‌ದೊರ ಅವ್ನಲ್ಲಾ, ಅವ ವಾರಕ್ಕ ಒಂದ್ಸಲ ಮಾತ್ರ ದರ್ಬಾರ್ ನಡ್ಸದು. ಆ ದರ್ಬಾರ್ ನಡೆಯೋ ಟೇಮ್ಗ ನಂ ಚನ್ನ ಸುಂಗಾರ ಮಾಡ್ಕಂಡು... ಆ ದರ್ಬಾರ್ಗ ಗತ್ತಾಗಿ ನಡ್ಕಬಂದು ಎಲ್ಲರ್ಗಿಂತ ಮುಂದೆ ಕೂತ್ಗಳುವಂತಾ ಕೆಲ್ಸ. ಆಮ್ಯಾಲ ಕೇಳಿ.... ಆ ದರ್ಬಾರ್ ನಡೆಯಾಗ ಕೆಮ್ಮುಗಿಮ್ಮು ಬರಬಾರ್ದಂತಕಯ್ಯೋ ಕೇಳ್ಕಳ್ಳಿ! ಅದ್ಬೇರೆ ಕತವಾದ್ದು ಆಮ್ಯಾಕ..."

ಆಲಿಸುತಲಿದ್ದವು ಆ ಜೀವ್ಗಳು ಆ:

"ನಮ್ಮಂಥವರು ಯಾರಾರು ಹೋದ್ರ ಕೆಮ್‌ಬುಟ್ಟು ಪರಾಣ ತಗ್ಸಕಂಡು ತಿರ್ಗ ಹಿಂದ್ಕ ಬರಾ ಮಾತೇ ಇಲ್ಲ ತಿಳ್ಕಳೀ... ಅಂಥ ಕಡ್ದುದೊರ ಅವ್ನು. ಆಯ್ತಾ? ಅಮ್ಯಾಕ ಯಾನಪ್ಪ ಅಂದ್ರಾ... ಆ ದರ್ಬಾರ್ ಮುಗ್ದಾಗ ನಂ ಚನ್ನ ಗತ್ತಾಗಿ ಎದ್ದು ಥಿಕಾವಾಗಿ ನಡೀತಾ ನಗ್ತ ನಗ್ತ ಬರೂವಂಥಾ ಕೆಲ್ಸ..."

ಆ ಜೀವ್ಗಳೂ ನಗುವು ಆದವು, ಆ ಜೀವ್ಗಳು ನಗುವಾಗಿ:

"ತಿಳ್ಕಳೀ ಹಳ್ಳಿಗಮಾರ್ ಬಡ್ಡೆತ್ತವಾ... ಒಂದ್ ದೇಸನಾರೂ ನೋಡ್ದೆ ಇರೋ ಬಡ್ಡೆತ್ತವಾ ಈಗ್ಲಾರೂ ತಿಳ್ಕಳೀ... ಆ ದರ್‍ಬಾರ್‍ಗ ಎಂತೆಂಥವ್ರು ಬತ್ತರ ಗೊತ್ತುಡಾ ನಿಮ್ಗ? ದೇಸ್ ದೇಸ್ದ ರಾಜ್ರೆಲ್ಲ ಬತ್ತರ. ಅಲ್ಲುಗ ಹೋಗೂವುದೇ ಒಂದ್ ದೊಡ್ಡಸ್ತಕಕನಾ. ಅಸ್ಟ್ಯಾಕಾ ಕೇಳೀ... ಆ ನೂರ್‍ನೂರ್‍ನ ರೂಪಾಯ್ ನೋಟ್ಗಳ ಒಲಗ ಹಾಕಿ ಉರ್‍ಸಿ ತಾನಿಯಪ್ಪ ಆ ಇಂದ್ರಗಾಂದಿ ಅನ್ನೌಳು ಟೀ ಕಾಯ್ಸಗಂಡು ಕುಡಿಯೋದು? ಅಂಥವಳೂ ಮುಕ್ಸ ಬಣ್ಣ ಬಳ್ಕಂದೂ ಕಣ್ಣುಗ ಥಳಾರನ್ನೊ ಸೀರ ಉಟ್ಗಂಡೂ ಸುಂಗಾರದಲಿ ಯಾನೇ ಕೆಲ್ಸ ಇದ್ರೂವಿಸ್ಯೆತ ಅತ್ತಗ

ಎಸ್ದುಬುಟ್ಟು ಆ ದರ್‍ಬಾರ್‍ಗ ಮಾತ್ರ ತಪ್ಪಿಸ್ಕಳ್ದಿಯ ಬಂದು ಒಚ್ಕೋರಿ ಮೂಲಾಲಿ ಕೂತ್ಕಂಡಳಂತ. ಕೇಳೀ, ಅವಳ್ನಿಯಸುದ ಅಲ್ಲಿ ನೀ ಯಾರ? ನೀ ಯಾವೂರ? ಅನ್ನೌರು ಇಲ್ವಂತ. ಅಲ್ಲಗ್ಯ ತಿಳ್ಕಳೀ.. ಇನ್ನೆಂಗಿದ್ದಾದು ಅಂತ! ಇನ್ನೆಂಗಿರಬೌದು?"

ಇನ್ನೆಂಗಿರಬಹುದೂ? ಗಾರಸಿದ್ದಾವನ ಈ ದರ್‍ಬಾರು ನಡೆದೂ ನಡೆದೂ
ಆ ದರ್‍ಬಾರ ನುಡಿಗಳೂ ತೂರಾಡ್ತಾ ನಡೆದೂ
ಅವು ಊರ ಕಿಚ್ಚುಹಾಯಿಸೊ ಹಬ್ಬದ
ಸಿನಿಮಾಪದ ಕಿರುಚ್ಗೂ ಮಿಗಿಲಾಗಿ
ಹರಿದಾಡ್ತಾ ಅವು ಆ ಬೀದೀಲಿ ಹೈಕಳು
ಕುಣುದೂ ಕುಪ್ಪಳಿಸೀ ಅವೂ
ಆ ಗತೀಗ ತಕ್ಕಂಥ ಕುಣಿದಾಟ ಹರ್‍ದು ಹರಿಯೂತಾ

* * * *

## ೧೮ ಅದು ಕುಸುಮಾಳು ಇದ್ದಲ್ಲಿಗೂ ಬಂತು

ಅದು ಕುಸುಮಾಳು ಇದ್ದಲ್ಲಿಗೂ ಬಂತು.
ಅಲ್ಲಿ ಹಗಲೂ ರಾತ್ರೀಯ ಪರಿವಿಲ್ಲದ
ಅವಳ ಕಂದಮ್ಮನು
ಕಣ್ಣರಳಿಸಿಕೊಂಡು
ಕಾಕುಹಾಕ್ತ
ಕಯ್ಯುಕಾಲು ಮೇಲೂ ಕೆಳುಗ ಆಡುಸ್ತ
ಆಡುತ್ತಿದ್ದರ
ಅದರವ್ವ ತನ್ನ ಪರಿವಿಲ್ಲದೆ
ನೋಡಿದ್ದ ನೋಡ್ತ ಕೂತಿದ್ದಳು.
ಹಣೆತುಂಬವು ಇದ್ದ ಅವಳ ಹನಿಬೆವುರು
ಆಗಾಗ ಒಡೆದು ಮೊಕದಿಂದ ಕೆಳಗಿಳಿಯುತಾ
ಆ ತ್ಯಾವಕ್ಕ
ಅವಳ ಕೂದಲೂ ಆ ಮೊಕಕೆಲ್ಲ ಅಂಟುಕೊಂಡು
ಅಲ್ಲಾಡದಿತ್ತು!
ಆ ಕೂಸು ಆಡುವ ಚೋದ್ಯವ
ನೋಡ್ತಾ
ಕುಸುಮಾಳ
ತಮ್ಮನಾಗಿದ್ದ ಹನ್ನೇಡು ವರುಷಾದ ಪರ್ಸಾದ
ಕೂತಿತ್ತು.
ದೇವಮಾನವರಂತೆ ರೆಪ್ಪೆ ಮಿಟುಕಿಸದ
ಆ ಬೆರುಗು ಕಣ್ಗಳ ಒಳಕ್ಕ...

ಅಕ್ಕ ಕುಸುಮಾಳ ಕಣ್ಗಳ ಜಲವು ಹರಿಯೂತ
ಹರಿಯುತ್ತಿದ್ದುದೂ ಪರ್ಸಾದನ ಕಣ್ಗಳಲಿ ಬೆರಗು ಹೆಚ್ಚಾಗ್ತ

ಹೆಚ್ಚುತಲಿದ್ದುದೂ
'ಆ ದೂರದಿಂದ ಬಂದಂಥ
ಸುಂದರಾಂಗ ಜಾಣ... ನಾ ಕಾಣೆ' ಹಾಡು
ಹಾಡ್ತ ಹಾಡುತ್ತಿದ್ದುದೂ
ಈ ಅಳೋ ಅಕ್ಕಾನ ನಗುಸಾಲು
ಪರ್‍ಸಾದ ಆ ಹಾಡ್ಗ ತಕ್ಕಾಗಿ ಕುಣ್ತ ಕುಣಿಯುತ್ತಿದ್ದುದೂ
ಕುಣೀತಾ
ಆ ಕುಸುಮಾಳ ಜಲದುಂಬ್ದ ಎದೆ ಕಳಸ್ವ
ಯಾರಕನಿ ತಗದು ಎತ್ತಿ ಗಕ್ಕನೆತ್ತಿಟ್ಟಂತಾಗಿ...

ಆಗ ಕುಸುಮಾಳ ಕಣ್ಗಳ ಜಲವು ನಿಂತೀತಲ್ಲಾ
ಆಗ ಆ ಕೆನ್ನೇಲಿದ್ದ ಜಲವು ಆ ಕೆನ್ನೇಲಿ ಇಂಗೀತಲ್ಲಾ
ಆಗ ಅರಗಣ್ಣು ಮಾಡ್ದ ಕುಸುಮಾಳು ವಾಲಾಡಿಯೇ ವಾಲಾಡ್ತಾ
ಆಗ ಅವಳ ಮಾರುದ್ದ ಕೂದಾಲೂ ಅವ್ಳ ತಲಸುತ್ತಾ ವಾಲಾಡ್ತಾ

ಊರು ಸುತ್ತೀನಾ ಮಾಂತ್ರಿಕರು ಓಡೋಡಿ
ಬಂದರೊ ಎಂಟ್ಜನಾ
ಅವ್ರು ನಾಗಬೆತ್ತದಲಿ ಹೊಡೆದಾಗ
ಮುರೀತಲ್ಲೋ ಆ ನಾಗಬೆತ್ತಾವು
ಅವ್ರು ಹಸೀಬಾಣ್ತಿ ಕೂದುಲ್ನಾಗ
ಮುಷ್ಟೀಲೀ ಹಿಡಿಯಾಲೂ–
ಆ ಹಿಡಿ ಮುಷ್ಟೀಗ
ಎಂಟು ಹಿಡಿ ಕೂದೂಲಾಗ ಕಿತ್ತುಬಂದೂ
ಆ ಗಾಳಿ ಮಾತೀನ ಅರುತಾವು ಅವುರ್ಗ ಸಿಕ್ಕಾದೆ ಮುಂದೂಕಾ

ಕೊಳ್ಳೇಗಾಲದ ಮಾಂತ್ರಿಕರು ಓಡೋಡಿ
ಬಂದರೊ ಎಂಟ್ಜನಾ
ಅವ್ರು ನಾಗಬೆತ್ತದಲಿ ಹೊಡೆದಾಗ
ಮುರೀತಲ್ಲೋ ಆ ನಾಗಬೆತ್ತಾವು

ಅವ್ರು ಹಸೀಬಾಣ್ತಿ ಕೂದೂಲ್ನಾಗ–
ಮುಷ್ಟೀಲೀ ಹಿಡಿಯಾಲೂ–
ಆ ಹಿಡಿ ಮುಷ್ಟೀಗ
ಹದ್ನಾರು ಹಿಡಿ ಕೂದೂಲಾಗ ಕಿತ್ತುಬಂದೂ
ಆ ಗಾಳಿಮಾತೀನ ಅರುತಾವು ಅವುರ್‍ಗ ಸಿಕ್ಕಾದೆ ಮುಂದೂಕಾ

ಮಲೆಯಾಳದ ಮಾಂತ್ರಿಕರು ಓಡೋಡಿ
ಬಂದರೊ ಎಂಟ್ಜನಾ
ಅವ್ರು ನಾಗಬೆತ್ತದಲಿ ಹೊಡೆದಾಗ
ಮುರೀತಲ್ಲೋ ಆ ನಾಗಬೆತ್ತಾವು
ಅವ್ರು ಹಸೀಬಾಣ್ತಿ ಕೂದೂಲ್ನಾಗ
ಮುಷ್ಟೀಲಿ ಹಿಡಿಯಾಲೂ–
ಆ ಹಿಡಿ ಮುಷ್ಟೀಗ
ಮೂವತ್ತೆರಡು ಹಿಡಿ ಕೂದೂಲಾಗ ಕಿತ್ತೂ ಬಂದೂ
ಆ ಗಾಳಿ ಮಾತೀನ ಅರುತಾವು ಅವುರ್‍ಗ ಸಿಕ್ಕಾದೆ ಮುಂದೂಕಾ

ದೇಸ್ ದೇಸ್ದ ಮಾಂತ್ರಿಕರು ಓಡೋಡಿ
ಬಂದರೊ ಎಂಟ್ಜನಾ
ಬಂದವರ್‍ಗ ಕೂದೂಲು ಇಲ್ಲದ ಕುಸುಮಾಳ ತಲ್ವ ಕಂಡೂ
ಕೈ ಕಟ್ಟೀತಲ್ಲೋ
ಬಂದವರ್‍ಗ ಕುಸುಮಾಳ ಗಾಳಿಮಾತೀನ ಅರುತಾವು ಸಿಕ್ಕಾದೇ
ಬಾಯ್ ಕಟ್ಟೀತಲ್ಲೋ
ಆ ಓದಿಲ್ಲದ ಕುಸುಮಾಳು 'I want to be in my home'
ಅಂತಾಳಲ್ಲೋ

* * * *

# ೧೯ ಅಂತಿರುವಾಗ ಕುಸುಮಾಳು

ಅಂತಿರುವಾಗ ಕುಸುಮಾಳು,

ಕಿಚ್ಚು ಹಾಯಿಸೋ ಹಬ್ಬದ
ಸುಣ್ಣಬಣ್ಣವ ಕಾಣದ
ಆ ಬಾಗಲುಗಂಟಿದ ಚನ್ನನ ಅವ್ವನು
ಗಂಡನನ್ನು ದಿಟ್ಟುಸ್ತಾ
ಆ ಗಂಡನು ಕೂತಿರುವಲ್ಲಿ
ಕೂತಿದ್ದನು.
ಸಾಕಾಗಿ, ಚನ್ನನ ಅವ್ವ "ಯಾನ?" ಅಂದಳು
ಯಾನ ಎಂಬಂತೆ ಚೆನ್ನನ ಅಪ್ಪ ನೋಡಿದನು
ಚೆನ್ನನ ಅವ್ವ "ಬನ್ನಿ ವಸ್ಯ" ಅಂದಳು
ಚನ್ನನ ಅಪ್ಪ ಕೂತಲ್ಲಿಂದ ಏಳದವನು
"ಅದ್ಯಾಕ ಅಲ್ಲಿಂದ್ಲೆ ಹೇಳುದ್ರ
ಕೇಳ್ಸಲ್ವ ನಂಗ?" ಅಂದನು.
ಅದುಕ
ಚನ್ನನ ಅವ್ವ "ಅದಿಯಾ, ಎಲ್ರೂ ಅಂತಾರಲ್ಲಾ...
ನಾವೂ ಒಂಜಿನ ಹೋಗಿ
ವಸಿ ನೋಡ್ಕಂದಾರೂ ಬರಾವು..." ಅಂದಳು

ಅದುಕ ಚೆನ್ನನ ಅಪ್ಪ
ಕೆಮ್ಮಲ್ಲಿ ನೆಗಾಡ್ತ ಮಾತಾಡಿದನು–

"ಅಯ್ಯೋ ಪೆಚ್ಚೀ... ಬೊಂಬಾಯಿ ಅಂದ್ರ
ಯಾನಂದ್ಕಂಡಿದ್ದೀಯ ನೀನು?

ಸುಮ್ನೆ ಕೂತನ ಇವ
ಯಾನ್ನೂ ಇಚಾರ್ಸಿಲ್ಲ ಅಂದ್ಕಬುಟ್ಯ?
ತಿಳ್ಕಾ... ಆ ಬೊಂಬಾಯ್ನ ಆಚ್ಗ
ಇರೋದೆಲ್ಲಾ ಬರೇ ನೀರಂತಕನ.
ಈ ನೆಲ ಅನ್ನೊ ಪದವು
ಮೂರ್‍ಕಾಸ್ನ ಅಗಲಕೂ ಇಲ್ವಂತಕನ.
ಅಲ್ಲುಗ ಹೋದವರು
ಯಾನಾರೂ ತಪ್ಪುಸ್ಕಂಡ್ರಂತು
ಹರಿಹರಬ್ರಮ್ಮನಗೂ ಮುಕ್ಷ
ಹಿಂದ್ಕ ಅವರ ಊರ್‍ಗ ತಲ್ಪುಕ
ಆಗ್ದಂಥಾ ಊರಂತ ಅದೂ!
ಇನ್ನು ನಮ್ಮಂಥವರ್‍ಗ ಆದೂದ?
ಅಯ್ಯೋ ಅದ್ರ ಕಥ್ಯ ನಾ ಯಾನೇಳ್ಳೀ ತಕ್ಕಾ...!"

"ಅದಿಯಾ ಆ ದೊರ ದರ್‍ಬಾರ್‍ನ ಗೇಟ್ನತಪು
ಒಂದು ವಾರ್‍ಗ್ಗಂಟ ಕಾಯ್ಕಂಡಿರದು.
ಹೆಂಗುವಿ ಚಾಕ್ರಿ ಮಾಡಕ
ಅಲ್ಲಿಗ ಬತ್ತಾನಲ್ಲ ಹೆಂಗೂವಿ..."

"ಅಯ್ಯಯ್ಯೋ ಪೆಚ್ಚೀ...
ಹೋಗಾಕ ಒಂದು ಪಕ್ಷ ನಿಚ್ಚಯ್ಸಕಂಡ್ವಿ ಅಂತಾನೇ ಅಂದ್ಕ–
ಅಲ್ಲಿಗೇನಾರ ನಡ್ಕಂಡು
ಹೋಗತರನಾರೂ ಇದ್ದೂದ?
ರೈಲ್‍ಗಿಯ ಹೋಗಾಕ್ ಮೂರ್‍ಜಿನಾ
ಬರಾಕ್ ಮೂರ್‍ಜಿನ ತಕ್ಕಂದದಂತಲ್ಲಾ!
ಆಮ್ಯಾಲ ಒಂದ್ ತಲ್ಗ ನೂರ್ ರೂಪಾಯ್ ಬಿದ್ದದಂತಲ್ಲಾ!
ಎಸ್ಟು ಬೇಕಾದ್ದೂ...
ಅದ ನೀನೇ ಲೆಕ್ಕ ಹಾಕ್ಕ..."

"ಅದಿಯಾ
ಇನ್ನೊಂದು ಗಂಡ್ನೂ
ಜೀತ್ಕ ಇರುಸ್‌ಬುಡಾವು
ಹೊಲ್ವ ಭೋಗ್ಯಕ್ಕ ಹಾಕ್ ಬುಡಾವು..."

"ಅಯ್ಯೊ ಪೆಚ್‌ಬಡ್ಡೀ,
ಅಸ್ಟಾದ್ರೂ ಸಾಕಾಯ್ತದ ಅಂದ್ಕಬುಟ್ಯ
ಆಯ್ತೂ–
ನಿನ್ ಮಾತ್ನ ಪರಕಾರವಾಗಿ
ಕಾಸಿದ್ದವರ ಕಾಲ್ಕಟ್ಗಂಡು
ಸಾಲ್ವೊ ಸೋಲ್ವೊ ಮಾಡ್ಕಂಡೂ
ಅವುನ್ನ ನೋಡ್ದು ಅಂತ್ಲೇನೇ ಇಟ್ಗ!
ನಂ ನೋಡ್ದೇಟ್ಗೆ
ಆ ಕಡ್ದು ದೊರ
ಓಹೊ ಈ ಚನ್ನ ಹೊಲಾರವ್ನು ಅಂತ ತಿಳ್ಕಂಡು
ನಂ ಕೂಸಿನ ತಲ ಕಡ್ದು
ಆ ಊರಾಚ್ಗೆಲ್ಲಾ ಇರಾದು ಬರೀ ನೀರಂತಲ್ಲಾ...
ಅಲ್ಲಿಗ ಎಸೀಸ್‌ಬುಟ್ರ
ನೀನೂವಿ ನಾನೂವಿ ಅಲ್ಲಿ
ಏನ್ ತಾನೆ ಮಾಡಾಗಿದ್ದವು?"

"ಅವ್ವೆ, ನಾವು
ಆ ದೊರ ಕಂಡೇಟ್ಗಿಯ ಅಡ್‌ಬಿದ್ದೂ–
'ನೀವು ಚಾಕ್ರಿಗ ತಕ್ಕಂಡಿರೊ
ಚನ್ನರಸಪ್ನೋರ ಹಟ್ಟೀ ಜೀತಗಾರ್ರು ಸೋಮಿ ನಾವೂ...
ಸುಮ್ನಿಯ ಇತ್ತಗ ಬಂದಿದ್ವಿ ಅಳೀ...' ಅನ್ನವು.
ಆಮ್ಯಾಕೂ ಯಾನಾರೂ ಕೇಳೂದ್ರ...
'ಈ ಚನ್ನರಸಪ್ನೋರ್ದು
ಊರ್ಲುವಿ ದೊಡ್ಡ ವಹಿವಾಟಿಯ ಅಳಿ!

ಅವುರ್ದೊಂದು ಅಂಗಡಿ
ಊರ್ಲಾದ ನೋಡೀ...
ಅದ ಈ ಏಡು ನೇತ್ರಗಳಿಂದಲೂ
ನೋಡಕ ಆಗಲ್ಲ ಅಳೀ
ಅದೂ ಮೂರಾಳು ಉದ್ದಾ ಅಗಲಾ!
ಅಲ್ಲೀ ಜೋಳ್ಯಂತ ರಾಗ್ಯಂತ ಅಕ್ಯಂತ
ಆ ಉಪ್ಪಿಟ್ನ ರವ್ಯಂತ
ಅಂತಾ ಕಣ್ನುಗ ಬೇಕ್‌ಬೇಕಾದ್ದೂ ಕೇಳೀ
ಆ ಬೆಲ್ಲ ಟೀಸೊಪ್ಪು ಕಾಪಿಪುಡೀ
ಮೂಟ್‌ಮೂಟ ಬಿದ್ದವ ಅಳೀ ಅವ್ವವ್ವಾ!
ಒಂದಾ ಎರಡಾ...' ಅನ್ನವು.
ಅದೇ ನಾವು ತಿರ್ಗ ಊರ್ಗ ಬರ್ವಾಗ
ಚನ್ನ ಸುಮ್ನೆ ಅಸ್ಟುದೂರ ಬಂದವ್ನ ಥರ ಮಾಡಿ
ಬೆರಳ ಸಂದೀಲಿ ಸಿಕ್ಕಿಸಿಕಂಡಿದ್ದು–
'ಅವ್ವೆ ತಕ್ಕಾ... ನೂರ್ ರೂಪಾಯ್ನಿಗ'
ಅಂತ ಕೊಡಲಾರ್‍ನ...?"

"ಅಯ್ಯಯ್ಯೋ ಪೆಚ್‌ಬಡ್ಡೀ ಕೇಳೂ...
ನಿನ್ ಮಾತ್ ಕಟ್ಗಂಡೂ
ಯಾನೋ ಮಾಡಕ ಅಂತ ಹೋಗೀ
ಇನ್ನೇನೋ ಆದೂದು ಸುಮ್ಕಿರೂ.
ನಮ್ಮ ಆ ಕ್ರಿಯಾ ಒಂದು ಸುದ್ದ ಇದ್ದರ
ಒಂದಲ್ಲಾ ಒಂಜಿನ ಅವ್ನೇ ಬತ್ತನಕನಾ,
ಸಾಸ್ತ್ರ ಹೇಳೌವ್ನ ರೂಪ್ದಲಿ ಬರಬೌದೂ...
ದಾಸಯ್ಯನ ರೂಪ್ದಲಿ ಬರಬೌದು...
ಮಾಟ ಮಂತ್ರದವ್ನ ರೂಪ್ದಲಿ ಬರಬೌದೂ..."

"ಯಾವ್ ರೂಪ್ದಲ್ಲಾರೂ ಆಗ್ಲಿಕನಾ...
ಯಾವತ್ತಾರೂ...

ಒಂಜಿನಾರೂ...
ಬಂದನಾ...?”

“ಬರ್ದೆ? ಸಂಬಂಜ ಅನ್ನೋದು ದೊಡ್ಡದುಕನಾ...”

* * * *

# ಉಪಸಂಹಾರ

ಈ ರಾತ್ರಗಳೂ ಬಂದ್ವೂ. ಆ ರಾತ್ರಗಳೂ ಹೋದ್ವೂ. ಈ ಹಗಲೂಗಳೂ ಬಂದ್ವೂ
ಆ ಹಗಲೂಗಳೂ ಹೋದ್ವೂ. ಅವೂ ಹೋಯ್ತಾ ಬತ್ತಾ ಅವೂ.

ಆ ಸೊಪ್ಪೂಸೊದ್ವ ಮಾರ್ತ ಈ ಹೊಟ್ಟಯಾಪ್ತೀ ಮಾಡ್ವಂಥಾ
ಆ ತೊರಾರ ಹಣ್ಣಣ್ಣು ಮುದುಕೀ ಅವಳ ಹೆಸರೋ ಸಿಂಗಾರಮ್ಮಾ
ಆ ಏಳಾದೇ ಕುಳಿತಿಹಳೂ ಚೆನ್ನಕುಸುಮಾರು ಕೂಡುವ ತಳ
ಅದುವು
ಆ ಸಿಂಗಾರಮ್ಮನ ಕಣ್ಮುಂದಾದುದು ಅವುಳ ಕಣ್ಮುಂದ ಇದೆಯಲ್ಲಾ
ಆ ಅಲ್ಲಿ ಚನ್ನಾನ ಉಸೂರನ್ನು ಅವುನ ದೇಹದಿಂದಲಿ ತಗುದರಲ್ಲಾ
ಆ ರಾತ್ರ ತಗೂದ ಬಾಗೂಲೂವು ಆ ತಗುದಂತಲೇ ಇದೆಯಲ್ಲಾ

ಆ ಮಂಡಿಮ್ಯಾಲ ನರ್ದಕಯ್ಯ ಇಳಿಬುಟ್ಟೂ ಆ ಸಿಂಗಾರಮ್ಮಾ
ಆ ನರದಿಂದ ಮಾಡ್ದ ಅವುಳ ದೇಹಾವು ಆ ನರವಾಗಿ ಒಡಮೂಡೀ
ಆ ನಿಟ್ಟುಸುರೋ ಸಿಂಗಾರಮ್ಮನೋ ಆ ಸುತ್ತಾಲು ನೋಡಾಲೂ

ಆ ಭೂಮತಾಯ ಮ್ಯಾಲ ಕಂಡಿದ್ದೇನೂ? ರಗುತಾದ ಒಂದು ತೊಟ್ಟೂ
ಆ ಬೆಡುಗೀರು ಇಟ್ಗಳೊ ಒಂದಿಂಕ್ರ ಆ ಹಣೆಬಟ್ಟೂ...

ಆ ಆಗ ಅವುಳು ತಗುದೂದು ಸೊಂಟಾದ ಸುಣ್ಣಾದ ಡಬ್ಬೀಯೂ
ಆ ಆಗ ಈ ಎಡಗೈ ಹೆಬ್ಬೆಟ್ಗ ಸುಣ್ವ ಹಚ್ಕಂಡೂ ಆ ಸಿಂಗಾರಮ್ಮಾ
ಆ ಆಗ ಹಣೆಬಟ್ಟು ರಗುತಾದ ತೊಟ್ನ ಆ ಕಾಣ್ದಂಗ ಮಾಡಿದಳಲ್ಲಾ

ಆ ಆಗ ಅದು ಕಣ್ಬುಟ್ಟ ಕಡೆಗದು ಕಂಡುಬಂದೀತಲ್ಲಾ

ಈ ಈಗ ಇವುಳನ್ನು ಆಗ ಗುರುತಿಲ್ಲದ ಪಟ್ಟಣಕ ತಂದುಬುಟ್ಟಾರಲ್ಲಾ
ಈ ಈಗ ಇವುಳೂಗ ಕಂಡುಬಂದೀತಲ್ಲಾ ಅಲ್ಲೂನು ರಗ್ತಾತ
ಹಣೆಬಟ್ಟೂ
ಈ ಈಗ ಇವುಳನ್ನಾಗ ಆ ದೇವೇಂದ್ರಾಯ್ನ ಪಟ್ಟಣಕ
ತಂದುಬುಟ್ಟಾರಲ್ಲಾ
ಈ ಈಗ

* * * *